ಪ್ರೊ. ಸಾ.ಕೃ.ರಾ. - ಸಮಗ್ರ ಸಾಹಿತ್ಯ - ೯

ವೇದದಲ್ಲಿನ ಕಥೆಗಳು

ವಿದ್ಯಾಲಂಕಾರ
ಪ್ರೊ. ಸಾ. ಕೃ. ರಾಮಚಂದ್ರ ರಾವ್

ಸುರಮಾ ಪ್ರಕಾಶನ
ಬೆಂಗಳೂರು-11

ವೇದದಲ್ಲಿನ ಕಥೆಗಳು

ಲೇಖಕರು :
ವಿದ್ಯಾಲಂಕಾರ
ಪ್ರೊ. ಎಸ್. ಕೆ. ರಾಮಚಂದ್ರರಾವ್

ಸುರಮಾ ಪ್ರಕಾಶನ
ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ
ಬೆಂಗಳೂರು-560 011

Vedadallina Kathegalu - written by
Prof. S. K. Ramachandra Rao, Published by Dr. S. R. Sudarshan for Surama Prakashana, the publication wing of Prof. S. K. Ramachandra Rao Memorial Trust (R.), 305, 6th Cross, 1st Block, Jayanagar, Bangalore-560 011. Ph.: 080-26563957

Pages : viii + 90 = 98

© The Prof. S.K. Ramachandra Rao Memorial Trust (R)

First Edition : 2009

Price : **Rs. 60/-**

Composed at :
Sree Lakshmi Enterprises,
#1052, 50 Ft. Rd., 1st Stage,
Kumaraswamy L/o, Bangalore-78.
Ph.: 64555684

Printed at :
Vagartha

ISBN : 978-81-906740-8-9

ಅನುಕ್ರಮಣಿಕೆ

ಲೇಖಕರ ಪರಿಚಯ

ಮುನ್ನುಡಿ

- ಸರಮೆಯ ಸಾಹಸ ೧
- ಅರಿವಾಗಲು ಓದಿದರೆ ಸಾಲದು ೧೩
- ಅಪ್ಸರೆಯೂ ಅರಸನೂ ೧೯
- ಅಪಾಲೆಯ ಉಪಾಯ ೨೮
- ಹೆಂಗಳೆಯಿಂದ ಮಂಗಳ ೩೬
- ಸತೀಮಣಿಯಾದ ಸುಕನ್ಯೆ ೪೨
- ಸೋಮ ಭೂಮಿಗೆ ಬಂದದ್ದು ೫೦
- ಸೂರ್ಯನ ಮಗಳ ಮದುವೆ ೫೫
- ಹೆಣ್ಣಿನ ಹಂಬಲದಿಂದ ಋಷಿಯಾದವನು ೬೨
- ಇಂದ್ರ ನಮುಚಿಯನ್ನು ಕೊಂದದ್ದು ೬೮
- ಅನ್ನದೇವರ ಹಿರಿಮೆ ೭೬
- ಮಂತ್ರದ ಮಹಿಮೆ ೮೩

ಲೇಖಕರ ಪರಿಚಯ



ಪ್ರೊ. ಸಾ. ಕೃ. ರಾಮಚಂದ್ರರಾಯರು (೧೯೨೫-೨೦೦೬) ಈ ತಲೆಮಾರಿನ ವಿಖ್ಯಾತ ವಿದ್ವಾಂಸರು, ಚಿಂತಕರು, ಸಂಗೀತಜ್ಞರು, ಕಲಾಕಾರರು, ಪ್ರಬಂಧಕಾರರು, ಉತ್ತಮ ವಾಗ್ಮಿಗಳಾಗಿದ್ದರು.

ಅವರು ಬಾಲ್ಯ ವಿದ್ಯಾಭ್ಯಾಸವನ್ನು ಅವರ ತೀರ್ಥರೂಪರವರಿಂದಲೇ ಪಡೆದು, ನಂಜನಗೂಡಿನ ಪಾಠಶಾಲೆಯಲ್ಲಿ ಸಂಸ್ಕೃತಾಧ್ಯಯನ ಮಾಡಿ, ಮೈಸೂರಿನಲ್ಲಿ ಮಹಾವಿದ್ವಾನ್ ಪಾಲಕ್ಕಾಡು ನಾರಾಯಣ ಶಾಸ್ತ್ರಿಗಳಲ್ಲಿ ಸಭಾಷ್ಯ ಪ್ರಸ್ಥಾನತ್ರಯಗಳನ್ನು ಅಭ್ಯಾಸ ಮಾಡಿದ್ದರು. ಅನಂತರ ಮನಃಶಾಸ್ತ್ರ

ದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ವೃತ್ತಿ ಪ್ರಾರಂಭಿಸಿದ್ದರು. ಅನಂತರ NIMHANSನಲ್ಲಿ ಮನಃಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಹಲವು ಕಾಲ ಇದ್ದರು.

ಅವರು ಭಾರತೀಯ ಇತಿಹಾಸ, ಸಾಹಿತ್ಯ, ಸಂಸ್ಕೃತಿ, ಸಂಗೀತ ಮತ್ತು ಕಲೆಗಳ ಅಧ್ಯಯನ ಮಾಡಿ ಸಿಂಹಳದ ನಾರದ ಮಹಾಥೇರರ ಬಳಿ ಪಾಳಿ ಮತ್ತು ತ್ರಿಪಿಟಿಕಗಳನ್ನು, ವಿಜಯಸೂರಿ ಗಣಿಯವರಲ್ಲಿ ಅರ್ಧಮಾಗಧೀ ಪ್ರಾಕೃತವನ್ನೂ ಮತ್ತು ಸ್ವಪರಿಶ್ರಮದಿಂದ ಟಿಬೆಟ್ ಭಾಷೆಯನ್ನು ಕಲಿತರು. ರಾಯರು ಕೆಲಕಾಲ ಅಮೆರಿಕೆಯ ಪೆಸಿಫಿಕ್ ವಿಶ್ವವಿದ್ಯಾಲಯದ ಭಾರತೀಯ ಸಂಸ್ಕೃತಿ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದರು.

ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪಡೆದು, ಅನೇಕ ಅಕಾಡೆಮಿ ಮತ್ತು ವಿದ್ವತ್ ಸಂಸ್ಥೆಗಳ, ಆಗಮ ಮಹಾಮಂಡಳಿ ಮತ್ತು ಇತರ ಸಂಸ್ಥೆಗಳ ಪದಾಧಿಕಾರಿಗಳಾಗಿದ್ದರು.

ರಾಯರು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ನೂರೈವತ್ತಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದರು. ಅವರ 'ಮೂರ್ತಿಶಿಲ್ಪ-ನೆಲೆ-ಹಿನ್ನೆಲೆ' ಮತ್ತು 'ತಿರುಪತಿ ತಿಮ್ಮಪ್ಪ' ಎಂಬ ಪುಸ್ತಕಗಳು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದವು.

ವಿದ್ಯಾಲಂಕಾರ, ಶಾಸ್ತ್ರಚೂಡಾಮಣಿ, ಸಂಗೀತ ಕಲಾರತ್ನ, ವಾಚಸ್ಪತಿ ಮೊದಲಾದ ಬಿರುದುಗಳಿಗೆ ಭಾಜಿಯಾಗಿದ್ದರು. ವೇದ ಸಮ್ಮಾನ ಪ್ರಶಸ್ತಿಗೂ ಪಾತ್ರರಾಗಿದ್ದರು. ಅವರು ಸಾಂಪ್ರದಾಯಿಕ ವ್ಯಾಖ್ಯಾನರೀತ್ಯಾ ಋಗ್ವೇದ ದರ್ಶನವೆಂಬ ಬೃಹತ್ ಯೋಜನೆಯೊಂದನ್ನು ಕೈಗೊಂಡು, ಹದಿನೇಳು ಸಂಪುಟಗಳನ್ನು ರಚಿಸಿದ್ದರು.

ಮುನ್ನುಡಿ

ಪ್ರೊ. ಸಾ. ಕೃ. ರಾಮಚಂದ್ರರಾಯರು ಜುಲೈ ೧೯೯೭ರಿಂದ ಜೂನ್ ೧೯೯೮ರವರೆಗೆ ಹನ್ನೆರಡು ಕಥೆಗಳನ್ನು ಮಲ್ಲಿಗೆ ಮಾಸ ಪತ್ರಿಕೆಗೆ ಬರೆದರು. ನಮ್ಮ ಸ್ಮಾರಕ ನಿಧಿಯಿಂದ ಈ ಕಥೆಗಳನ್ನು ಪುಸ್ತಕ ರೂಪದಲ್ಲಿ ತರುತ್ತಿದ್ದೇವೆ.

ಈ ಕಥೆಗಳ ಪ್ರತಿಯನ್ನು ನಮಗೆ ಒದಗಿಸಿದ ಮಲ್ಲಿಗೆಯ ಶ್ರೀ ಶ್ರೀಧರಮೂರ್ತಿಯವರಿಗೆ ನಾವು ಆಭಾರಿಗಳಾಗಿದ್ದೇವೆ. ಈ ಪುಸ್ತಕದ ಅಕ್ಷರ ಜೋಡಣೆಯನ್ನು ಮಾಡಿದ ಶ್ರೀಮತಿ ವಸಂತಲಕ್ಷ್ಮೀರವರಿಗೆ ಮತ್ತು ಅಂದವಾಗಿ ಮುದ್ರಿಸಿದ ವಾಗರ್ಥರವರಿಗೆ ವಂದನೆಗಳನ್ನು ಅರ್ಪಿಸುತ್ತೇವೆ.

ಕಾರ್ತಿಕ ಬಹುಳ ಸಪ್ತಮಿ (ಡಾ। ಸ. ರಾ. ಸುದರ್ಶನ)

ವಿರೋಧಿ ನಾಮ ಸಂವತ್ಸರ

೦೯.೧೧.೨೦೦೯

ಸರಮೆಯ ಸಾಹಸ

[ನಮ್ಮ ಸಂಸ್ಕೃತಿಯ ಮೂಲಸ್ತರದಲ್ಲೇ ಎಂದರೆ ಹತ್ತುಸಾವಿರ ವರ್ಷಗಳಷ್ಟು ಹಿಂದೆಯೇ, ಕಾಣಿಸಿಕೊಂಡದ್ದು ಋಗ್ವೇದ. ಇದು ಮುಖ್ಯವಾಗಿ ಕಾವ್ಯಗ್ರಂಥ. ಅಧ್ಯಾತ್ಮ, ನೀತಿ, ಸಮಾಜ, ಒಳಿತು, ಕೇಡು, ಪ್ರವೃತ್ತಿ, ನಿವೃತ್ತಿ ಇವೆಲ್ಲ ಪ್ರಾಸಂಗಿಕವಾಗಿ ಬರುವ ವಿವರಗಳು. ಋಷಿಗಳ ಕಾಣ್ಕೆ, ಪ್ರತಿಭೆಗಳ ಅಭಿವ್ಯಕ್ತಿಯಾಗಿ ಮೂಡಿಕೊಂಡ ಮಂತ್ರಗಳಲ್ಲಿ ಹಚ್ಚ ಹೊಸತಾದ ಭಾವಗಳನ್ನೂ, ಭಾವನೆಗಳನ್ನೂ, ಚಿತ್ರ ವಿಚಿತ್ರವಾದ ರೂಪಕಗಳನ್ನೂ, ಸುಂದರ ಪ್ರತಿಮೆಗಳನ್ನೂ, ಮನೋಜ್ಞವಾದ ಮಾತುಗಳಲ್ಲಿ ಕಂಡರಿಸಿರುವುದನ್ನು ಕಾಣುತ್ತೇವೆ.

ಇವುಗಳೊಂದಿಗೆ ಸ್ವಾರಸ್ಯವಾದ, ಪ್ರಬೋಧಕವಾದ, ರೋಚಕವಾದ ಕಥೆಗಳೂ ಸೇರಿಕೊಂಡಿವೆ. ಹಲವು ಸಂವಾದ ರೂಪದಲ್ಲಿವೆ, ಕೆಲವು ಸೂಚ್ಯವಾಗಿವೆ, ಕೆಲವು ಸಂಕೇತಪ್ರಮುಖವಾಗಿವೆ. ಕೆಲವು ಕಾಲ್ಪನಿಕವಾದರೂ, ಹಲವು ದಿಟವಾಗಿ ನಡೆದಿದ್ದಿರಬಹುದಾದ ಸಂಗತಿಗಲನ್ನು ಕಥನರೂಪದಲ್ಲಿ ನಿರೂಪಿಸುತ್ತವೆ. ಆ ಉಗದ ಸಮಾಜ, ಜನರ ಬಯಕೆಗಳು, ಅನಿಸಿಕೆಗಳು, ಪ್ರವೃತ್ತಿಗಳು, ಮೌಲ್ಯಗಳು ನಮ್ಮ ಕಲ್ಪನೆಗೆ ಸಿಸುವಂತಿವೆ.

ಋಗ್ವೇದ ಮಂತ್ರಗಳಲ್ಲಿ ಈ ಎಲ್ಲ ಕಥೆಗಳ ಪೂರ್ಣರೂಪ ದೊರೆಯದಿದ್ದರೂ ಮುಂದಿನ ವೈದಿಕ ಸಾಹಿತ್ಯದಲ್ಲಿ (ಎಂದರೆ ಬ್ರಾಹ್ಮಣ, ಆರಣ್ಯಕ, ಉಪನಿಷತ್ತುಗಳಲ್ಲಿ) ಈ ಕೊರತೆ ನೀಗಿದೆ. ಶತಪತಬ್ರಾಹ್ಮಣ,

ತೈತ್ತಿರೀಯ ಬ್ರಾಹ್ಮಣ, ಐತರೇಯ ಬ್ರಾಹ್ಮಣಗಳಲ್ಲಿ ವಿಶೇಷವಾಗಿ ಈ ಕಥೆಗಳ ಪೂರ್ಣಪಾಠ ಕಾಣಸಿಗುತ್ತದೆ. ಶೌನಕನ ಬೃಹದ್ದೇವತೆ, ಯಾಸ್ಕರ ನಿರುಕ್ತ, ಸಾಯಣರ ಭಾಷ್ಯಗಳೂ ಈ ಕಥೆಗಳ ಪೂರ್ಣರೂಪವನ್ನು ಕಲ್ಪಿಸಿಕೊಳ್ಳಲು ನೆರವಾಗುತ್ತವೆ.]

ಋಗ್ವೇದದ ಹತ್ತನೆಯ ಮಂಡಲದಲ್ಲಿ ಸರಮೆಗೂ, ಪಣಿಜನರಿಗೂ ನಡೆದ ಸಂವಾದ ವಿವರವಾಗಿ ಬಂದಿದೆ. ಬೃಹದ್ದೇವತೆಯಲ್ಲೂ ಕತೆಯ ಮೂಲ ಸಾಮಗ್ರಿ ಕಾಣಸಿಗುತ್ತದೆ. ಇಲ್ಲಿ ಸರಮೆಯು ಇಂದ್ರನ ದಾಸಿಯಾಗಿದ್ದವಳು. ಮುಂದೆ ಇದೇ ಸರಮೆಯನ್ನು 'ದೇವಶುನಿ' ಎಂದರೆ ದೇವತೆಗಳ ನಾಯಿಯೆಂದು ಗುರುತಿಸಿ, ಅದರ ಮಕ್ಕಳನ್ನು ಸಾರಮೇಯಗಳೆಂದು ಕರೆದರು. ಆದರೆ ವೇದವಾಙ್ಮಯದಲ್ಲಿ ನಾಯಿಯೆಂದಾಗ ಹೀನಾಯದ ಧ್ವನಿಯೇನಿಲ್ಲ. ನಾಯಿಯ ಸ್ವಾಮಿಭಕ್ತಿ, ಧೈರ್ಯ, ವಿಶ್ವಾಸಾರ್ಹತೆ, ಕಾರ್ಯತತ್ಪರತೆಗಳನ್ನು ತಿಳಿಸುವ ಸಂಕೇತವಷ್ಟೆ. ವೇದದಲ್ಲಿ ಉಲ್ಲೇಖಕ್ಕೆ ಬರುವ ದೇವತೆಗಳಿಗಾಗಲಿ, ಪ್ರಾಣಿಗಳಿಗಾಗಲಿ ಸ್ವಭಾವವೇ ತಾತ್ಪರ್ಯವಾಗುತ್ತದೆ. ಸೇನೆಯ ಸರದಾರನಾದ ಗರುಡ ಮಾಡಲಾಗದುದನ್ನು ಈ ಹೆಂಗಸು ಮಾಡಿದುದು ಕತೆಯ ಸ್ವಾರಸ್ಯ.

ಪರಾಕ್ರಮಕ್ಕಿಂತ ಹೆಚ್ಚಿನ ಬೆಲೆ ಇರುವುದು ಪ್ರಾಮಾಣಿಕತೆಗೆ

⅄ ⅄ ⅄

ಹತ್ತು ಸಾವಿರ ವರ್ಷಗಳಷ್ಟು ಹಿಂದಿನ ಕತೆ, ಇದರ ಅರ್ಧಮರ್ಧ ಚಿತ್ರ ಋಗ್ವೇದದಲ್ಲಿ ಕಾಣಸಿಗುತ್ತದೆ. ವೇದಕಾಲದ ಜನರು ಹಲವು ಗುಂಪುಗಳಲ್ಲಿ, ಜನಾಂಗಗಳಾಗಿ ಹಿಮಾಲಯದ ತಪ್ಪಲಿನಲ್ಲಿ ಇರುತ್ತಿದ್ದ ಕಾಲ. ಹಿಮಾಲಯದ ಶಿಖರವೊಂದರಲ್ಲಿ ಹುಟ್ಟಿ ಬಯಲಿಗೆ ಹರಿದು ಬಂದ ರಸಾ ಎಂಬ ನದಿಯ ಒಂದು ದಂಡೆಯ ಮೇಲೆ ವಾಸಮಾಡುತ್ತಿದ್ದ

ದೇವಜನರು, ಅದೇ ನದಿಯ ಆಚೆಯ ದಂಡೆಯ ಮೇಲೆ ಇರುತ್ತಿದ್ದ ಪಣಿಜನರು ಇವರ ನಡುವೆ, ನಡೆದ ಹಗರಣ ಕತೆಯ ಮೂಲ ಸಾಮಗ್ರಿ.

ದೇವಜನರು ಮುಖ್ಯವಾಗಿ ಬೇಸಾಯವನ್ನು ಹಿಡಿದವರು ; ದನಕರುಗಳನ್ನು ಸಾಕಿಕೊಂಡವರು. ಬೆಟ್ಟಗಾಡಿನಿಂದ ದೂರವೇ ಮಟ್ಟಸವಾದ ಎಡೆಯಲ್ಲಿ ಇದ್ದವರು. ದನಕರುಗಳೇ ಅವರ ಆಸ್ತಿ ; ಅವುಗಳ ಮೇವಿಗೂ ಹುಲ್ಲುಗಾವಲು ಬೇಕಷ್ಟೆ. ಬಹುಮಟ್ಟಿಗೆ ತಮ್ಮ ಪಾಡಿಗೆ ತಾವಿರುತ್ತ ನೆಮ್ಮದಿಯಾಗಿಯೇ ಇದ್ದರಾದರೂ ಆಗಾಗ ಇತರ ಜನಾಂಗಗಳು ಇವರ ಮೇಲೆರಗಿ ಬೀಳುವುದು, ಅವರೊಂದಿಗೆ ಕಾದಾಡಿ ಅವರನ್ನು ಹೊಡೆದೋಡಿಸುವುದು ನಡೆಯುತ್ತಲೇ ಇದ್ದಿತು. ತಾವಾಗಿ ಯಾರ ಮೇಲೂ ಕೈಯೆತ್ತಿ ಹೋಗುತ್ತಿರಲಿಲ್ಲವಾದರೂ ತಮ್ಮನ್ನು ತಾವು ಕಾಪಿಟ್ಟುಕೊಳ್ಳಲು ಒಂದು ಸೇನೆಯನ್ನು, ಒಂದು ಆಡಳಿತವನ್ನು ಏರ್ಪಡಿಸಿಕೊಂಡಿದ್ದರು. ಅವರ ಒಡೆಯ ಇಂದ್ರನೆಂಬ ವೀರ ; ಅವನ ಹಿಂದೊಂದು ಸೇನೆ, ಮರುತ್ತುಗಳದ್ದು. ಸೇನೆಗೊಬ್ಬ ಸರದಾರ, ಗರುಡನೆಂಬುವನು.

ರಸಾನದಿಯ ಆಚೆಯ ಕಡೆಗಿದ್ದ ಪಣಿಜನರು ವ್ಯಾಪರಿಗಳು, ಮೋಸಗಾರರು. ಅವರು ಬೆಟ್ಟಗುಡ್ಡಗಳಲ್ಲಿಯೇ ಇರುವವರು. ಆಗಾಗ ದನಕರುಗಳನ್ನು ಇತರ ಜನಾಂಗಗಳಿಂದ ಕದ್ದೊಯ್ದು ಬೇರೆಯವರಿಗೆ ಮಾರಿ ಹಣ ಸಂಪಾದಿಸುವುದೇ ಅವರ ವೃತ್ತಿ. ಅವರಿಗೆ ಬೇಸಾಯದ ಮೇಲೇನು ಒಲವಿಲ್ಲ ; ಒಂದೇ ಕಡೆ ತಳವೂರುವವರೂ ಅಲ್ಲ ; ಅಲೆಮಾರಿಗಳು. ಸಭ್ಯತೆಯ ಸೋಂಕೂ ಇಲ್ಲದವರು.

ಒಮ್ಮೆ ರಕ್ಕಸರೆಂಬ ಜನಾಂಗವೊಂದು ದೇವಜನರ ಮೇಲೆರಗಿ ಬೀಳುವಾಗ, ದೇವಜನರೆಲ್ಲರೂ ಹಗರಣದಲ್ಲಿ ತೊಡಗಬೇಕಾಯಿತು. ಈ ಸಮಯವನ್ನು ಸಾಧಿಸಿ ಪಣಿಜನರು ದೇವಜನರ ವಸತಿಗೆ ನುಗ್ಗಿ ಅಲ್ಲಿ ಬೃಹಸ್ಪತಿಯೆಂಬ ಪುರೋಹಿತನ ಬಳಿಯಿದ್ದ ದನಕರುಗಳೆಲ್ಲವನ್ನೂ

ಕದ್ದೊಯ್ದು ಬಿಟ್ಟರು. ಬೃಹಸ್ಪತಿಯು ದೇವಜನರ ನಡುವೆ ಗಣ್ಯನಾಗಿದ್ದವನು ; ಒಡೆಯನಾದ ಇಂದ್ರನು ಅವನನ್ನು ಕೇಳದೆ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ದೇವಜನರಿಗೂ ಇವನ ಮಾರ್ಗದರ್ಶನ ಇರುತ್ತಿದ್ದಿತು. ಹೀಗಾಗಿ ಅವನ ಬಳಿ ಸಂಭಾವನೆಯೆಂದು ಬಂದ ದನಕರುಗಳ ಸಂಪತ್ತು ವಿಪುಲವಾಗಿಯೇ ಇದ್ದಿತು.

ಹಗರಣದಿಂದ ಹಿಂದಿರುಗಿ ಬಂದ ಬೃಹಸ್ಪತಿಯು ತನ್ನ ಆಕಳುಗಳೆಲ್ಲವೂ ಕಳುವಾಗಿದ್ದುದನ್ನು ಕಂಡು, ಒಡನೆಯೇ ಇಂದ್ರನ ಹತ್ತಿರ ದೂರನ್ನು ಒಯ್ದ. "ಏನು ನಿನ್ನ ಒಡೆತನ ? ಯಾರಿಗಾದರೂ ನಿನ್ನನ್ನು ಕಂಡರೆ ಅಂಜಿಕೆಯಿದ್ದೀತೆ ? ನನ್ನಂಥವನ ಸ್ವತ್ತು ಹೀಗೆ ಕಣ್ಮರೆಯಾದರೆ ಬೇರೆಯವರ ಪಾಡೇನು ? ಹಾಡುಹಗಲೇ ಕಳ್ಳರು ನಮ್ಮ ವಸತಿಗೆ ನುಗ್ಗಿ ಸಿಕ್ಕುದನ್ನು ಕೊಂಡೊಯ್ಯಬಹುದೆ ? ಕಳುವಾಗಿರುವ ಆಕಳುಗಳನ್ನು ಹಿಂದಕ್ಕೆ ಪಡೆದುಕೊಂಡು ಕೊಡುವುದು ನಿನ್ನ ಧರ್ಮ, ನಿನ್ನ ಕರ್ತವ್ಯ. ನೀನು ಹಾಗೆ ಮಾಡುವವರೆಗೂ ನಾನು ಊಟ ಮಾಡುವುದಿಲ್ಲ, ನೀರು ಕುಡಿಯುವುದಿಲ್ಲ!" ಎಂದು ಸಿಟ್ಟಿನಿಂದಲೇ ಕೂಗಾಡಿದ.

ಇಂದ್ರನು ಅವನನ್ನು ಸಮಾಧಾನಪಡಿಸಿ, ಬೃಹಸ್ಪತಿಯ ಆಕಳುಗಳನ್ನು ಕದ್ದವರು ಯಾರು, ಅವನ್ನು ಎಲ್ಲಿಗೆ ಕೊಂಡೊಯ್ದಿದ್ದಾರೆ ಎಂದು ತಿಳಿದುಬರುವಂತೆ ಸೇನೆಯ ಸರದಾರನಾದ ಗರುಡನಿಗೆ ಅಪ್ಪಣೆ ಮಾಡಿದ. ಗರುಡನು ತುಂಬ ಬಲಿಷ್ಠ, ಬುದ್ಧಿವಂತ, ಶೂರ, ಚತುರ ; ಸುತ್ತಮುತ್ತ ಇರುವ ಎಲ್ಲ ಜನಾಂಗಗಳ ಸುಳಿವನ್ನೂ ಬಲ್ಲವನು. ಅವನಿಗೆ ಇದು ಪಣಿಜನರ ಕೆಲಸವೇ ಇದ್ದೀತೆಂದು ಹೊಳೆಯಿತು. ದನಕರುಗಳನ್ನು ಕದಿಯುವವರು ಎಂದೇ ಅವರ ಪ್ರಸಿದ್ಧಿಯಿದ್ದಿತು. ಆದರೆ ಪಣಿಜನರ ತಾಣ ಇದೇ ಎಂದು ಯಾರೂ ನಿಶ್ಚಯಿಸಿ ಹೇಳುವುದು ಸಾಧ್ಯವಿದ್ದಿಲ್ಲ ; ದನಕರುಗಳನ್ನು ಎಲ್ಲಿ ಅಡಗಿಸಿಟ್ಟಿದ್ದಾರೆಂಬುದೂ ತಿಳಿಯುವಂತಿರಲಿಲ್ಲ.

ಅಂತೂ ರಸಾನದಿಯನ್ನು ದಾಟಿದ ; ಪಣಿಜನರ ತಾಣವನ್ನು ಮುಟ್ಟಿದ. ಮುಗಿಲೆತ್ತರ ಬೆಳೆದಿದ್ದ ಮರವೊಂದನ್ನೇರಿ ನೋಡಿದ ; ಹದ್ದಿನಂಥ ಅವನ ಕಣ್ಣಿಗೆ ದೂರದಲ್ಲಿ ದನಕರುಗಳ ಮಂದೆ ಕಾಣಿಸಿತು. ಅಲ್ಲಿಗೆ ಬಂದ ; ಪಣಿಜನರ ಗುಂಪೂ ಅಲ್ಲಿದ್ದಿತು. ಗರುಡನ ಆಕಾರವನ್ನು ಕಂಡೇ ಅಚ್ಚರಿಗೊಂಡ ಅವರು ದೇವಜನರ ಕಡೆಯಿಂದ ಬಂದವನೆಂದು ಊಹಿಸಿದರು. ಅವನನ್ನು ಆದರದಿಂದ ಎದುರು ಗೊಂಡು ಹಾಲು, ಮೊಸರು, ಬೆಣ್ಣೆ ತುಪ್ಪ ಯಥೇಚ್ಛವಾಗಿ ಉಣಬಡಿಸಿದರು ; ಅವನು ತಿಂದು ತೇಗಿದ ಮೇಲೆ ಅವನ ಕಾಲಿಗೆ ಬಿದ್ದು ತಾವಿರುವ ಎಡೆಯನ್ನು ದೇವಜನರಿಗೆ ತಿಳಿಸಬಾರದೆಂದು ಬೇಡಿಕೊಂಡರು. ತಿಂದ ಮತ್ತಿನಲ್ಲಿ ಅವನೂ ಆಗಲೆಂದು ಒಪ್ಪಿ ಅಲ್ಲಿಂದ ಹೊರಟ.

ಮತ್ತೆ ನದಿಯನ್ನು ದಾಟಿ ದೇವಜನರ ವಸತಿಗೆ ಬಂದೊಡನೆ, ಅವನಿಗಾಗಿಯೇ ಕಾದಿದ್ದ ಇಂದ್ರನೂ, ಇತರ ದೇವಜನರೂ ಅವನ ಸುತ್ತನೆರೆದು, ಸುದ್ದಿಯೇನೆಂದು ಅವರಿಗೆ ಮಾತುಕೊಟ್ಟಿದ್ದ ಗರುಡನು "ನೆಲವನ್ನೆಲ್ಲ ಜಾಲಾಡಿದೆ ; ಹೊಳೆಯಲ್ಲೆಲ್ಲ ತಡಕಾಡಿದೆ ; ಮುಗಿಲಲ್ಲೆಲ್ಲ ಅಲೆದಾಡಿದೆ. ನಮ್ಮ ದನಕರುಗಳ ಸುಳಿವನ್ನು ಎಲ್ಲಿಯೂ ಕಾಣಲಿಲ್ಲ !" ಎಂದು ಸುಳ್ಳೇ ಹೇಳಿಬಿಟ್ಟನು. ಹೊರಡುವಾಗ ಬಡಕಲಾಗಿದ್ದವನು ಬರುವಾಗ ದಾಂಢಿಗನಾಗಿರುವುದನ್ನು ಎಲ್ಲರೂ ಗುರುತಿಸಿದರು. ಇಂದ್ರನು ಅವನ ಕತ್ತು ಹಿಡಿದು, "ಮನೆಗೆ ಎರಡು ಬಗೆಯುವ ದ್ರೋಹಿ, ಸುಳ್ಳಾಡುವೆಯಾ ?" ಎಂದು ಬೆನ್ನ ಮೇಲೆ ಗುದ್ದಲು, ಗರುಡನು ಉಂಡಿದ್ದ ಹಾಲುಮೊಸರನ್ನೆಲ್ಲ ಕಕ್ಕಿದನು. ದೇವಜನರು ಅವನನ್ನು ಹೊಡೆದಟ್ಟಿದರು. "ಮುಂದೆ ನೀನು ಎಂಜಲನ್ನೇ ತಿಂದುಕೊಂಡಿರು ; ಹೊಲಸೇ ನಿನಗೆ ಆಹಾರವಾಗಲಿ" ಎಂದು ಇಂದ್ರನೂ ಶಾಪವಿತ್ತನು.

ಇಂದ್ರನ ಬಳಿ ಊಳಿಗದವಳೊಬ್ಬಳಿದ್ದಳು ; ಸರಮೆಯೆಂದು ಅವಳ

ಆಗ ನದಿ ಅವಳ ಸ್ಥೈರ್ಯವನ್ನೂ, ಸಾಹಸವನ್ನೂ ಮೆಚ್ಚಿಕೊಂಡು, ಮೆಲ್ಲಮೆಲ್ಲನೆ ಹರಿಯತೊಡಗಿ, ಅವಳು ನೆಲದ ಮೇಲೆ ನಡೆಯಲು ಅನುವು ಮಾಡಿಕೊಟ್ಟಿತು. ಅರ್ಧ ದೂರ ನಡೆಯುತ್ತಲೇ ನದಿಯನ್ನು ದಾಟಿ ಆಚೆಯ ತಡಿಗೆ ಬಂದು ಸೇರಿದಳು. ಇವಳ ಸಾಹಸವನ್ನೂ ನದಿಯಲ್ಲಿ ನೆರೆಯಿಳಿದ ಆಚ್ಚರಿಯನ್ನೂ ಪಣಿಜನರು ಕೆಲವರು ನೋಡುತ್ತ ನಿಂತಿದ್ದವರು. ಇವಳೇನು ನಾರಿಯೋ, ಮಾರಿಯೋ ಎಂದರಿಯದೆ ತಮ್ಮ ಬೀಡಿಗೆ ಓಡಿದರು ; ತಾವು ಕಂಡುದನ್ನು ಅಲ್ಲಿದ್ದವರಿಗೆ ತಿಳಿಯ ಹೇಳಿದರು. ತಮಗೆ ಬಂದೊದಗಿದ ಕುತ್ತೇ ಇದು ಇದ್ದೀತೆ ಎಂದು ಸಂದೇಹವಾಯಿತು.

ಸರಮೆಯು ನದಿಯಿಂದ ಮೇಲೆ ಬಂದು, ಸ್ವಲ್ಪ ಸಾವರಿಸಿಕೊಂಡು, ತಮ್ಮ ಕಡೆಯ ದನಕರುಗಳ ವಾಸನೆಯನ್ನು ಗುರುತಿಸಲು ಎಲ್ಲ ದಿಕ್ಕುಗಳಲ್ಲಿ ತಡುಕಾಡಿದಳು. ಅಲ್ಲಲ್ಲಿ ನಡೆದಾಡಿ ಕಾಡು-ಮೇಡುಗಳಲ್ಲಿ ಹುಡುಕಾಡಿದಳು. ಕಡೆಗೆ ದೇವಜನರ ಆಕಳುಗಳ ವಾಸನೆ ಗಾಳಿಯಲ್ಲಿ ಬೀಸಿ, ಮೂಗಿಗೆ ಬಂದಡರಲು, ಅದೇ ದಿಕ್ಕಿನಲ್ಲಿ ಬಿರುಸಾಗಿ ನಡೆದು ಹೋದಳು. ಬೆಟ್ಟ ಸಾಲಿನ ಗುಹೆಯೊಂದರ ಮುಂದೆ ಕೆಲವು ದನಕರುಗಳು ಮೇಯುತ್ತಿದ್ದವು ; ಮತ್ತೆ ಕೆಲವು ಗುಹೆಯೊಳಗೆ ಕುಳಿತಿದ್ದವು. ಇವಳು ಬರುತ್ತಿರುವುದನ್ನು ದೂರದಿಂದಲೇ ಕಂಡು ಪಣಿಜನರೆಲ್ಲರೂ ಬಂದು ನೆರೆದರು. ಎಲ್ಲರಿಗೂ ''ಇವಳು ಯಾರು'' ಎಂದು ತಿಳಿಯುವಾಸೆ ; ''ನಮ್ಮಿಂದ ಏನನ್ನು ಬಯಸಿ ಬಂದಿದ್ದಾಳು ?'' ಎಂಬ ಕುತೂಹಲ ; ನಮಗೇನು ವಿಪತ್ತು ಕಾದಿದೆಯೊ ಎಂಬ ಅಂಜಿಕೆ. ಪಣಿಜನರ ಮುಂದಾಳುಗಳು ಧೈರ್ಯಮಾಡಿ ಅವಳೊಂದಿಗೆ ಮಾತುಕತೆಯಾಡಿದರು.

ಅವರು ''ಎಲೆ ಚೆಲುವೆ ? ನೀನು ಯಾರು ? ತುಂಬು ಹೊಳೆಯನ್ನು ದಾಟಿ ಬಂದೆಯಲ್ಲ, ಅಂಜಿಕೆಯಾಗಲಿಲ್ಲವೆ ? ಇಷ್ಟು ಸಾಹಸದ ಕೆಲಸವನ್ನು ಕೈಗೊಂಡದ್ದಾದರೂ ಯಾತಕ್ಕೆ? ನಮ್ಮಿಂದ ಏನನ್ನು ಬಯಸಿ

ಬಂದಿದ್ದೀಯೆ? ಉತ್ತರ ಹೇಳುವ ಮೊದಲು, ದಣಿವಾರಿಸಿಕೋ, ಹಸಿದಿರಬಹುದು, ತಿನ್ನಲು ಏನಾದರೂ ಕೊಡುತ್ತೇವೆ. ನಮ್ಮ ಆತಿಥ್ಯವನ್ನು ಸ್ವೀಕರಿಸು ಎಂದರು.

ಸರಮೆಯು ''ನಿಮ್ಮ ಆತಿಥ್ಯದ ಅಗತ್ಯ ನನಗಿರದು. ಹಿಡಿದ ಕೆಲಸವನ್ನು ಮಾಡಬೇಕೆನ್ನುವ ಹಟವಿರುವಾಗ ಅಂಜಿಕೆಯೂ ಇರದು. ದಣಿವೂ ಆಗದು. ನಾನು ದೇವಜನರ ಕಡೆಯಿಂದ ಬಂದಿದ್ದೇನೆ ; ಆ ಜನರ ಒಡೆಯ ಇಂದ್ರನ ಊಳಿಗದವಳು ನಾನು. ನಮ್ಮ ಹಿರಿಯರೊಬ್ಬರ ಆಕಳುಗಳು ಕಳುವಾಗಿವೆ. ಅವನ್ನು ಹುಡುಕುತ್ತ ಹೊರಟವಳು. ಅವನ್ನು ಇಲ್ಲಿಯೇ ಕಾಣುತ್ತಿದ್ದೇನೆ. ಅವು ಇಲ್ಲಿಗೆ ಬಂಮದು ಹೇಗೆ ? ತಾವಾಗಿಯೇ ಬಂದುವೋ, ನೀವು ಕದ್ದು ತಂದಿದ್ದೀರೋ ?'' ಎಂದು ಕೇಳಿದಳು.

ಅದಕ್ಕೆ ಅವರು, ''ನಾವು ದೇವಜನರಿಂದ ಈ ಆಕಳುಗಳನ್ನು ಕದ್ದು ತಂದಿರುವುದು ದಿಟ. ಆದರೆ ನಿನ್ನ ಒಡೆಯನಾದ ಇಂದ್ರನು ಯಾರು ? ಅವನ ಆಕಾರವೇನು ? ಸ್ವಭಾವ ಎಂಥಾದ್ದು ? ನೀನು ಮತ್ತೆ ಅವನಲ್ಲಿಗೆ ಹೋಗಬೇಕೆ ? ಇಷ್ಟು ದೂರ ಬಂದಿದ್ದೀಯೆ, ದುರ್ಗಮವಾದ ನದಿಯನ್ನು ದಾಟಿದ್ದೀಯೆ. ನಮ್ಮ ಸೋದರಿಯಂತೆ ಇಲ್ಲಿಯೇ ಇದ್ದುಬಿಡು. ಅಲ್ಲಿ ನೀನು ಊಳಿಗದವಳು ; ಇಲ್ಲಿ ನಮ್ಮೆಲ್ಲರ ಸೋದರಿ. ಈ ಆಕಳುಗಳನ್ನು ಕಾಪಾಡುವ ಕೆಲಸವೂ ನಿನ್ನದೇ ಆಗಲಿ. ಇವುಗಳಲ್ಲಿ ಒಂದು ಪಾಲನ್ನೂ ನಿನಗೆ ಕೊಡುತ್ತೇವೆ'' ಎಂದು ಆಸೆ ತೋರಿಸಿದರು.

ಸರಮೆಯು ಜೋರಾಗಿ ನಕ್ಕು ''ನನ್ನನ್ನೇ ನೀವು ಅರಿಯಲಾರದೆ ಹೋದಿರಿ, ಇನ್ನು ನನ್ನ ಒಡೆಯ ಇಂದ್ರನನ್ನು ನೀವು ಅರಿಯುವುದಾದರೂ ಹೇಗೆ ? ದನಕರುಗಳನ್ನು ಹಿಂದಿರುಗಿಸಿ. ನಿಮ್ಮ ಒಳ್ಳೆಯದಕ್ಕೇ ನಾನು ಹೇಳುತ್ತಿದ್ದೇನೆ, ತಿಳಿಯಿರಿ'' ಎಂದಳು.

ಪಣಿಜನರಿಗೆ ಈ ಮಾತಿನಿಂದ ಸ್ವಲ್ಪ ಅಂಜಿಕೆಯೇ ಆಯಿತು. ಆದರೂ ಅದನ್ನು ತೋರಗೊಡದೆ, ''ಎಲೆ ಹೆಣ್ಣೆ ನಾವೂ ನಿನ್ನ ಒಳ್ಳೆಯದಕ್ಕೇ ಹೇಳುತ್ತಿದ್ದೇವೆ. ನಮ್ಮನ್ನು ಬರಿಯ ಕಳ್ಳರೆಂದು ಎಣಿಸಿದೆಯಾ ? ನಮ್ಮಲ್ಲೂ ಸೇನೆಯಿದೆ, ಶಸ್ತ್ರಾಸ್ತ್ರಗಳಿವೆ. ಸಮರದ ಪರಿಚಯವೂ ನಮಗೆ ಚನ್ನಾಗಿಯೇ ಇದೆ. ನಿನ್ನ ದೇವಜನರೆಲ್ಲರೂ ನಮ್ಮ ಮೇಲೆ ಬಿದ್ದರೂ, ನೋಡಿಕೊಳ್ಳು ತ್ತೇವೆ. ಎದೆಗುಂದದೆ ಕಾದಾಡಿ ಓಡಿಸುತ್ತೇವೆ. ಇನ್ನು ನಾವು ಕದ್ದು ತಂದಿರುವ ಗೋವುಗಳನ್ನು ವಲನೆಂಬ ರಕ್ಕಸನು ನೋಡಿಕೊಳ್ಳುತ್ತಿದ್ದಾನೆ. ಅವನಿಗೆ ನಿನ್ನ ಇಂದ್ರನು ಎಷ್ಟು ಮಾತ್ರಕ್ಕೂ ಸರಿಸಾಟಿಯಾಗಲಾರ. ಇಂದ್ರನು ಈ ನದಿಯನ್ನು ದಾಟಿ ಬರುವುದಂತೂ ಆಗದ ಮಾತು. ಇಂದ್ರನನ್ನು ಮರೆತು ನಮ್ಮೊಡನೆ ಇರುವುದೇ ನಿನಗೆ ಲೇಸು. ಹಾಲು - ಮೊಸರು ದಂಡಿಯಾಗಿ ದೊರಕುತ್ತದೆ ; ಊಳಿಗದ ಉಪದ್ರವವೂ ಇರದು. ನಮ್ಮ ನಿಧಿಯಲ್ಲಿ ನಿನಗೊಂದು ಪಾಲೂ ಇರುತ್ತದೆ'' ಎಂದು ಪುಸಲಾಯಿಸಿದರು.

ಇವರ ಮಾತನ್ನು ಕೇಳಿ ಸರಮೆಗೆ ನಗುವೇ ಬಂದಿತು. ''ನಿಮ್ಮ ಮಾತನ್ನು ಕೇಳಿದರೆ ನೀವು ಹುಚ್ಚರೋ ಬೆಪ್ಪರೋ ಎಂಬುದು ನನಗೆ ತಿಳಿಯುವದಿಲ್ಲ. ವೀರರಾದ ಸೈನಿಕರು ಆಡುವಂಥ ಮಾತುಗಳಂತೂ ಅಲ್ಲ! ಇಂದ್ರನ ಪರಾಕ್ರಮವನ್ನು ನೀವೇನು ಬಲ್ಲಿರಿ ? ಅವನ ಊಳಿಗದವಳಾದ ನಾನೇ ನದಿಯನ್ನು ದಾಟಿಬರಲಿಲ್ಲವೆ ? ಇನ್ನು ಅವನಿಗೆ ನದಿ ಅಡ್ಡ ಬಂದೀತೆ? ಇಂದ್ರನು ನಿಮ್ಮನ್ನು ಉಸಿರಾಡಗೊಡಿಸುವುದಿಲ್ಲ. ಒಣಜಂಬದ ಮಾತುಗಳಿಂದ ಪ್ರಯೋಜನವೇನು ? ಅಸುರರ ನೂರಾರು ಕೋಟೆಗಳನ್ನು ಇಂದ್ರನು ಕೆಡವಿರುವ ಸುದ್ದಿ ನಿಮಗೆ ತಿಳಿದೇ ಇಲ್ಲವೆ ? ನನ್ನನ್ನು ನೀವು ಯಾವ ಕಾರಣದಿಂದಲೂ ಇಲ್ಲಿ ಸಿಲ್ಲಿಸಿಕೊಳ್ಳಲಾರಿರಿ ; ಬಲಾತ್ಕಾರವಂತೂ ನಡೆಯಲಾರದು. ಬೃಹಸ್ಪತಿಯ ಆಕಳುಗಳು ಇರುವ ಎಡೆಯನ್ನು

ಕಂಡುಕೊಳ್ಳಲೆಂದೇ ನಾನು ಬಂದದ್ದು ; ಕಂಡುಕೊಂಡಾಯಿತು. ಇನ್ನು ಹಿಂದಕ್ಕೆ ಹೊರಡುತ್ತೇನೆ !'' ಎಂದಳು.

ಪಣಿಜನರು ಅವಳನ್ನು ಅಲ್ಲಿಯೇ ಉಳಿಸಿಕೊಳ್ಳುವ ಆಸೆಯನ್ನು ತೊರೆಯಲಿಲ್ಲ. ಅವಳು ಹಿಂದಿರುಗಿದರೆ ಇಂದ್ರನು ತಮ್ಮ ಮೇಲೆ ಬೀಳುವುದು ಖಂಡಿತವೆಂಬ ಅಂಜಿಕೆಯೇ ಆ ಆಸೆಯ ಮೂಲ. ಪಣಿಜನರ ಮುಂದಾಳುಗಳು ಕಡೆಗೊಂದು ಆಮಿಷವನ್ನೊಡ್ಡಿದರು. ''ಸರಿ, ಬುದ್ಧಿಗೆಟ್ಟ ಹೆಣ್ಣು ನೀನು. ಮನಸ್ಸಿಗೆ ಬಂದಂತೆ ಮಾಡು, ಕೆಟ್ಟರೆ ಕೆಡುವವಳು ನೀನೆ ! ದೇವಜನರಿಂದ ತಂದಿರುವ ಆಕಳುಗಳ ಹಾಲು ಇಲ್ಲಿ ಎಷ್ಟು ರುಚಿಯಾಗಿ ರುವುದೆಂಬುದನ್ನಾದರೂ ನೋಡು. ಅಷ್ಟು ದೂರದಿಂದ ಬಂದಿರುವೆ ; ಮತ್ತೆ ಅಷ್ಟು ದೂರ ಹೋಗಬೇಕೆಂದಿರುವೆ. ಸ್ವಲ್ಪ ಹಾಲನ್ನಾದರೂ ಕುಡಿದು ಹೋಗು'' ಎಂದರು.

ಸರಮೆ ತನ್ನ ಸಾಹಸದಿಂದ ಬಳಲಿದ್ದುದು ದಿಟ ; ಹಸಿದೂ ಇದ್ದಳು. ಮತ್ತೆ ಅಷ್ಟು ದೂರ ಹಿಂದಿರುಗಬೇಕಲ್ಲ; ನದಿಯನ್ನು ಈಜಿ ದಾಟಬೇಕಲ್ಲ? ದೇವಜನರ ಆಕಳ ಹಾಲು ಎಷ್ಟು ರುಚಿಯಾದುದೆಂಬುದು ಅವಳಿಗೆ ತಿಳಿಯದೆ ? ರುಚಿ ಮಾತ್ರವಲ್ಲ , ಬಲವನ್ನೂ ಒದಗಿಸುತ್ತದೆ ಅದು, ದಣಿವನ್ನು ದೂರಮಾಡುತ್ತದೆ, ಉತ್ಸಾಹವನ್ನು ಮೂಡಿಸುತ್ತದೆ, ಎಂಬುದನ್ನೂ ಅವಳು ಬಲ್ಲಳು. ಮತ್ತೆ ಪಣಿಜನರು ಈಗ ನೀಡಲಿರುವ ಹಾಲು ಹೇಗಿದ್ದರೂ ತನ್ನ ದೇವಜನರದ್ದೇ ತಾನೆ ? ಕದ್ದು ತಂದ ಮಾತ್ರಕ್ಕೆ ಆಕಳುಗಳು ಅವರದಾಗಿಬಿಟ್ಟುವೆ ? ಹೀಗೆ ಸಮಾಲೋಚಿಸಿ ಸರಮೆ ಆಕಳ ಹಾಲನ್ನು ಕುಡಿಯಲೊಪ್ಪಿದಳು.

ಅವರು ಒಂದು ಗಡಿಗೆಯ ತುಂಬ ಆಕಳ ಹಾಲನ್ನು ತಂದು ಕೊಟ್ಟರು ; ಸರಮೆ ಅದನ್ನು ಗಟಗಟನೆ ಕುಡಿದು ಹೊರಟು ನಿಂತಳು. ''ಮತ್ತೊಮ್ಮೆ ನಿಮಗೆ ಬುದ್ಧಿಯನ್ನು ಹೇಳುವೆ ; ದೇವಜನರ ಸ್ವತ್ತನ್ನು

ಅವರಿಗೆ ಹಿಂದಿರುಗಿಸಿದರೆ ನಿಮಗೇ ಒಳಿತು ; ಇಲ್ಲವಾದರೆ ಕೆಟ್ಟೀರಿ. ದೇವಜನರೊಂದಿಗೆ ದ್ವೇಷವನ್ನು ಕಟ್ಟಿಕೊಳ್ಳಬೇಡಿ ; ಇಂದ್ರನು ನಿಮ್ಮನ್ನು ಉಳಿಯಗೊಡುವುದಿಲ್ಲ'' ಎಂದು ಹೇಳಿದಳು.

ಪಣಿಜನರು ''ನೋಡೋಣ, ಇಂದ್ರನು ನದಿಯನ್ನು ದಾಟಿ ಇಲ್ಲಿಗೆ ಬಂದಮೇಲೆ ತಾನೆ ಅವನು ನಮ್ಮ ಮೇಲೆ ಕೈಮಾಡುವುದು ? ಕೈಮಾಡಿದರೂ ನಮ್ಮಲ್ಲೇನು ಬಿಲ್ಲು ಬಾಣ ಇಲ್ಲವೆ, ಕತ್ತಿ-ಈಟಿ-ಭರ್ಜಿಗಳಿಲ್ಲವೆ ? ಅವನಿಗೆ ಬುದ್ಧಿ ಕಲಿಸುತ್ತೇವೆ. ಅದನ್ನು ನೀನೇ ನೋಡುವಿ ! ಈಗ ನದಿಯನ್ನು ದಾಟಿ ಹೋಗುವುದನ್ನು ನೋಡಿಕೋ !'' ಎಂದುತ್ತರ ಕೊಟ್ಟರು. ಅವಳ ಸಾಹಸ ವ್ಯರ್ಥವಾಯಿತೆಂದು ಅವರ ಎಣಿಕೆ.

ಸರಮೆ ಹಿಂದಕ್ಕೆ ಹೊರಟಳು. ಅವಳನ್ನು ಯಾರೂ ತಡೆಯಲಿಲ್ಲ. ಸರಸರನೆ ನಡೆದು ನದಿಯ ದಡವನ್ನೂ ಸೇರಿ, ನೀರಿಗೆ ಧುಮುಕಿದಳು. ಪ್ರವಾಹ ಆಗಲೇ ಇಳಿದಿತ್ತು. ಈಜಿ ದಾಟುವುದು ಅವಳಿಗೇನು ಕಷ್ಟವೆನಿಸಲಿಲ್ಲ. ಹಾಲನ್ನು ಕುಡಿದಿದ್ದು, ಬಲವನ್ನೂ ಮೈಗೂಡಿಸಿಕೊಂಡಿದ್ದಳು. ನದಿಯನ್ನು ದಾಟಿ ದೇವಜನರ ವಸತಿಯನ್ನು ಸೇರಿದಳು. ಅವಳ ನಗುಮೊಗವನ್ನು ನೋಡಿಯೇ ಇಂದ್ರನೂ, ದೇವಜನರೂ ಅವಳು ತಾನು ಕೈಗೊಂಡ ಕೆಲಸವನ್ನು ಸಾಧಿಸಿದ್ದಾಳೆಂದು ಕಂಡುಕೊಂಡರು. ಸರಮೆ ಎಂದಾದರೂ ಸೋತುದುಂಟೆ ? ಪಣಿಜನರು ಬೃಹಸ್ಪತಿಯ ಆಕಳುಗಳನ್ನು ಕದ್ದೊಯ್ದು ವಲನೆಂಬ ರಕ್ಕಸನ ರಕ್ಷಣೆಯಲ್ಲಿ ಗುಟ್ಟಾಗಿ ಬೆಟ್ಟದ ಗುಹೆಯಲ್ಲಿರಿಸಿರುವುದನ್ನು ತಿಳಿಯಹೇಳಿದಳು.

ಸರಮೆ ತಿಳಿಸಿದ ಸುಳಿವನ್ನೇ ಹಿಡಿದು, ನದಿಯನ್ನು ದಾಟಲು ಹಡಗೊಂದನ್ನು ಕಟ್ಟಿ ಇಂದ್ರನೂ ಅವನ ಸೇನೆಯೂ, ಬೃಹಸ್ಪತಿ, ಅಗ್ನಿ, ಅಂಗಿರಾವಂಶದ ಋಷಿಗಳೊಡಗೂಡಿ ಹೊರಟರು. ಪಣಿಜನರ ತಾಣವನ್ನು ಗುರುತಿಸಿ, ಅವರನ್ನು ಸದೆಬಡಿದು, ಆಕಳುಗಳನ್ನು ಅಡಗಿಸಿಟ್ಟಿದ್ದ

ಗುಹೆಯನ್ನೂ ಕಂಡುಹಿಡಿದು, ವಲನನ್ನು ಕೊಂದು ಆಕಳುಗಳನ್ನು ಬಿಡಿಸಿಕೊಂಡರು. ಅವರೆಲ್ಲರೂ ದೇವಜನರ ಬೀಡಿಗೆ ಹಿಂದಿರುಗಿದಾಗ ಜನರೆಲ್ಲರೂ ಕೂಡಿ ಇಂದ್ರನಿಗೆ ವಿಜಯೋತ್ಸವವನ್ನು ಮಾಡಿದರು. ಆಗ ಸರಮೆಗೇ ಅಗ್ರಮರ್ಯಾದೆ. ಅವಳ ಚಾತುರ್ಯ, ಸಾಹಸ, ಧೈರ್ಯ, ಪ್ರಾಮಾಣಿಕತೆ, ಸ್ವಜನಾಭಿಮಾನ, ಸ್ವಾಭಿಮಾನಗಳನ್ನು ಕುರಿತ ಮಾತೇ ಎಲ್ಲೆಡೆಯೂ ಕೇಳಿಬರುತ್ತಿತ್ತು.

ಅರಿವಾಗಲು ಓದಿದರೆ ಸಾಲದು

ಒಬ್ಬ ಗೃಹಸ್ಥ ತಾನಂತೂ ವೇದ ಕಲಿಯಲಿಲ್ಲ, ತನ್ನ ಮಗನಾದರೂ ಕಲಿಯಲಿ ಎಂದು ತನ್ನ ಮಗನನ್ನು ಗುರುಕುಲವೊಂದಕ್ಕೆ ಕಳುಹಿಸಿದ. ಐದು ದಿನಗಳಾದರೂ ಮಗ ಹಿಂದಕ್ಕೆ ಬಾರದಿದ್ದಾಗ ಅವನಿಗೆ ಚಿಂತೆ ಹತ್ತಿತು. 'ವೇದಗಳು ನಾಲ್ಕೆಂದು ಕೇಳಿದ್ದೇನೆ ; ನನ್ನ ಮಗ ಹೋಗಿ ಐದು ದಿನಗಳಾದುವಲ್ಲ, ಇನ್ನು ಏಕೆ ಬಂದಿಲ್ಲ ?' ಎಂದವನ ದುಗುಡ. ಇರುವುದು ನಾಲ್ಕೇ ವೇದಗಳೆಂದ ಮೇಲೆ ಅವನ್ನು ಕಲಿಯಲು ಹೆಚ್ಚೆಂದರೆ ನಾಲ್ಕು ದಿನಗಳು ಸಾಕು ; ಐದನೆಯ ದಿನ ಅವನು ಹಿಂದಿರುಗಬೇಕಲ್ಲವೆ ? ಇದು ಅವನ ತರ್ಕ. ತಂದೆಯು ಮೂರ್ಖನೆಂದು ಹೇಳುವುದು ಈ ಕತೆಯ ಉದ್ದೇಶ. ವೇದಗಳು ನಾಲ್ಕೇ ಆದರೂ ಅವುಗಳ ಅಧ್ಯಯನ ನಾಲ್ಕು ವರ್ಷಗಳಲ್ಲೂ ಮುಗಿಯಲಾರದು ; ಇಡೀ ಬದುಕನ್ನೆಲ್ಲ ವೇದದ ಅಧ್ಯಯನಕ್ಕಾಗಿ ಮೀಸಲಿಡುವುದೇ ವಾಡಿಕೆಯಾಗಿದ್ದ ಕಾಲವೂ ಇದ್ದಿತು.

ಭರದ್ವಾಜ ಋಷಿ :

ಮೇಲಿನ ಕತೆಗೆ ಎದುರಾಗಿ ಕೃಷ್ಣಯಜುರ್ವೇದದ ಬ್ರಾಹ್ಮಣವೊಂದರಲ್ಲಿ ಬರುವ ಇನ್ನೊಂದು ಕತೆಯನ್ನು ನೋಡಿ. ಅದು ಭರದ್ವಾಜನೆಂಬ ಋಷಿಗೆ ಸಂಬಂಧಿಸಿದ್ದು. ಅವನು ಎಳೆಯ ವಯಸ್ಸಿನಲ್ಲಿಯೇ ವೇದಾಧ್ಯಯನಕ್ಕೆಂದು ಗುರುಕುಲವನ್ನು ಸೇರಿದ. ವೇದಾಧ್ಯಯನ ಅವನಿಗೆ

ಸೊಗಸಿತು ; ಆಳವಾಗಿ ಅಭ್ಯಾಸ ಮಾಡುತ್ತ ಮಾಡುತ್ತ ಅದರ ಸ್ವಾರಸ್ಯವನ್ನು ಮನಗಂಡ. ಬೇರೆ ಏನೂ ಅವನಿಗೆ ರುಚಿಸದಾಯಿತು. ವ್ಯವಹಾರದ ಕಡೆ ಮನಸ್ಸೇ ಹರಿಯಲಿಲ್ಲ. ಸಾಮಾನ್ಯವಾಗಿ ಎಲ್ಲರೂ ನಾಲ್ಕಾರು, ಹೆಚ್ಚೆಂದರೆ ಹತ್ತಾರು, ವರ್ಷಗಳ ಕಾಲ ಗುರುಕುಲದಲ್ಲಿ ಕಲಿತು, ಮರಳಿ ಮನೆಗೆ ಬಂದು ಮದುವೆ ಮಾಡಿಕೊಂಡು ಗೃಹಸ್ಥಜೀವನದಲ್ಲಿ ತೊಡಗುವರು. ಭರದ್ವಾಜ ನಾದರೋ ಹೀಗೆ ಮಾಡಲಿಲ್ಲ. ಗುರುಕುಲವನ್ನು ಬಿಟ್ಟು ಹೊರಡುವ ಆಲೋಚನೆಯೇ ಅವನಿಗೆ ಬರಲಿಲ್ಲ.

ವೇದಾಧ್ಯಯನದಲ್ಲೇ ತೊಡಗಿರುತ್ತ ಅವನಿಗೆ ತಾರುಣ್ಯವೂ ಬಂದಿತು, ಹೋಯಿತು ; ಹಾಗೆಯೇ ಮುಪ್ಪೂ ಬಂದಿತು. ನೂರು ವರ್ಷಗಳ ಮುದುಕನಾದರೂ ವೇದಾಭ್ಯಾಸಿಯಾದ ಬ್ರಹ್ಮಚಾರಿಯಾಗಿಯೆ ಉಳಿದುಬಿಟ್ಟ. ಇವನನ್ನು ನೋಡಿ ದೇವತೆಗಳ ಒಡೆಯನಾದ ಇಂದ್ರನಿಗೆ ಕನಿಕರ ಬಂದಿತು. ಅವನು ಭರದ್ವಾಜನ ಬಳಿ ಬಂದು, ''ಅಯ್ಯಾ, ತಿಳಿಗೇಡಿಯೇ, ನಿನಗಿರುವ ಆಯುಸ್ಸು ನೂರು ವರ್ಷ, ಲೋಕದಲ್ಲಿ ಏನೆಲ್ಲ ಭೋಗಗಳನ್ನು ಅನುಭವಿಸಬಹುದಾಗಿತ್ತು? ಎಷ್ಟೊಂದು ಸುಖಪಡ ಬಹುದಾಗಿತ್ತು ? ಏನೂ ಮಾಡದೆ, ವೇದಾಧ್ಯಯನ ಮಾಡುವುದರಲ್ಲೇ ಬದುಕನ್ನೆಲ್ಲ ನೀನು ಸವೆಸಿಬಿಟ್ಟೆಯಲ್ಲ ? ಏನಾದ ಹಾಗಾಯಿತು ? ಮನುಷ್ಯನಾಗಿ ಹುಟ್ಟಿ ನೀನು ಸಾಧಿಸಿದುದಾದರೂ ಏನು ? ಹೋಗಲಿ, ನಿನಗೆ ಇನ್ನು ನೂರು ವರ್ಷಗಳ ಆಯುಸ್ಸನ್ನು ನೀಡುತ್ತೇನೆ. ಅದನ್ನು ಹೇಗೆ ಕಳೆಯಬೇಕೆಂದಿರುವೆ, ಹೇಳು'' ಎಂದನು.

ಆದಕ್ಕೆ ಭರದ್ವಾಜನು ''ದೇವರಾಜನೇ, ನನಗೆ ಇನ್ನಷ್ಟು ಆಯುರ್ದಾನ ಮಾಡಿದೆಯಾದರೆ ತುಂಬ ಉಪಕಾರ ಮಾಡಿದಂತಾಗುತ್ತದೆ. ನಾನು ಇಷ್ಟು ಅಧ್ಯಯನ ಮಾಡಿದರೂ ವೇದದ ನೆಲೆಯೇನೆಂಬುದು ತಿಳಿಯಲಿಲ್ಲ. ನೀನು ನೀಡುವ ಆಯುಸ್ಸಿನಲ್ಲಿ ಬ್ರಹ್ಮಚಾರಿಯಾಗಿಯೇ

ಇದ್ದುಕೊಂಡು ವೇದದ ನೆಲೆಯನ್ನು ಕಂಡುಕೊಳ್ಳಲು ಯತ್ನಿಸುತ್ತೇನೆ ; ವೇದಾಧ್ಯಯನವನ್ನು ಇನ್ನಷ್ಟು ಆಳವಾಗಿ ಇನ್ನಷ್ಟು ಉತ್ಸಾಹದಿಂದ ಮಾಡುತ್ತೇನೆ'' ಎಂದುತ್ತರವಿತ್ತನು. ಇಂದ್ರನಿಗೆ ನಗು ಬಂದಿತು. ''ನೋಡೋಣ, ಇನ್ನೆಷ್ಟು ದಿನ ನಿನ್ನ ವೇದ ವಿದ್ಯಾಭ್ಯಾಸ ನಡೆಯುವುದೋ, ಎಂದು ಅದರಿಂದ ಬೇಸತ್ತು ಸಂಸಾರದ ಕಡೆ ಮನಸ್ಸು ಮಾಡುವಿಯೋ ನೋಡಿಯೇ ಬಿಡೋಣ ! ಆಗಲಿ, ಇನ್ನೊಂದು ನೂರು ವರ್ಷ ಬದುಕುವೆ'' ಎಂದು ಹೇಳಿ ಮರೆಯಾದನು.

ವೇದದ ನೆಲೆ :

ಆ ನೂರು ವರ್ಷಗಳು ಕಳೆದ ಮೇಲೆ ಭರದ್ವಾಜನನ್ನು ಹುಡುಕಿಕೊಂಡು ಇಂದ್ರನು ಬಂದನು. ಅವನು ಇನ್ನೂ ವೇದಾಧ್ಯಯನದಲ್ಲಿಯೇ ತೊಡಗಿದ್ದಾನೆ. ಬ್ರಹ್ಮಚಾರಿಯಾಗಿಯೇ ಉಳಿದಿದ್ದಾನೆ ! ಇಂದ್ರನಿಗೆ ಸೋಜಿಗವೆನಿಸಿತು. ಭರದ್ವಾಜನ ಬಳಿ ಬಂದು, ''ಅಯ್ಯಾ ಮುನಿಯೇ, ವೇದದ ನೆಲೆಯೇನಾದರೂ ಸಿಕ್ಕಿತೆ ? ವೇದಾಧ್ಯಯನದಲ್ಲಿ ಇನ್ನೂ ಬೇಸರ ಬರಲಿಲ್ಲವೆ ? ಸಂಸಾರಕ್ಕೆ ಮರಳಬೇಕೆಂಬ ಬಯಕೆ ಮೂಡಲಿಲ್ಲವೆ ?' ಎಂದು ಕೇಳಿದನು.

ಭರದ್ವಾಜನು ''ಇಂದ್ರನೇ, ನಿನ್ನ ಕರುಣೆಗೆ ನಾನು ಕೃತಜ್ಞನಾಗಿ ದ್ದೇನೆ. ನೀನು ಮಾಡಿದ ಆಯುರ್ದಾನದಿಂದ ನನಗೆ ತುಂಬ ಅನುಕೂಲ ವಾಯಿತು. ವೇದದ ನೆಲೆಯನ್ನು ಕಂಡುಕೊಳ್ಳಲು ವಿಶೇಷವಾಗಿ ಯತ್ನ ಮಾಡುವುದು ಸಾಧ್ಯವಾಯಿತು ; ನನ್ನ ಅಧ್ಯಯನ ಇನ್ನಷ್ಟು ಆಳವಾಗಿ ನಡೆಯಿತು. ಆದರೂ ನನ್ನ ಯತ್ನ ಸಫಲವಾಗಲಿಲ್ಲ. ಇನ್ನೂ ಅಧ್ಯಯನ ಮಾಡಬೇಕಾದದ್ದಿದೆ. ಹೀಗೆಯೇ ಮುಂದುವರಿಯುವುದಾದರೆ ಒಂದಲ್ಲ ಒಂದು ದಿನ ವೇದದ ಗುಟ್ಟು ನನಗೆ ತಿಳಿಯುತ್ತದೆ'' ಎಂದನು. ಇಂದ್ರನಿಗೆ

ಮತ್ತೆ ನಗುವೂ ಬಂದಿತು, ಸೋಜಿಗವೂ ಆಯಿತು. ಇದೆಂಥ ಹಟಮಾರಿ ವ್ಯಕ್ತಿ ? ಎಂದಿಗೆ ಇವನಿಗೆ ವ್ಯವಹಾರಜ್ಞಾನ ಬರುವುದು ? ಇಂದ್ರನಿಗೆ ಇವನನ್ನು ಹೇಗಾದರೂ ಸಂಸಾರಕ್ಕೆ ಮರಳಿಸಬೇಕೆಂಬ ಹಟವೂ ಮೂಡಿಕೊಂಡಿತು. ಆಗ ಇಂದ್ರನು "ಅಯ್ಯಾ ವೇದವ್ಯಸನಿಯೇ, ನಿನಗೆ ವೇದದ ನೆಲೆ ತಿಳಿಯಲಿಲ್ಲವಲ್ಲ ? ಇನ್ನೊಂದು ನೂರುವರ್ಷ ಆಯಸ್ಸನ್ನು ನಿನಗೆ ನೀಡುತ್ತೇನೆ. ಏನು ಮಾಡುವಿಯೋ, ನೋಡೋಣ" ಎಂದು ಹೇಳಿ ಮರೆಯಾದನು. ಮತ್ತೆ ನೂರು ವರ್ಷಗಳು ಕಳೆದುವು. ಇಂದ್ರನು ಕುತೂಹಲದಿಂದ ಭರದ್ವಾಜನ ಕಡೆಗೆ ಬಂದನು. ಇನ್ನೂ ಭರದ್ವಾಜನು ವೇದಾಭ್ಯಾಸದಲ್ಲೇ ಮೈಮರೆತಿದ್ದಾನೆ ! ಅವನ ಮನಸ್ಸು ಬೇರೊಂದು ಕಡೆ ಹೊರಳಿಯೇ ಇಲ್ಲ ! ಇಂದ್ರನು ಭರದ್ವಾಜನ ಬಳಿ ಬಂದು "ಅಯ್ಯಾ ದುರ್ದೈವಿಯೆ, ದೈವವು ಒಲಿದರೂ ಅದನ್ನು ಬಳಸಿಕೊಳ್ಳುವ ಜಾಣತನ ನಿನಗಿಲ್ಲವೆ ? ಈಗಲಾದರೂ ವೇದದ ನೆಲೆಯು ಸಿಕ್ಕಿತೆ ? ಅದರ ಗೀಳನ್ನಾದರೂ ಬಿಡಲಾರೆಯ ?" ಎಂದು ಕೇಳಿದನು.

ಭರದ್ವಾಜನು "ವೇದದ ನೆಲೆಯನ್ನು ಕಂಡುಕೊಳ್ಳುವ ತವಕ ನನಗಿದೆ. ಅದಕ್ಕಾಗಿ ವೇದಾಧ್ಯಯನವನ್ನು ಕೈಗೊಂಡಿದ್ದೇನೆ. ಎಷ್ಟು ಅಧ್ಯಯನ ಮಾಡಿದರೂ ಮುಗಿಯುತ್ತಿಲ್ಲವಲ್ಲ ? ನಾನೇನು ಮಾಡಲಿ ? ಕೊನೆಗಾಣುವವರೆಗೆ ಹಂಬಲವನ್ನು ಬಿಡಲಾರೆ" ಎಂದು ಕೊರಗಿದನು.

ಇಂದ್ರನು ಒಡನೆಯೇ ಮರೆಯಾದನು. ಭರದ್ವಾಜನ ಎದುರಿಗೆ ಆವರೆಗೆ ಕಾಣಿಸದಿದ್ದ ನಾಲ್ಕು ದೊಡ್ಡ ದೊಡ್ಡ ಬೆಟ್ಟಗಳು ತೋರಿಕೊಂಡುವು. ಇವು ಹೇಗೆ ಬಂದುವೆಂದು ಭರದ್ವಾಜ ಆಶ್ಚರ್ಯಪಡುತ್ತಿರುವಾಗಲೆ ಮತ್ತೆ ಇಂದ್ರನು ಕಾಣಿಸಿಕೊಂಡನು. ಇಂದ್ರನ ಕೈಯಲ್ಲಿ ನಾಲ್ಕು ಸಣ್ಣ ಸಣ್ಣ ಕಲ್ಲು-ಮಣ್ಣು ಕಲೆಸಿದ ಉಂಡೆಗಳಿದ್ದುವು.

ನಾಲ್ಕು ವೇದಗಳು

ಇಂದ್ರನು ಅವನ್ನು ಭರದ್ವಾಜನೆದುರು ತೋರಿಸಿ "ಅಯ್ಯಾ, ಮುನಿಯೆ, ಇಗೋ ಈ ನಾಲ್ಕು ಪಿಂಡಿಗಳು ಏನೆಂಬೆಯಾ ? ಅಲ್ಲಿ ನಾಲ್ಕು ಬೆಟ್ಟಗಳು ಕಾಣಿಸುತ್ತಿವೆಯಲ್ಲಾ, ಅವುಗಳಿಂದ ಹೆಕ್ಕಿಕೊಂಡು ತಂದುವು. ಈ ಬೆಟ್ಟಗಳಾದರೂ ಏನಿರಬಹುದೆಂದು ಬಲ್ಲೆಯಾ ? ಅವು ನಾಲ್ಕು ವೇದಗಳು. ನೀನು ಮುನ್ನೂರು ವರ್ಷಗಳಿಂದ ವೇದಾಧ್ಯಯನ ಮಾಡಿ ತಿಳಿದುಕೊಂಡಿರುವುದು ಈ ನಾಲ್ಕು ಪಿಂಡಿಗಳಷ್ಟು ಮಾತ್ರ ! ನಿನ್ನ ಬಯಕೆಯಿರುವುದು ನಾಲ್ಕೂ ವೇದಗಳನ್ನು ಸಮಗ್ರವಾಗಿ ಅಧ್ಯಯನ ಮಾಡಬೇಕೆಂದು. ಅದಕ್ಕೆ ಎಷ್ಟು ಕಾಲ ಹಿಡಿಸೀತೆಂಬುದನ್ನು ಆಲೋಚನೆ ಮಾಡು ! ನಿನ್ನ ಪ್ರಯತ್ನ ಎಷ್ಟು ನಿರರ್ಥಕವಾದುದೆಂಬುದನ್ನು ಅರಿತುಕೊ !" ಎಂದು ಹೇಳಿದನು.

ಆಗ ಭರದ್ವಾಜನ ಕಣ್ಣು ತೆರೆಯಿತು. ವೇದಗಳು ದಿಟವಾಗಿ ಅನಂತವೆಂಬ ಅರಿವಾಯಿತು. ವೇದಾಧ್ಯಯನಕ್ಕೆ ಕೊನೆ ಮೊದಲೆಂಬುದಿಲ್ಲವೆಂಬ ತಿಳಿವಳಿಕೆ ಮೂಡಿತು. ವೇದದ ನೆಲೆಯನ್ನು ಕಂಡುಕೊಳ್ಳಲು ವೇದವನ್ನೆಲ್ಲ ಅಡಿಮುಡಿಯಾಗಿ ಅಧ್ಯಯನ ಮಾಡಬೇಕಾದುದಿಲ್ಲವೆಂಬುದು ಅವನಿಗೆ ಆಗ ಸ್ಪಷ್ಟವಾಯಿತು. ಅಷ್ಟು ಮಾತ್ರವಲ್ಲ, ಅಧ್ಯಯನವನ್ನು ವಿಸ್ತಾರವಾಗಿ ಮಾಡಿದ ಮಾತ್ರಕ್ಕೆ ವೇದದ ಸ್ವಾರಸ್ಯವು ಮನದಟ್ಟಾದೀತೆನ್ನಲಾಗದು. ವೇದದ ಗುಟ್ಟು ತಿಳಿಯುವುದು ಅಂತರಂಗದ ಅನುಭವದಿಂದ ; ಅದು ಒಂದು ಗಳಿಗೆಯಲ್ಲೇ ಆಗಬಹುದು, ವರ್ಷಗಳು ಅಧ್ಯಯನ ಮಾಡಿದರೂ ಆಗದೆ ಇರಬಹುದು !

ಭರದ್ವಾಜನಿಗೆ ಬ್ರಹ್ಮಚಾರಿಯಾಗಿದ್ದುಕೊಂಡು ವೇದಾಧ್ಯಯನ ಮಾಡಬೇಕೆಂಬ ಗೀಳು ಹರಿಯಿತು. ತನ್ನ ಕಣ್ಣು ತೆರೆಯಿಸಿದ ಇಂದ್ರನೇ ತನ್ನ ದಿಟವಾದ ಗುರುವೆಂದು ಬಗೆದು, ಅವನಿಗೆ ಕೃತಜ್ಞತೆಯಿಂದ ನಮಸ್ಕರಿಸಿ, ಸಂಸಾರಕ್ಕೆ ಮರಳಿದನು, ವ್ಯವಹಾರಪ್ರಪಂಚಕ್ಕೆ ಮತ್ತೆ ಅಡಿಯಿಟ್ಟನು.

ಆವರೆಗೆ ಆಸ್ಥೆಯಿಂದ ಮಾಡಿದ ವೇದಾಧ್ಯಯನವೇ ಅವನ ಬದುಕನ್ನು ನೆಮ್ಮದಿಗೊಳಿಸಲು ಸಾಕಾಯಿತು. ಗೃಹಸ್ಥನಾಗಿ ನಿಂತಮೇಲೆ ವೇದದ ನೆಲೆಯು ತನ್ನಷ್ಟಕ್ಕೆ ತಾನೆ ಅವನೆದುರು ತೋರಿಕೊಂಡಿತು. ಅದನ್ನು ಹಿಡಿಯಲು ಬಯಸಿ ಅದರ ಹಿಂದೆ ಓಡಿದರೆ ಸಿಗದ ವಸ್ತು ಅದು ; ಯೋಗ್ಯತೆ ಬಂದಿತೆಂದರೆ ತಾನಾಗಿ ಬರುತ್ತದೆ.

ಅಪ್ಸರೆಯೂ ಅರಸನೂ

ಈ ಕತೆಯ ಆಕರ ಋಗ್ವೇದದ ಹತ್ತನೆಯ ಮಂಡಲದಲ್ಲಿ ತೊಂಬತ್ತೈದನೆಯ ಸೂಕ್ತವಾಗಿ ಕಾಣಿಸಿಕೊಳ್ಳುವ ಹದಿನೆಂಟು ಋಕ್ಕುಗಳು. ಇವು ರಾಜ ಪುರೂರವಸ್ಸು ಮತ್ತು ಅಪ್ಸರೆ ಊರ್ವಶಿ ಇವರಿಬ್ಬರ ಸಂವಾದ ರೂಪವಾಗಿದೆ. ಕೆಲವು ಋಕ್ಕುಗಳಿಗೆ ಇಳೆಯ ಮಗ ಪುರೂರವಸ್ಸು ಋಷಿ, ಊರ್ವಶಿ ದೇವತೆ ; ಮತ್ತೆ ಕೆಲವು ಋಕ್ಕುಗಳಿಗೆ ಊರ್ವಶಿಯೇ ಋಷಿ, ಪುರೂರವಸ್ಸು ದೇವತೆ. ಮಂತ್ರಗಳೆಲ್ಲವೂ ತ್ರಿಷ್ಟುಪ್ ಛಂದಸ್ಸಿನಲ್ಲಿವೆ.

ಯಾಸ್ಕರು ಇದನ್ನು ಸಂವಾದಸೂಕ್ತವೆಂದು ಎಣಿಸಿದ್ದಾರೆ ; ಶೌನಕರಾದರೋ ಇದಕ್ಕೆ ಇತಿಹಾಸದ ಹಿನ್ನೆಲೆಯಿದೆಯೆನ್ನುತ್ತಾರೆ. ಶುಕ್ಲಯಜುರ್ವೇದಕ್ಕೆ ಸೇರಿದ ಶತಪಥ ಬ್ರಾಹ್ಮಣದಲ್ಲಿ (೧೧, ೫, ೧ ರಿಂದ ೧೫) ಸಂವಾದಕ್ಕೆ ಸಂಬಂಧಿಸಿದ ಕತೆಯಿದೆ. ಮುಂದೆ ಬೃಹದ್ದೇವತೆಯಲ್ಲೂ (೭, ೧೪೭ ರಿಂದ ೧೫೩) ಕಾಠಕಸಂಹಿತೆಯಲ್ಲೂ (೮, ೧೦, ೩) ಇದೇ ಕತೆ ಬರುತ್ತದೆ. ಮಹಾಭಾರತದಲ್ಲಿ (ಆದಿಪರ್ವ, ೬೯, ೨೧ ರಿಂದ ೨೭) ಬರುವ ಕತೆ ಬೇರೆ ಬಗೆಯಾದುದು ; ಇದನ್ನು ಅವಲಂಬಿಸಿಯೇ ಕಾಳಿದಾಸನು ತನ್ನ ವಿಕ್ರಮೋರ್ವಶೀಯ ನಾಟಕವನ್ನು ರಚಿಸಿದ್ದು. ಕಥಾ ಸರಿತ್ಸಾಗರದಲ್ಲೂ (೧೭, ೧೪) ಊರ್ವಶೀ ಪುರೂರವಸ್ಸರ ವೃತ್ತಾಂತ ಬಂದಿದೆ.

ವೇದಕಾಲದಲ್ಲಿ ಹಲವಾರು ಬುಡಕಟ್ಟುಗಳಿಗೆ ಸೇರಿದ ಜನರು ಒಟ್ಟಿಗೆ ವಾಸಮಾಡುತ್ತಿದ್ದುದೂ ಉಂಟು, ಬೇರೆ ಬೇರೆಯಾಗಿ ನೆರೆನಾಡುಗಳಲ್ಲಿರುತ್ತಿದ್ದುದೂ ಉಂಟು. ಗಂಗಾ ಮತ್ತು ಯಮುನಾ ನದಿಗಳ ನಡುವೆ ಆರು ಪ್ರಮುಖ ಆರ್ಯ ಜನಾಂಗಗಳಿದ್ದವು. ಇವುಗಳಲ್ಲಿ ಭಾಗೀರಥೀ ಮಂದಾಕಿನೀ ನದಿಗಳ ಮಧ್ಯೆ ಇದ್ದವರು ಪೌರವರು ; ಪುರು ಈ ಜನಾಂಗದ ಮೂಲಪುರುಷ. ಇವರದ್ದು ಚಂದ್ರವಂಶ. ಈ ವಂಶದ ಪುರೂರವಸ್ಸು ಐಳ, ಎಂದರೆ ಇಳೆಯೆಂಬುವಳ ಮಗ. ಇವನು ರಾಜರ್ಷಿಯೆಂದು ಹೆಸರಾಗಿದ್ದ. ಭಾಗೀರಥಿಯ ಹದಿಮೂರು ದ್ವೀಪಗಳಿಗೆ ರಾಜನಾಗಿದ್ದವನು ; ಬಲಶಾಲಿ, ಶೂರ.

ಹಿಮಾಲಯದ ತಪ್ಪಲಿನಲ್ಲಿ ಬೆಟ್ಟಗುಡ್ಡಗಳ ಮೇಲೆ ವಾಸಿಸುತ್ತಿದ್ದವರು ಗಂಧರ್ವರೆಂಬ ಜನ. ನಾಡಿನ ವಾಯುವ್ಯ ಮೂಲೆಯಲ್ಲಿರುತ್ತ ಕತ್ತೆಗಳ ಮೇಲೆ ಸಂಚರಿಸುತ್ತಿದ್ದವರು. ಹಾಡು, ಕುಣಿತ ಎಂದರೆ ಇವರಿಗೆ ಪ್ರೀತಿ ; ಸ್ವಭಾವದಲ್ಲೇ ಕಾಮುಕರು. ಈಗಿನ ಕಾಂದಹಾರ್ (ಗಂಧಾರ) ಇವರ ನೆನಪನ್ನು ಉಳಿಸಿಕೊಂಡಿದೆ. ಅವರ ರಾಜಧಾನಿ ಸುಮೇರುಪರ್ವತ; ಅಕ್ಸು (ಆಕ್ಸಸ್) ನದಿಯ ದಡದ1' ಮೇಲಿದ್ದುದು. ಅದೇ ಅವರಿಗೂ, ಇತರರಿಗೂ 'ಸ್ವರ್ಗ'ವೆನಿಸಿ ಕೊಂಡಿದ್ದು. ಗಂಧರ್ವ ಜನಾಂಗದ ಚೆಲುವೆ ಊರ್ವಶಿ.

ಒಮ್ಮೆ ಊರ್ವಶಿಯು ಬಯಲುಸೀಮೆಗೆ ಬಂದು ಅಡ್ಡಾಡುತ್ತಿರುವಾಗ, ಪುರೂರವಸ್ಸನ್ನು ಆಕಸ್ಮಿಕವಾಗಿ ಕಂಡಳು. ಪುರೂರವಸ್ಸು ಚೆಲುವ, ವೀರ ; ಅವನನ್ನು ಕಂಡೊಡನೆ ಊರ್ವಶಿಗೆ ಅವನಲ್ಲಿ ಒಲುಮೆ ಮೂಡಿಬಿಟ್ಟಿತು. ಊರ್ವಶಿಯೂ ಚೆಲುವೆ, ಯುವತಿ, ಮೋಹಿನಿ. ಅವಳನ್ನು ಕಂಡ ಪುರೂರವಸ್ಸು ಮೈಮರೆತ ; ಅವಳಿಲ್ಲದ ಬದುಕು ಏತಕ್ಕೆ ಎನಿಸಿತು. ಅವರಿಬ್ಬರೂ ಸಂಧಿಸಿದರು ; ಪರಸ್ಪರ ಅನುರಾಗವನ್ನು ತೋಡಿಕೊಂಡರು. ಗಂಡು-ಹೆಣ್ಣುಗಳಾಗಿ ಕೂಡಿಕೊಂಡಿರಲು ಒಪ್ಪಿದರು.

ಆದರೆ ಊರ್ವಶಿ ಮೂರು ನಿರ್ಬಂಧಗಳನ್ನು ಮುಂದಿಟ್ಟಳು. ಹಗಲು ವೇಳೆಯಲ್ಲಿ ಮೂರು ಬಾರಿ ಮಾತ್ರ ತನ್ನನ್ನು ಆಲಿಂಗಿಸಿಕೊಳ್ಳ ಬಹುದು ; ಉಳಿದಂತೆ ತನ್ನನ್ನು ಮುಟ್ಟಬಾರದು ಎಂಬುದೊಂದು. ರಾತ್ರಿಯ ಕಾಲದಲ್ಲಿ ತನ್ನ ಒಪ್ಪಿಗೆಯಿಲ್ಲದೆ ಸಂಭೋಗ ಮಾಡಬಾರದು ; ಬೇರೆ ಹಾಸುಗೆಯ ಮೇಲೇ ಮಲಗಬೇಕು ಎಂಬುದಿನ್ನೊಂದು. ಬೆತ್ತಲೆಯಾಗಿ ತನ್ನೆದುರು ಎಂದೂ ಕಾಣಿಸಿಕೊಳ್ಳಬಾರದು ಎಂಬುದು ಮತ್ತೊಂದು. ಪುರೂರವಸ್ಸನಿಗೆ ಈ ಕಟ್ಟುಪಾಡುಗಳು ಎಷ್ಟು ಮಾತ್ರಕ್ಕೂ ಹಿತವೆನಿಸಲಿಲ್ಲ. ಆದರೆ ಮಾಡುವುದೇನು ? ಊರ್ವಶಿ ಬೇಕೆಂದರೆ ಈ ನಿರ್ಬಂಧಗಳಿಗೆ ಒಪ್ಪಿಕೊಳ್ಳದೆ ಬೇರೆ ದಾರಿಯಿರದು.

ಈ ಕಟ್ಟುಪಾಡುಗಳನ್ನು ಎಚ್ಚರಿಕೆಯಿಂದ ನಡೆಸಿಕೊಳ್ಳುತ್ತ ಪುರೂರವಸ್ಸು ಊರ್ವಶಿಯೊಂದಿಗೆ ನಾಲ್ಕು ವರ್ಷಗಳನ್ನು ಸುಖವಾಗಿ ಕಳೆದ. ಇಬ್ಬರೂ ಪ್ರಣಯಿಗಳು, ಕಾಮುಕರು, ತರುಣರು, ನಿರಾತಂಕವಾಗಿ ದ್ದವರು. ಕೇಳುವುದೇನು ? ಆದರೆ ಊರ್ವಶಿಯು ತನ್ನೂರಿಗೆ ಹಿಂದಿರುಗಲೇ ಇಲ್ಲ ; ಇಲ್ಲಿಗೆ ಬಂದವಳು ಏನಾದಳೆಂದು ಗಂಧರ್ವರಿಗೆಲ್ಲ ಯೋಚನೆ. ಬಂದಾಳೆಂದು ಎದುರು ನೋಡುತ್ತಲೇ ವರ್ಷಗಳು ಕಳೆದವು. ಕಡೆಗೊಮ್ಮೆ ಕೆಲವರು ಗಂಧರ್ವರು ಊರ್ವಶಿಯನ್ನು ಹುಡುಕಿಕೊಂಡು ಹೊರಟರು ; ಅಲ್ಲಲ್ಲಿ ತಿರುಗಾಡಿ ಪುರೂರವಸ್ಸಿನ ರಾಜ್ಯಕ್ಕೆ ಬಂದರು. ಅಲ್ಲಿ ಊರ್ವಶಿಯು ರಾಜನ ಮನದನ್ನೆಯಾಗಿರುವುದನ್ನು ಅರಿತು ಹಿಂದಿರುಗಿದರು.

ಇವರು ಹಿಂದಿರುಗಿದ ಮೇಲೆ, ಗಂಧರ್ವರೆಲ್ಲ ಕಲೆತು ತಮ್ಮ ಬುಡಕಟ್ಟಿನ ಹೆಣ್ಣೊಬ್ಬಳು ಬೇರೆಯ ಬುಡಕಟ್ಟಿನ ಗಂಡಿನೊಂದಿಗೆ ಕೂಡಿ ಕೊಂಡು ಅಲ್ಲಿಯೇ ತಳವೂರಿದ್ದು ಸರಿಯಲ್ಲವೆಂಬ ತೀರ್ಮಾನಕ್ಕೆ ಬಂದರು. ಹೇಗಾದರೂ ಮಾಡಿ ಊರ್ವಶಿಯನ್ನು ತಮ್ಮೂರಿಗೆ ಕರೆದು

ಕೊಂಡು ಬರಲು ಮನಸ್ಸು ಮಾಡಿದರು. ಕೆಲವರು ಗಂಧರ್ವರು ಹೋಗಿ ರಾಜನೊಂದಿಗೆ ಊರ್ವಶಿಯು ಮಾಡಿಕೊಂಡ ಕರಾರಿನ ವಿವರಗಳನ್ನು ತಿಳಿದುಕೊಂಡು ಬಂದರು. ಇವರು ಉಪಾಯವೊಂದನ್ನು ನಿರ್ಧರಿಸಿ ಕೊಂಡು, ತಮ್ಮೂರಿನ ಸೊಗಸಾದ ಕುರಿಯೊಂದನ್ನು ಅದರ ಎರಡು ಮರಿಗಳೊಂದಿಗೆ ತಂದು ಗುಟ್ಟಾಗಿ ಪುರೂರವಸ್ಸಿನ ಅರಮನೆಯೊಳಗೆ ಬಿಟ್ಟರು.

ಊರ್ವಶಿ ತನ್ನೂರಿನ ಈ ಕುರಿಯನ್ನೂ, ಕುರಿಮರಿಗಳನ್ನೂ ಕಂಡು ಹಿಗ್ಗಿದಳು. ಅವನ್ನು ತಾನೇ ಸಾಕಿಕೊಂಡಳು. ಅವನ್ನು ಬಿಟ್ಟು ಒಂದು ಗಳಿಗೆ ಇರುತ್ತಿರಲಿಲ್ಲ. ರಾತ್ರಿಯಲ್ಲಿ ತಾನು ಮಲಗುವ ಮಂಚದ ಕಾಲಿಗೇ ಕುರಿಯನ್ನು ಕಟ್ಟಿರುತ್ತಿದ್ದಳು ; ಮರಿಗಳೆರಡೂ ಅವಳ ಹಾಸುಗೆಯ ಮೇಲೇ ಮುದುರಿಕೊಂಡು ಮಲಗಿರುತ್ತಿದ್ದುವು.

ಹೀಗಿರಲು ಒಂದು ರಾತ್ರಿ ಕೆಲವರು ಗಂಧರ್ವರು ಗುಟ್ಟಾಗಿ ಅರಮನೆಗೆ ನುಗ್ಗಿ, ಊರ್ವಶಿಯ ಕೋಣೆಯಲ್ಲಿರುತ್ತಿದ್ದ ಕುರಿಮರಿಗಳಲ್ಲಿ ಒಂದನ್ನು ಕಳುವು ಮಾಡಿ ಒಯ್ದರು. ಮರಿಯು ಹೋದುದನ್ನು ಕಂಡು ಕುರಿ ಅರಚಿತು. ಈ ಸದ್ದಿಗೆ ಊರ್ವಶಿ ತಟ್ಟನೆ ಎದ್ದಳು. ತನ್ನ ಬಳಿಯೇ ಮಲಗಿದ್ದ ಎರಡು ಮರಿಗಳಲ್ಲಿ ಒಂದು ಕಾಣಲಿಲ್ಲ. ಅವಳಿಗೆ ದಿಗಿಲೂ, ದುಗುಡವೂ ಒಟ್ಟಿಗೆ ಆದುವು. ಅಯ್ಯೋ, ನನ್ನ ಮುದ್ದಿನಮರಿಯನ್ನು ಯಾರೋ ಕಳ್ಳರು ಒಯ್ದಿದ್ದಾರೆ ! ನನ್ನ ಮರಿಯನ್ನು ಕಾಪಾಡುವ ವೀರರು ಯಾರೂ ಇಲ್ಲವೆ ? ಇದೇನು ಗತಿಗೆಟ್ಟ, ಹೇಳುವವರಿಲ್ಲದ, ಕೇಳುವವರಿಲ್ಲದ ಊರಾಯಿತೆ ?'' ಎಂದು ಗಟ್ಟಿಯಾಗಿ ಕೂಗಿಕೊಂಡಳು. ಅಷ್ಟು ಹೊತ್ತಿಗೆ ಕತ್ತಲೆಯಲ್ಲಿ ಗಂಧರ್ವರು ಇನ್ನೊಂದು ಮರಿಯನ್ನೂ ಹಾರಿಸಿಕೊಂಡು ಹೋಗಿದ್ದರು.

ಊರ್ವಶಿಯ ಕೂಗಾಟಕ್ಕೆ ಪಕ್ಕದ ಕೋಣೆಯಲ್ಲಿ ಮಲಗಿದ್ದ ಪುರೂರವಸ್ಸಿಗೆ ಎಚ್ಚರವಾಯಿತು. ಬೆತ್ತಲೆ ಮಲಗಿದ್ದವನು ಹಾಗೆಯೇ ಎದ್ದು ಕತ್ತಿ ಹಿಡಿದು ಊರ್ವಶಿಯ ಕೋಣೆಯೊಳಗೆ ನುಗ್ಗಿದ. ''ನಾನಿರುವಾಗ ಇದು ಗತಿಗೆಟ್ಟ ಊರಾಗುವುದು ಹೇಗೆ ? ಊರ್ವಶಿ, ಏನಾಯಿತು ಹೇಳು ! ಕಳ್ಳರಾದರೆ ಅವರನ್ನು ಹಿಡಿದು ದಂಡಿಸದೆ ಬಿಡುವುದಿಲ್ಲ !'' ಎಂದು ಅವನು ಕತ್ತಲಲ್ಲೇ ಊರ್ವಶಿಯೆದುರು ನಿಂತು ಹೇಳುತ್ತಿರುವಾಗಲೇ, ಗಂಧರ್ವರು ಅವನ ಮೇಲೆ ದೀಪವನ್ನು ಹಾಯಿಸಿದರು. ಬೆತ್ತಲೆಯಾಗಿ ತನ್ನ ಮುಂದೆ ನಿಂತ ಪುರೂರವಸ್ಸನ್ನು ಕಂಡೊಡನೆಯೇ ಊರ್ವಶಿ, ತಾನು ಹಾಕಿದ ಮೂರು ಕರಾರುಗಳೊಳಗೆ ಒಂದು ಮುರಿದಂತಾಯಿತೆಂದು ಅಲ್ಲಿಂದ ಮರೆಯಾಗಿಬಿಟ್ಟಳು. ಅಲ್ಲಿಗೆ ಬಂದಿದ್ದ ಗಂಧರ್ವರು ಅವಳನ್ನು ತಮ್ಮೂರಿಗೆ ಕರೆದೊಯ್ದರು.

ಪುರೂರವಸ್ಸು ದೀಪವನ್ನು ಬೆಳಗಿ ನೋಡುವಾಗ ಊರ್ವಶಿ ಅಲ್ಲಿರಲಿಲ್ಲ. ಏನಾದಳೆಂದು ಕಾತರಗೊಂಡು ಎಲ್ಲೆಲ್ಲಿಯೋ ಹುಡುಕಾಡಿದ. ಎಲ್ಲಿಯೂ ಅವಳನ್ನು ಕಾಣದೆ ಅವನ ದುಃಖ ಹುಚ್ಚು ಹೊಳೆಯಾಗಿ ಹರಿಯಿತು. ಊರ್ವಶಿಯಿಲ್ಲದ ಬಾಳು ಅವನ ಪಾಲಿಗೆ ಕೊನೆಯಿಲ್ಲದ ಬವಣೆಯಾಯಿತು. ಮೈಬಲ ಉಡುಗಿದಂತಾಯಿತು ; ಏನು ಮಾಡಲೂ ಉತ್ಸಾಹವಿಲ್ಲದಾಯಿತು ; ಊಟ ನಿದ್ರೆಗಳೂ ಬೇಡವಾದುವು. ಊರ್ವಶಿಯದೇ ಚಿಂತೆ ಅನುಗಾಲವೂ. ಕುರುಕ್ಷೇತ್ರದಲ್ಲೆಲ್ಲ ಅಲೆದಾಡಿದ.

ಹೀಗೆ ಕೆಲವು ವರ್ಷಗಳೇ ಕಳೆದುವು. ಊರ್ವಶಿಯೇನೋ ಪುರೂರವಸ್ಸನ್ನು ಮರೆತೇಬಿಟ್ಟಿದ್ದಳೆನ್ನಿ. ಗಂಧರ್ವಜನರ ಮನೋಧರ್ಮವೇ ಹಾಗೆ. ಎದುರಿಗಿದ್ದಾಗ ಒಲುಮೆ, ಮರೆಯಾದರೆ ಮರವೆಯೇ, ಗಂಡನೇನು, ಹೆಂಡತಿಯೇನು ಬೇಕೆನಿಸಿದಾಗ ಬೇಕು ; ಆಗ ಆದರ. ಅದು ತೀರಿತೆಂದರೆ 'ಯಾರಿಗೆ ಯಾರೋ.' ಪುರೂರವಸ್ಸು ಕುರುಕ್ಷೇತ್ರದಲ್ಲಿ

ಊರ್ವಶಿಯನ್ನೇ ಮನಸ್ಸಿನಲ್ಲಿರಿಸಿಕೊಂಡು ತಿರುಗಾಡುತ್ತಿದ್ದಾಗ, ಅಲ್ಲಿದ್ದ ಒಂದು ಕೊಳದ ದಡದ ಮೇಲೆ ಬಂದ. ಅದೇ ಸಮಯಕ್ಕೆ ಸರಿಯಾಗಿ ಊರ್ವಶಿಯು ತನ್ನ ಐವರು ಸಖಿಯರೊಂದಿಗೆ ಅನ್ಯತಃಪ್ಲಕ್ಷವೆಂಬ ಹೆಸರಿನ ಆ ಕೊಳದಲ್ಲಿ ನೀರುಕೋಳಿಗಳಂತೆ ಈಜಾಡುತ್ತಿದ್ದಾಳೆ. ಈ ಆರೂ ಹೆಂಗಳೆಯರು ಒಂದೇ ರೂಪದವರು ; ಗಂಧರ್ವರು.

ಆದರೆ ಪುರೂರವಸ್ಸು ಇವರ ಕಡೆ ಕಣ್ಣಾಡಿಸದೆ, ತನ್ನ ವಿರಹವೇದನೆಯಲ್ಲಿ ನೀರವವಾಗಿ ಮುಗಿಲನ್ನೇ ದಿಟ್ಟಿಸಿ ನಿಂತುಬಿಟ್ಟಿದ್ದ. ಊರ್ವಶಿಯಾದರೋ ಇವನನ್ನು ನೋಡಿ ಇವನು ತನ್ನೊಂದಿಗೆ ಗಂಡನಾಗಿ ಇದ್ದ ಪುರೂರವಸ್ಸೆಂದು ತನ್ನ ಸಖಿಯರಿಗೆ ಹೇಳಿದಳು. ಅವರೆಲ್ಲರೂ ನೀರಿನಿಂದ ಮೇಲೆದ್ದು ಪುರೂರವಸ್ಸನ್ನ ಎದುರು ಬಂದು ನಿಂತರು. ಊರ್ವಶಿಯು ಮುಂದೆ ಬಂದಾಗ ಪುರೂರವಸ್ಸಿಗೆ ಅವಳ ಅರಿವಾಯಿತು.

(ಋಗ್ವೇದದಲ್ಲಿ ಬರುವ ಸಂವಾದಕ್ಕೆ ಇದು ಹಿನ್ನೆಲೆ)

ಊರ್ವಶಿಗೆ ಅವನೊಂದಿಗೆ ಮಾತನಾಡಬೇಕೆಂಬ ಬಯಕೆಯೇ ನಿರಲಿಲ್ಲ, ಅವನನ್ನು ಕಾಣುವ ಕುತೂಹಲ ಅಷ್ಟೆ. ಕಂಡು ಹಿಂದಿರುಗುವ, ಹೊರಟುಹೋಗುವ ಹವಣಿಕೆಯಲ್ಲಿದ್ದಾಗ ಪುರೂರವಸ್ಸನಿಗೆ ತಡೆಯಲಾ ಗಲಿಲ್ಲ. ಇದ್ದಕ್ಕಿದ್ದಂತೆ ತನ್ನ ಪ್ರೇಯಸಿಯನ್ನು ಕಂಡೊಡನೆ ಅವನ ದುಗುಡ ವೆಲ್ಲ ಒಮ್ಮೆಲೆ ಉಮ್ಮಳಿಸಿ ಬಂದಂತಾಯಿತು ; ಮನದಾಸೆಯು ಚಿಗುರಿ ದಂತೆಯೂ ಆಯಿತು. ಅವಳ ಮುಂದೆ ತನ್ನ ಅಳಲನ್ನೆಲ್ಲ ತೋಡಿಕೊಳ್ಳಲು ತಯಾರಾಗುತ್ತಿದ್ದಾಗಲೇ ಅವಳು ಅಲ್ಲಿಂದ ಕಾಲು ಕಿತ್ತರೆ ಹೇಗೆ ?

"ನಿಲ್ಲು, ಮನದನ್ನೆ, ನಿನ್ನ ಒಡಲೇನು ಗಟ್ಟಿ ಬಂಡೆಯೆ ? ನಿನ್ನ ಮನಸ್ಸು ಅಷ್ಟು ಕ್ರೂರವಾದುದೆ ? ನಮ್ಮ ಒಲುಮೆಯನ್ನು ನೆನೆಸಿಕೊಳ್ಳುತ್ತ

ಕಷ್ಟದಿಂದ ನೂಕಿದ ದಿನಗಳನ್ನು ಗುರುತಿಸುತ್ತ ಪ್ರೀತಿಯಿಂದ ನಿಂತು ನಾಲ್ಕು ಮಾತನಾಡಬೇಡವೆ ?'' ಎಂದು ಪುರೂರವಸ್ಸು ಹೇಳಲು, ಊರ್ವಶಿ

''ಮಾತನಾಡಿ ಮಾಡುವುದೇನು, ಪುರೂರವಾ ? ಮುಂಜಾನೆಯ ಮೊದಲ ಹೊಂಬೆಳಕು ಮತ್ತೆ ಮರಳುವುದೆ ? ನಾನೂ ಹಾಗೆಯೇ. ನಿನ್ನಿಂದ ದೂರ ಸರಿದಿದ್ದೇನೆ, ಮತ್ತೆ ನಿನಗೆ ಸಿಗಲಾರೆನೆಂದು ತಿಳಿ. ಗಾಳಿಯನ್ನು ಕೈಯಲ್ಲಿ ಹಿಡಿಯಲು ತೊಡಗಬೇಡ. ನನ್ನನ್ನು ಮರೆತು ಮನೆಗೆ ಮರಳು'' ಎಂದಳು. ಹೀಗೆ ಕಠೋರ ಹೃದಯದ ಹೆಣ್ಣು ಹೇಳಲು ಪುರೂರವಸ್ಸಿನ ಎದೆ ನಡುಗಿತು ; ಕಣ್ಣುಗಳು ಮಂಜಾದುವು ; ಬಲವುಡುಗಿತು. ಆದರೆ ಊರ್ವಶಿಯೇನೂ ಆಗಲೇ ಅವನನ್ನು ಅಗಲಲಿಲ್ಲ ; ಅವನೊಂದಿಗೆ ಮಾತನಾಡುತ್ತ ನಿಂತಳು. ಆದರೆ ಮೊದಲಿನ ಒಲುಮೆಯೇನೂ ತೋರಲಿಲ್ಲ. ಕಡೆಗೆ ಪುರೂರವಸ್ಸನು ತನ್ನ ದುಃಖವನ್ನು ತಡೆಯಲಾರದೆ,

''ನೀನು ಹೊರಟುಹೋಗುವುದಾದರೆ, ನನ್ನ ದೇಹವು ಇಲ್ಲೇ ನೆಲದ ಮೇಲೆ ಒರಗೀತು ; ಈ ಲೋಕವನ್ನೇ ಬಿಟ್ಟು ನನ್ನ ಪ್ರಾಣವು ದೂರ ಸರಿದೀತು ! ಪಾಪದೇವತೆಯ ಮಡಿಲಲ್ಲಿ ಮಲಗಿಯೇನು (ಎಂದರೆ ಸಾಯುವೆನು). ನನ್ನ ಹೆಣವನ್ನು ತೋಳಗಳು ಬಗೆದು ತಿನ್ನಲಿ !'' ಎಂದು ಹೇಳಲು, ಊರ್ವಶಿಯು,

''ಪುರೂರವಾ, ನೀನು ಸಾಯಲೂ ಬೇಡ, ತೋಳಗಳು ನಿನ್ನನ್ನು ತಿನ್ನುವುದೂ ಬೇಡ ! ಸಮಾಧಾನ ಮಾಡಿಕೋ ! ಹೆಂಗಳೆಯರೊಂದಿಗೆ ಇಂಥ ನಂಟು ಎಂದಿಗೂ ಉಳಿಯುವಂಥದಲ್ಲ ; ಇಂಥ ಹೆಂಗಳೆಯರ ಒಡಲು ತೋಳಗಳಂತೆಯೇ ನಿರ್ದಯವಾಗಿರುವುದು ! ನಿನ್ನೊಡನೆ ನಾಲ್ಕು ವರ್ಷಗಳನ್ನು ಕಳೆದೆನಲ್ಲವೆ ? ಅದು ಸುಖವಾಗಿದ್ದಿತು, ಅದು ನನಗೆ ಸಾಕು. ನಿನಗೂ ಅಷ್ಟೇ ಸಾಕೆಂದು ಭಾವಿಸು'' ಎಂದು ಸಮಾಧಾನಪಡಿಸಿ,

ಅವನ ಅಳಲನ್ನು ತಾಳಲಾರದೆ, ''ಈ ಸಂವತ್ಸರದ ಕಡೆಯಲ್ಲೊಂದು ರಾತ್ರಿ ನನ್ನ ಬಳಿಗೆ ಬಾ !'' ಎಂದು ಹೇಳಿ ಹೊರಟುಹೋದಳು.

ಹಾಗೆಯೇ ಪುರೂರವಸ್ಸನು ಸಂವತ್ಸರ ಮುಗಿಯುವವರೆಗೂ ಕಾದು, ಆ ರಾತ್ರಿ ಊರ್ವಶಿಯ ಬೀಡಿಗೆ ಹೋಗಿ, ಅವಳೊಂದಿಗೆ ಸುಖವಾಗಿ ರಾತ್ರಿಯನ್ನು ಕಳೆದನು. ಮರುದಿನ ಬೆಳಿಗ್ಗೆ ಗಂಧರ್ವರು ಬಂದು ಅವನಿಗೊಂದು ವರವನ್ನು ನೀಡುವರೆಂದು ಊರ್ವಶಿ ತಿಳಿಸಿದಳು. ''ನಿನಗೆ ಬೇಕಾದ ವರವನ್ನು ಕೇಳಿಕೋ'' ಎಂದು ಊರ್ವಶಿ ಸೂಚಿಸಲು, ''ನಾನು ಏನೆಂದು ಕೇಳಲಿ ?'' ಎಂದು ಪುರೂರವಸ್ಸನು ಅವಳನ್ನೇ ಕೇಳಿದನು. ಆಗ ಊರ್ವಶಿಯು ''ನಾನೂ ನಿಮ್ಮಂತೆ ಗಂಧರ್ವನಾಗಬೇಕೆಂದು ಕೇಳಿಕೋ!'' ಎಂದು ಸೂಚಿಸಿದಳು.

ಮರುದಿನ ಗಂಧರ್ವರು ಪುರೂರವಸ್ಸು ಇದ್ದೆಡೆಗೆ ಬಂದು, ಅವನನ್ನು ಆದರದಿಂದ ಕಂಡು, ಬೇಕಾದ ವರವನ್ನು ನೀಡುವೆವೆಂದರು. ಪುರೂರವಸ್ಸು ಮೊದಲೇ ಊರ್ವಶಿಯು ತಿಳಿಸಿದ್ದಂತೆ ''ನಿಮ್ಮೊಡನೆ ನಾನೂ ಬೆರೆತು ಒಂದಾಗಬೇಕು ; ನಿಮ್ಮಂತೆಯೇ ನನ್ನನ್ನೂ ಗಂಧರ್ವ ನನ್ನಾಗಿ ಮಾಡಿ'' ಎಂದು ಕೇಳಿದನು.

''ಹಾಗೆಯೇ ಮನುಷ್ಯನಾದವನು ಗಂಧರ್ವನಾಗಲಾರ. ಗಂಧರ್ವ ನಾಗಲು ಮುಖ್ಯವಾದುದು ಯಜ್ಞತತ್ತ್ವ. ಅದರ ಸಲುವಾಗಿ ಅಗ್ನಿಯನ್ನು ಕೊಡುತ್ತೇವೆ'' ಎಂದು ಹೇಳಿ ಅಗ್ನಿಯನ್ನು ಅವನಿಗೆ ನೀಡಿದರು. ಪುರೂರವಸ್ಸನು ಅಗ್ನಿಯನ್ನು ಆರಾಧಿಸಿ ಗಂಧರ್ವನಾದನು ; ಮತ್ತೆ ಊರ್ವಶಿಯನ್ನೂ ಪಡೆದುಕೊಂಡನು. ಊರ್ವಶಿಯಿಂದ ಆಯುವೇ ಮೊದಲಾದ ಆರು ಮಂದಿ ಮಕ್ಕಳಾದರು. ಇವರು ಪೌರವ ಸಂತತಿಯನ್ನು ಬೆಳಸಿದರು.

[ಈ ಕತೆಗೊಂದು ಸಂಕೇತದ ನೆಲೆಯನ್ನೂ ನಿರುಕ್ತಕಾರರಾದ ಯಾಸ್ಕರು ಕಾಣಿಸಿದ್ದಾರೆ. ಪುರೂರವನೆಂದರೆ ದೊಡ್ಡದಾಗಿ ಶಬ್ದಮಾಡುವ ಗುಡುಗು-ಸಿಡಿಲು ; ಊರ್ವಶಿಯೆಂದರೆ ದೊಡ್ಡದಾದ ಬಯಕೆಯನ್ನುಳ್ಳ ಮಿಂಚು. ಗುಡುಗು-ಸಿಡಿಲು ಮತ್ತು ಮಿಂಚು ಎರಡೂ ಕೂಡಿದ ಮಳೆಯು ಎಲ್ಲರಿಗೂ ಬೇಕಾದ ನೀರನ್ನು ಒದಗಿಸುವುದು ಈ ಸಂವಾದದ ತಾತ್ಪರ್ಯ. ಇಳೆಯೆಂದರೆ ನೆಲ ; ಇಳೆಯ ಮಗ ಪುರೂರವಸ್ಸು ಐಳ ; ಊರ್ವಶಿ ಅಂತರಿಕ್ಷದ ಬೆಳಕು. ನೆಲಕ್ಕೂ, ಬೆಳಕಿಗೂ ಒದಗುವ ನಂಟು ಸೃಷ್ಟಿಯಲ್ಲಿ ಮೊದಲ ಹೆಜ್ಜೆ. ಇದೂ ಸೂಕ್ತದ ಸಂದರ್ಭವಂದೇ ಶಾಕಪೂಣಿಯೆಂಬ ಪ್ರಾಚೀನ ಆಚಾರ್ಯರ ಎಣಿಕೆ.]

ಅಪಾಲೆಯ ಉಪಾಯ

[ಋಗ್ವೇದದಲ್ಲಿ ಹಲವಾರು ಹೆಣ್ಣುಮಕ್ಕಳು ಋಷಿಗಳಾಗಿದ್ದುದು ತಿಳಿದುಬರುತ್ತದೆ. ಅವರಲ್ಲಿ ಒಬ್ಬಳು ಅಪಾಲಾತ್ರೇಯಿ, ಎಂದರೆ ಅತ್ರಿಯ ಮಗಳು ಅಪಾಲೆ. ಋಗ್ವೇದದ ಎಂಟನೆಯ ಮಂಡಲದಲ್ಲಿ ಏಳು ಮಂತ್ರಗಳಿರುವ ಒಂದು ಸೂಕ್ತ (ತೊಂಬತ್ತೊಂದನೆಯದು) ಅವಳದ್ದೇ ಕಾಣ್ಕೆ, ಅವಳದ್ದೇ ಕೊಡುಗೆ. ಈ ಸೂಕ್ತದ ಹಿನ್ನೆಲೆಯಲ್ಲಿ ಇತಿಹಾಸವೊಂದಿದೆ ಯೆಂದು ನಿರುಕ್ತಕಾರರಾದ ಯಾಸ್ಕರು ಸೂಚಿಸಿದ್ದಾರೆ. ಇದರ ಸ್ಥೂಲವಾದ ಚೌಕಟ್ಟು ಲಾಟ್ಯಾಯನ ಬ್ರಾಹ್ಮಣದಲ್ಲಿ ಕಂಡುಬರುವುದೆಂದು ಭಾಷ್ಯಕಾರರಾದ ಸಾಯಣರು ಉಲ್ಲೇಖಿಸಿದ್ದಾರೆ ; ಕೆಲವು ವಿವರಗಳನ್ನೂ ಕಾಣಿಸಿದ್ದಾರೆ. ಕೊಂಚ ಮಾರ್ಪಾಟಿನೊಂದಿಗೆ ಬೃಹದ್ದೇವತೆಯಲ್ಲೂ ಈ ಕತೆ ಬಂದಿದೆ.]

ವೇದಕಾಲದ ಋಷಿಗಳಲ್ಲಿ ಅತ್ರಿ ಪ್ರಸಿದ್ಧನಾದವನು. ಅವನ ಮಗಳು ಅಪಾಲೆ. ಎಳೆವಯಸ್ಸಿನಲ್ಲೇ ತಂದೆ ಅವಳಿಗೆ ವೇದವಿದ್ಯೆಯನ್ನು ಕಲಿಸಿದನು ; ಅವಳು ತಾನೇ ಮಂತ್ರಗಳನ್ನೂ ಕಂಡುಕೊಳ್ಳುವಷ್ಟು ಕುಶಲಳಾಗಿದ್ದಳು. ತಾರುಣ್ಯವೊದಗಿದ ಗಳಿಗೆಯಲ್ಲೇ ತಂದೆಯು ಅವಳನ್ನು ಒಬ್ಬ ಅನುರೂಪನಾದ ವರನಿಗೆ ಮದುವೆ ಮಾಡಿಕೊಟ್ಟು ಕಳುಹಿಸಿದನು.

ಗಂಡನ ಮನೆಗೆ ಹೋದ ಅಪಾಲೆಗೆ ಕೆಲವು ಕಾಲವಾದ ಮೇಲೆ ಅದು ಯಾವ ಕಾರಣದಿಂದಲೋ ಗುಹ್ಯಸ್ಥಳದಲ್ಲಿ ಚರ್ಮದ ರೋಗ

ವೊಂದು ಕಾಣಿಸಿಕೊಂಡಿತು. ಇದನ್ನು ಕಂಡ ಗಂಡನು ಅವಳನ್ನು ಮನೆಯಿಂದ ಹೊರದೂಡಿಬಿಟ್ಟನು. ಬೇರೆ ದಾರಿ ಕಾಣದೆ ಅಪಾಲೆಯು ತನ್ನ ತಂದೆಯ ಆಶ್ರಮಕ್ಕೆ ಮರಳಿದಳು. ತಂದೆಯಾದರೋ ಮಗಳನ್ನು ಆದರದಿಂದಲೇ ಬರಮಾಡಿಕೊಂಡನು. ಬಂದುದನ್ನು ಅನುಭವಿಸಬೇಕು ; ಯಾರೇನು ಮಾಡಲಾದೀತು ? ಅಪಾಲೆಯೂ ತಪಸ್ಸನ್ನು ಕೈಗೊಂಡಳು.

ತಪಸ್ವಿನಿಯಾದ ಈ ಹೆಣ್ಣು ಮಗಳಿಗೆ ಆಶ್ರಮದ ಕೆಲವರು ಋಷಿಗಳು ''ಇಂದ್ರನು ಸೋಮಪ್ರಿಯ ; ಸೋಮರಸವನ್ನು ಕುಡಿಯುವು ದೆಂದರೆ ಅವನಿಗೆ ಎಲ್ಲಿಲ್ಲದ ಆದರ. ಅವನನ್ನು ಒಲಿಸಿಕೊಂಡರೆ ನಿನ್ನ ಕಷ್ಟವೂ ನೀಗುತ್ತದೆ. ಯಾತಕ್ಕೆ ಪ್ರಯತ್ನಿಸಬಾರದು ?'' ಎಂದು ಸೂಚಿಸಿದರು.

ಸೋಮವೆಂಬುದು ಹಿಮಾಲಯದ ಪರಿಸರದಲ್ಲಿ ಬೆಳೆಯುತ್ತಿದ್ದ ಬಳ್ಳಿ. ಅದರ ಕುಡಿಗಳನ್ನೂ, ಎಲೆಗಳನ್ನೂ ಕಿತ್ತು ತಂದು, ಅದಕ್ಕಾಗಿಯೇ ಮಾಡಿಕೊಂಡಿದ್ದ ಕಲ್ಲುಗಳಿಂದ ಜಜ್ಜಿ ರಸವನ್ನು ತೆಗೆದು ಕುಡಿಯುವ ವಾಡಿಕೆಯಿದ್ದಿತು. ನಾಲಗೆಗೆ ರುಚಿಕರವಾಗಿದ್ದುದಲ್ಲದೆ ಮೈಗೆ ಬಲವನ್ನೂ, ಮನಸ್ಸಿಗೆ ಉಲ್ಲಾಸವನ್ನೂ ನೀಡುವ ಗುಣ ಈ ಪಾನೀಯಕ್ಕಿದ್ದಿತು. ಯಜ್ಞದ ಸಂದರ್ಭದಲ್ಲಿ ಇದನ್ನು ದೇವತೆಗಳಿಗೆ ಉಣಬಡಿಸುವುದೂ ಇದ್ದಿತು ; ಸೋಮರಸವನ್ನು ಋತ್ವಿಗ್ಜನರೂ, ಸಭಾಸದರೂ ಸೇವಿಸುವುದೂ ಇದ್ದಿತು. ಸೋಮರಸವನ್ನು ಕುಡಿದೇ ದೇವತೆಗಳ ಒಡೆಯನಾದ ಇಂದ್ರನು ವೀರನಾದದ್ದು, ಶತ್ರುಗಳನ್ನು ಸದೆಬಡಿದದ್ದು, ಲೋಕಕ್ಕೆ ಉಪಕಾರಕ ನಾದದ್ದು.

ಆದರೆ ಸೋಮರಸವನ್ನೇನು ಎಲ್ಲ ಋಷಿಗಳೂ ಕುಡಿಯುತ್ತಿರಲಿಲ್ಲ. ಆ ಬಳ್ಳಿಯು ಎಲ್ಲ ಕಡೆ ಬೆಳೆಯುತ್ತಲೂ ಇರಲಿಲ್ಲ. ಅತ್ರಿಯ ಆಶ್ರಮದಲ್ಲಿ ಸೋಮಪಾನವೆಂಬುದು ಇರಲೇ ಇಲ್ಲ. ಅತ್ರಿಯ ಮಗಳಾದ ಅಪಾಲೆಯು ಸೋಮಲತೆಯನ್ನು ಗುರುತಿಸಬಲ್ಲವಳಾದರೂ, ಸೋಮರಸದ ರುಚಿ

ಯನ್ನು ಎಂದೂ ಕಂಡಿರಲಿಲ್ಲ. ಇಂದ್ರನು ಸೋಮರಸವನ್ನು ಕುಡಿಯಲು ಕಾತರನಾಗಿರುತ್ತಾನೆಂಬುದೂ, ಸೋಮರಸದ ಪಾನಕ್ಕೆಂದು ಯಾರು ಎಲ್ಲಿಗೆ ಕರೆದರೆ ಅಲ್ಲಿಗೆ ಹೋಗಲು ಹಿಂದೆಮುಂದೆ ನೋಡುವುದಿಲ್ಲವೆಂಬುದೂ ಅವಳಿಗೆ ತಿಳಿದಿದ್ದಿತು. ಆದರೆ ಯಾರಾದರೂ ಬಯಸಿದ್ದನ್ನು ಪೂರೈಸುವುದರಲ್ಲಿ ಇಂದ್ರನು ಗಟ್ಟಿಗನೆಂಬುದು ಆಕೆಗೆ ಹೊಸ ವಿಚಾರ.

ಅಪಾಲೆಯು ಒಮ್ಮೆ ಸ್ನಾನಕ್ಕೆಂದು ನದಿಗೆ ಹೊರಟಳು. ನದಿಯ ದಂಡೆಯ ಮೇಲೆ ಕೆಲವು ಸೋಮಜಾತಿಯ ಗಿಡಗಳು ಬೆಳೆದಿದ್ದುದನ್ನು ನೋಡಿದಳು. ತಟ್ಟನೆ ಋಷಿಗಳು ಹೇಳಿದ್ದ ಮಾತೂ ನೆನಪಿಗೆ ಬಂದಿತು. ''ಇರಲಿ, ಇಂದ್ರನಿಗೆ ಈ ಸೋಮಲತೆಯ ರಸವನ್ನು ಸಲ್ಲಿಸಿ, ಹೇಗಾದರೂ ನನ್ನ ಕಷ್ಟವನ್ನು ನೀಗಿಸಿಕೊಳ್ಳಬಾರದೇಕೆ ?'' ಎನಿಸಿತು. ನದಿಯಲ್ಲಿ ಸ್ನಾನವನ್ನು ಮುಗಿಸಿ, ಕೆಲವು ಎಲೆಗಲನ್ನೂ, ಕುಡಿಗಳನ್ನೂ, ಬಳ್ಳಿಗಳನ್ನೂ ಕೊಯ್ದು ಮಡಿಲಿಗೆ ಹಾಕಿಕೊಂಡು ಮನೆಯ ಕಡೆ ಹೊರಟಳು. ಮನೆಯಲ್ಲಿ ಕಲ್ಲಿನಿಂದ ಜಜ್ಜಿ ರಸವನ್ನು ತೆಗೆಯುವುದೆಂದೂ, ಇಂದ್ರನನ್ನು ಕರೆದು ಕೊಡುವುದೆಂದೂ ಅವಳ ಹವಣಿಕೆ.

ದಾರಿಯಲ್ಲಿ ನಡೆಯುತ್ತ ''ಇದೇನು, ಸೋಮರಸದ ರುಚಿ ಹೇಗಿರುತ್ತದೆ ? ಇಂದ್ರನು ಇದನ್ನು ಇಷ್ಟೊಂದು ಬಯಸುವುದಕ್ಕೆ ಕಾರಣವೇನು ? ನೋಡೋಣ'' ಎಂದುಕೊಂಡು ಒಂದು ಬಳ್ಳಿಯನ್ನು ಬಾಯಿಗಿಟ್ಟು ಹಲ್ಲುಗಳಿಂದ ಕಬ್ಬಿನ ಜಲ್ಲೆಯನ್ನು ಜಗಿಯುವಂತೆ ಜಗಿದಳು ; ರಸ ಒಸರತೊಡಗಿತು. ಅದರ ರುಚಿ ಅವಳಿಗೆ ತಿಳಿಯಿತು. ಆದರೆ ಅವಳು ಹಲ್ಲುಗಳಿಂದ ಜಗಿದ ಸದ್ದು ಎಲ್ಲಿಯೋ ಇದ್ದ ಇಂದ್ರನಿಗೆ ಕೇಳಿಸಿತು. ಕಲ್ಲುಗಳಿಂದ ಸೋಮವನ್ನು ಜಜ್ಜುವಂತೆಯೇ ಇದ್ದಿತು ಈ ಸದ್ದು.

ಒಡನೆಯೇ ಇಂದ್ರ ಅಲ್ಲಿಗೆ ರಥವನ್ನೇರ ಭರದಿಂದ ಬಂದ ; ರಥವನ್ನು ನಿಲ್ಲಿಸಿ, ಸುತ್ತಲೂ ನೋಡಿದ. ಈ ಹೆಣ್ಣುಮಗಳನ್ನು ಬಿಟ್ಟು ಬೇರೆ

ಯಾರೂ ಅಲ್ಲಿ ಅವನಿಗೆ ಕಾಣಿಸಲಿಲ್ಲ. ಅವನ ಮನಸ್ಸೆಲ್ಲ ಸೋಮರಸದ ಮೇಲೆ. ಅವನು ರಥದಿಂದಿಳಿದು ಅಪಾಲೆಯ ಬಳಿ ಬಂದು, ''ಅಮ್ಮಾ ಇಲ್ಲಿ ಯಾರೋ ಸೋಮರಸವನ್ನು ತೆಗೆಯುತ್ತಿದ್ದಾರೆ. ಕಲ್ಲಿನಿಂದ ಜಜ್ಜುತ್ತಿರುವ ಶಬ್ದ ಕೇಳಿಸುತ್ತಿದೆ. ಅದು ಯಾರು, ಎಲ್ಲಿ ಎಂಬುದನ್ನೇನಾದರೂ ಬಲ್ಲೆಯಾ ?'' ಎಂದು ಕೇಳಿದನು. ಅವನ ಆತುರವನ್ನೂ, ಕಾತರವನ್ನೂ, ಅರಳಿದ ಕಣ್ಣುಗಳನ್ನೂ ನೋಡಿ ಅಪಾಲೆಗೆ ಇವನು ಇಂದ್ರನೇ ಇರಬಹುದೇ ಎಂಬ ಸಂದೇಹ ಮೂಡಿತು. ಆದರೆ ಅದನ್ನು ತೋರಗೊಡದೆ, ''ಅಯ್ಯಾ, ಇಲ್ಲಿ ಯಾರೂ ಕಲ್ಲಲ್ಲಿ ಜಜ್ಜಿ ಸೋಮರಸವನ್ನು ತೆಗೆಯುತ್ತಿಲ್ಲ. ನೀನು ಕೇಳಿದ ಸದ್ದು ಸೋಮಲತೆಯನ್ನು ನನ್ನ ಹಲ್ಲುಗಳು ಜಗಿಯುತ್ತಿರುವ ಸದ್ದು ಅಷ್ಟೆ ಇಗೋ ನನ್ನ ಮಡಿಲಲ್ಲಿ ಸೋಮಲತೆಯಿದೆ ನೋಡು !'' ಎಂದು ತೋರಿಸಿದಳು.

''ಹಾಗೋ, ಸರಿ'' ಎಂದು ಇಂದ್ರನು ಹಿಂದಿರುಗಿ ಹೊರಟನು. ಆದರೆ ಅಪಾಲೆ ಅವನನ್ನು ತಡೆದು ''ಅಯ್ಯಾ, ನಿಲ್ಲಿರಿ. ನೀವು ಯಾರೆಂಬುದು ನನಗೆ ತಿಳಿಯದು. ದೇವತೆಗಳ ದಣಿಯಾದ ಇಂದ್ರನೇ ಇದ್ದೀತೆಂದು ನನಗನಿಸುತ್ತಿದೆ ; ನಿಜವೋ ಸುಳ್ಳೋ, ಯಾರಾದರಿರಲಿ. ನಿಮಗೆ ಸೋಮರಸವೆಂದರೆ ಪ್ರೀತಿಯೆಂದು ತೋರುತ್ತದೆ. ನನ್ನ ಮನೆಗೆ ಬನ್ನಿ. ಸೋಮವನ್ನು ಕಲ್ಲಿನಿಂದ ಜಜ್ಜಿ ರಸವನ್ನು ಕುಡಿಯಲು ಕೊಡುತ್ತೇನೆ. ಜೊತೆಗೆ ತಿನ್ನಲು ಹುರಿಹಿಟ್ಟಿನ ಉಂಡೆಗಳನ್ನೂ, ಕಡುಬುಗಳನ್ನೂ ಕೊಡುತ್ತೇನೆ, ಬನ್ನಿ'' ಎಂದು ಕರೆದಳು.

ಅಪಾಲೆಯ ಸರಳಸ್ವಭಾವವನ್ನೂ, ಔದಾರ್ಯವನ್ನೂ ಕಂಡು ಇಂದ್ರನಿಗ ಸಂತೋಷವಾಯಿತು. ಸೋಮರಸದ ಆಸೆಯಂತೂ ಇದ್ದದ್ದೇ. ಅವನು ಅಪಾಲೆಗೆ ''ಅಮ್ಮಾ ನೀನು ಅಂದುಕೊಂಡದ್ದು ಸರಿಯೇ, ನಾನು ಇಂದ್ರನೇ. ನಿನ್ನ ಮನೆಗೆ ಬರುತ್ತೇನೆ, ನಡಿ'' ಎಂದು ಹೇಳಿದನು. ಅವನೇ

ಇಂದ್ರನೆಂಬುದನ್ನು ತಿಳಿದು ಅಪಾಲೆ ಹಿರಿಹಿಗ್ಗಿದಳು. ಅಷ್ಟೂ ಹೊತ್ತು ಸೋಮಲತೆಯನ್ನು ಜಗಿದು ತಿನ್ನುತ್ತಲೇ ಇದ್ದಳು, ಬಾಯಿಂದ ಸೋಮರಸ ಒಸರುತ್ತಲೇ ಇದ್ದಿತು.

ಅಪಾಲೆಯು "ಅಯ್ಯಾ, ನಿಮಗೆ ಸೋಮರಸವೆಂದರೆ ಅಷ್ಟು ಪ್ರೀತಿ ! ಮನೆಗೆ ಹೋಗುವವರೆಗೆ ಕಾಯುವುದೇಕೆ ? ನನ್ನ ಹಲ್ಲುಗಳಿಂದಲೇ ಒಂದೆರಡು ಬಳ್ಳಿಗಳನ್ನು ಜಗಿದು ರಸವನ್ನು ಹಿಂಡುತ್ತೇನೆ ; ಅದನ್ನು ಇಲ್ಲೇ ಕುಡಿಯಬಹುದಲ್ಲ ?" ಎಂದು ಸೂಚಿಸಲು ಇಂದ್ರನು ಒಪ್ಪಿದನು. ಅವಳ ಬಾಯಿಂದ ಹೊರಬಿದ್ದ ಸೋಮರಸವನ್ನೇ ಬೊಗಸೆಯಲ್ಲಿ ಹಿಡಿದು ಕುಡಿದನು. ಅನಂತರ ಅಪಾಲೆಯೊಂದಿಗೆ ಅವಳ ಮನೆಗೆ ಹೋದನು. ಅಲ್ಲಿ ಅಪಾಲೆ ಸೋಮರಸವನ್ನು ಕಲ್ಲುಗಳಿಂದಲೇ ಜಜ್ಜಿ ತಯಾರಿಸಿ ಕೊಟ್ಟಳು ; ಜೊತೆಗೆ ರುಚಿಯಾದ ಉಂಡೆಗಳನ್ನೂ ಕಡುಬುಗಳನ್ನೂ ತಿನ್ನಲು ಕೊಟ್ಟಳು.

ಅವಳ ಆದರದ ಆತಿಥ್ಯವನ್ನು ಇಂದ್ರನು ಬಲು ಮೆಚ್ಚಿಕೊಂಡನು. ಮೊದಲೇ ಬಲಶಾಲಿ ; ಈಗಂತೂ ಸೋಮರಸದ ಅಮಲು ಬೇರೆ. "ಅಮ್ಮಾ, ನಿನ್ನ ಪ್ರೀತಿಗೆ ನಾನೇನು ಕೊಡಲಿ ? ಸೋಮರಸದ ಈ ಸವಿಯನ್ನು ನಾನು ಯಾವ ಯಜ್ಞದಲ್ಲೂ ಉಂಡಿದ್ದಿಲ್ಲ. ನಿನ್ನ ಬಯಕೆ ಏನಿದೆ ಹೇಳು ; ಅದನ್ನು ಪೂರೈಸುತ್ತೇನೆ" ಎಂದು ಹೇಳಿದನು. ಅಪಾಲೆಗೆ ತನ್ನ ಮನದ ಇಚ್ಛೆಯನ್ನು ಬಾಯಿಬಿಟ್ಟು ಹೇಳಲು ನಾಚಿಕೆ. ತುಸು ಹೊತ್ತು ಏನೂ ಮಾತನಾಡದೆ ಸುಮ್ಮನೆ ನಿಂತಳು. ಇಂದ್ರನು ಮತ್ತೆ "ಹೇಳು ತಾಯಿ, ನೀನು ಬಯಸುವುದನ್ನು ಖಂಡಿತ ಆಗಮಾಡಿಸುವ ಶಕ್ತಿ ನನಗಿದೆ. ಆಗಲಾರದುದನ್ನು ಕೇಳಿ ನಿರಾಶೆಗೊಳ್ಳಲೇಕೆ ಎಂದು ಅಂಜಬೇಡ." ಎಂದು ಒತ್ತಾಯ ಮಾಡಿದನು.

ಆಗ ಅಪಾಲೆಯು "ದಣಿಯೇ, ನನ್ನ ಬಯಕೆಗಳು ಮೂರಿವೆ ಯಲ್ಲ?" ಎಂದು ಕೇಳಲು ಇಂದ್ರನು "ಮೂರನ್ನೂ ನಾನು ತೀರಿಸುತ್ತೇನೆ,

ಹೇಳು'' ಎಂದು ಭರವಸೆಯಿತ್ತನು. ಅಪಾಲೆಯು ನೆಲವನ್ನೇ ನೋಡುತ್ತ ''ನನ್ನ ಗಂಡ ನನ್ನನ್ನು ಮನೆಯಿಂದ ಹೊರದೂಡಿದ್ದಾನೆ ; ನನ್ನ ತಂದೆಯ ಮನೆಗೆ ಮರಳಿ ಬಂದು ಇಲ್ಲೇ ಇದ್ದೇನೆ. ಸಂಸಾರ ಸರಿಯಾಗಲಿಲ್ಲವೆಂಬ ಕೊರಗು ನನ್ನ ತಂದೆಗೆ ; ಆ ಕೊರಗಿನಿಂದ ಅವನ ತಲೆಗೂದಲೆಲ್ಲ ಉದುರಿ ಬಕ್ಕತಲೆಯವನಾಗಿದ್ದಾನೆ. ಮತ್ತೆ ಅವನ ತಲೆಯ ಮೇಲೆ ಕೂದಲು ಬೆಳೆಯುವಂತಾಗಲೆನ್ನುವುದು ನನ್ನ ಮೊದಲ ಬಯಕೆ'' ಎಂದು ಹೇಳಿದಳು.

ಇಂದ್ರನು ''ನಿನ್ನ ಈ ಬಯಕೆ ತೀರಿತೆಂದು ಅಂದುಕೋ. ನಿನ್ನ ವಿಚಾರವಾಗಿ ನಿನ್ನ ತಂದೆಗೆ ಯೋಚನೆ ಇರಬಾರದೆಂದಲ್ಲವೆ ನಿನ್ನ ಇಂಗಿತ ? ನಿನ್ನನ್ನು ನಿನ್ನ ಗಂಡ ಒಪ್ಪಿ ಕರೆದುಕೊಂಡು ಹೋದರಾಯಿತಲ್ಲವೆ ? ನಿನ್ನ ತಂದೆಗೆ ಮತ್ತೆ ತಲೆಗೂದಲು ಬೆಳೆಯುತ್ತದೆ. ಎರಡನೆಯ ಬಯಕೆಯೇನು ಹೇಳು'' ಎಂದನು.

ಅಪಾಲೆಯು ''ನನ್ನ ತಂದೆಗೆ ಸ್ವಲ್ಪ ಭೂಮಿಯಿದೆ. ಅವನ ತಲೆಯಂತೆಯೇ ಅದೂ ಬಂಜರು ! ಅವನು ಬೆಳೆಯಲು ಎಷ್ಟು ಪ್ರಯತ್ನಿಸಿದರೂ ಅಲ್ಲಿ ಏನೂ ಬೆಳೆಯುತ್ತಿಲ್ಲ. ಬೇರೆ ಯಾರನ್ನೂ ಬೇಡುವ ಸ್ವಭಾವದವನಲ್ಲ ನನ್ನ ತಂದೆ ; ತನ್ನ ದುಡಿಮೆಯಿಂದ ಬಂದ ಅಷ್ಟಿಷ್ಟರಲ್ಲೇ ಉಂಡು ತಣ್ಣಗಿರುವವನು. ಹೀಗಾಗಿ ಅವನ ಬಳಿ ಕಲಿಯಲು ಬಂದ ಹುಡುಗರಿಗೆ ಊಟ ಹಾಕಲು ತನಗಾಗದೆಂಬ ದುಗುಡ ಅವನಿಗೆ. ಈ ಕೊರಗನ್ನು ನೀಗಲು, ಅವನ ಭೂಮಿ ಫಲವತ್ತಾಗುವಂತೆ ಮಾಡಿದಿರಾದರೆ ಉಪಕಾರವಾದೀತು'' ಎಂದು ತನ್ನ ಎರಡನೆಯ ಬಯಕೆಯನ್ನು ಇಂದ್ರನು ಮುಂದಿಟ್ಟಳು.

ಇಂದ್ರನು, ''ಆಯಿತು, ಹಾಗೆಯೇ ಆಗಲಿ, ನಿನ್ನ ತಂದೆಯ ಭೂಮಿ ಫಲವತ್ತಾಗಿ ಅವನ ಶಿಷ್ಯಕೋಟಿಗೆ ಸಾಕಾಗುವಷ್ಟು ಬೆಳೆ ಬರುತ್ತದೆ. ಮೂರನೆಯ ಬಯಕೆಯೇನು ಹೇಳು'' ಎಂದು ಕೇಳಲು ಅಪಾಲೆ ಮತ್ತೆ

ಮಾತನಾಡದೆ ನಿಂತಳು. ಇಂದ್ರನೇ ಒತ್ತಾಯ ಮಾಡಬೇಕಾಯಿತು. ನಿನ್ನ ಮನದಾಸೆ ಏನಿದೆಹೇಳು ; ತೀರಿಸುತ್ತೇನೆ. ನಾನು ಇಂದ್ರನಲ್ಲವೆ ? ನನಗೆ ಆಗದುದು ಏನಿದೆ ? ಮೊದಲೆರಡು ಬಯಕೆಗಳೂ ನಿನ್ನ ತಂದೆಯನ್ನು ಕುರಿತವು. ಅವನ ನೆಮ್ಮದಿಗೆ ಆಗುವಂಥವು. ನಿನಗಾಗಿಯೇ ನಿನಗೆ ಬಯಕೆಯಿರದೆ ? ನಿನ್ನ ಒಳಿತಿಗಾಗಿ ನಿನಗೆ ಚಿಂತೆಯಿರದೆ ? ಅದು ಏನಿದ್ದರೂ ಹೇಳು'' ಎನ್ನಲು ಅಪಾಲೆ ''ನನಗೆ ಚಿಂತೆಯಿರದೆ ? ಚಿಂತೆಯಿರದೆ ತಪಸ್ಸನ್ನು ಕೈಗೊಳ್ಳುತ್ತಿದ್ದೇನೇ ? ನನ್ನ ತಂದೆಯ ತಪಸ್ಸಿನ, ನನ್ನ ತಪಸ್ಸಿನ ಫಲವಾಗಿಯೇ ಅಲ್ಲವೆ ಈ ಹೊತ್ತು ನನಗೆ ಇಂದ್ರನೊಂದಿಗೆ ಸಮಾಗಮವಾದದ್ದು ? ನನ್ನ ಕಡೆಯ ಬಯಕೆಯೇ ದಿಟವಾಗಿ ಮೊದಲ ಬಯಕೆ. ಆದರೆ ತಾನು, ತನ್ನದು ಎಂಬುದೇ ಎದ್ದು ಕಾಣಿಸಿಕೊಳ್ಳ ಬಾರದಲ್ಲವೆ ? ತನಗೆ ಹತ್ತಿರದ ಇತರರ, ತೊಂದರೆಯನ್ನು ತೀರಿಸಿದ ಮೇಲೆ, ತನ್ನ ಅಳಲು'' ಎಂದುತ್ತರವಿತ್ತಳು.

ಅವಳ ಮೂರನೆಯ ಬಯಕೆಯೇನಿದ್ದೀತೆಂಬ ಕುತೂಹಲ ಇಂದ್ರನಿಗೊದಗಿತು. ಕೇಳಲು ಕಿವಿಗೊಟ್ಟು ನಿಂತನು. ''ಬಯಕೆಯನ್ನು ತೀರಿಸುವ ಇಂದ್ರನನ್ನೇ ಬಯಸಿ ನಾನು ಸೋಮಲತೆಯನ್ನಾರಿಸಿ ಕೊಂಡುದು. ಅವನು ಮೈವೆತ್ತು ಬಂದು ನಿಂತಿರುವಾಗ ನನ್ನ ಅಳಲನ್ನು ಅವನೆದುರು ತೋಡಿಕೊಳ್ಳಲು ನಾಚಿಕೆಯೇಕೆ ?'' ಎಂದು ಅಪಾಲೆ ಆಲೋಚಿಸಿ, ''ಅಯ್ಯಾ ದಣಿ, ನನ್ನ ಗುಹ್ಯಸ್ಥಾನದಲ್ಲಿ ಚರ್ಮದ ರೋಗವೊಂದು ಕಾಣಿಸಿಕೊಂಡಿತೆಂದು ನನ್ನ ಗಂಡ ನನ್ನನ್ನು ತವರಿಗಟ್ಟಿಬಿಟ್ಟಿದ್ದಾನೆ. ಆ ರೋಗದಿಂದಾಗಿ ಅಲ್ಲಿ ಕೂದಲು ಬೆಳೆಯುತ್ತಿಲ್ಲ; ನನ್ನನ್ನು ಕೂಡಿಕೊಳ್ಳಲು ಗಂಡನಿಗೆ ಮನಸ್ಸಾಗುತ್ತಿಲ್ಲ. ಹಾಗಾಗಿ ಮಕ್ಕಳನ್ನು ಹೆರುವ ಪುಣ್ಯ ನನ್ನ ಪಾಲಿಗೆ ಒದಗಿಬಂದಿಲ್ಲ. ಚರ್ಮದ ರೋಗವನ್ನು ಪರಿಹರಿಸುವಿರಾದರೆ ನನ್ನ ಭಾಗ್ಯಕ್ಕೆ ಎಣೆಯುಂಟೆ?'' ಎಂದು ಹೇಳಿದಳು.

ಒಡನೆಯೇ ಇಂದ್ರನು "ಈ ಬಯಕೆಯನ್ನು ತೀರಿಸಿಯೇ ತೀರಿಸುತ್ತೇನೆ ; ಅನುಮಾನಕ್ಕೆ ಎಡೆಯಿರದು" ಎಂದು ಹೇಳಿ ಅವಳನ್ನು ರಥದ ನಡುವಣ ಖಾಲಿ ಜಾಗದಲ್ಲಿ ಮೂರು ಬಾರಿ, ರಥದ ಗಾಡಿಯ ನಡುವೆ ಇರುವ ಎಡೆಯಲ್ಲಿ ಮೂರು ಬಾರಿ, ನೊಗದಲ್ಲಿರುವ ಛಿದ್ರದಲ್ಲಿ ಮೂರು ಬಾರಿ ಹಾದು ಬರುವಂತೆ ತಿಳಿಸಿದನು. ಅವಳು ಹಾಗೆಯೇ ಮಾಡಲು ಅವಳ ಮೈಚರ್ಮ ಮೊದಲು ಮುಳ್ಳುಹಂದಿಯ ಚರ್ಮದಂತಾಯಿತು ; ಅನಂತರ ಮೊಸಳೆಯ ಚರ್ಮದಂತಾಯಿತು. ಕಡೆಗೆ ಒಂದು ಬಗೆಯ ಹಲ್ಲಿಯ ಮೈಬಣ್ಣದಂತಾಯಿತು. ಆಗ ಅವಳ ಚರ್ಮರೋಗ ಸಂಪೂರ್ಣವಾಗಿ ಮರೆಯಾಯಿತು. ಅವಳ ಮೈಬಣ್ಣ ಸೂರ್ಯನಂತೆ ಹೊಳೆಯತೊಡಗಿತು. ಅವಳ ನಗುಮೊಗವನ್ನು ನೋಡಿ ಇಂದ್ರ ರಥವೇರಿ ತನ್ನ ದಾರಿ ಹಿಡಿದ.

ಅಪಾಲೆಯ ಕಷ್ಟ ದೂರವಾಯಿತು. ಅವಳ ತಂದೆ ಅತ್ರಿ ಋಷಿಯ ಚಿಂತೆಯೂ ಹರಿಯಿತು. ಅವನ ತಲೆಗೂದಲು ಬೆಳೆದಂತೆ ಅವನ ಭೂಮಿಯು ಫಲವತ್ತಾಯಿತು. ಅಪಾಲೆಯು ಗಂಡನ ಮನೆಗೆ ಮರಳಿದಳು ; ಅವಳ ಮೈಕಾಂತಿಯನ್ನು ಕಂಡು ಗಂಡನಿಗೂ ಸಂತೋಷವಾಯಿತು. ಮುಂದೆ ಮಕ್ಕಳೂ ಆದವು.

ಈ ವಿವರಗಳನ್ನು ಅವಳ ಹೆಸರಿನಲ್ಲೇ ಇರುವ ಏಳು ಋಕ್ಕುಗಳು ಉಲ್ಲೇಖಿಸುತ್ತವೆ.

ಏಳು ಋಕ್ಕುಗಳ ಈ ಸೂತ್ರಕ್ಕೆ ಅವಳೇ ಋಷಿ (ಅತ್ರಿಯ ಮಗಳು ಅಪಾಲೆ) ; ಸೂಕ್ತದ ದೇವತೆ ಇಂದ್ರ ; ಸೂಕ್ತದ ಛಂದಸ್ಸು ಮೊದಲೆರಡು ಋಕ್ಕುಗಳದ್ದು ಪಂಕ್ತಿ, ಉಳಿದ ಋಕ್ಕುಗಳದ್ದು ಅನುಷ್ಟುಪ್.

ಹೆಂಗಳೆಯಿಂದ ಮಂಗಳ

ವೇದಕಾಲದಲ್ಲಿ ಕುದುರೆಗಳ ಬಳಕೆ ಹೆಚ್ಚಾಗಿದ್ದಿತು. ಪ್ರಯಾಣಕ್ಕೆ, ಸಂಗ್ರಾಮಕ್ಕೆ, ಕ್ರೀಡೆಗೆ, ವ್ಯಾಪಾರಕ್ಕೆ, ಬೇಟೆಗೆ ಎಲ್ಲಕ್ಕೂ ಕುದುರೆಗಳ ಅಗತ್ಯ ವಿದ್ದಿತು. ಕೆಲವರು ಅನುಕೂಲಸ್ಥರು ಕುದುರೆಗಳನ್ನು ಸಾಕುವ ಹವ್ಯಾಸವನ್ನೇ ಇರಿಸಿಕೊಂಡಿದ್ದರು. ಅಂಥವರಲೊಬ್ಬ ಭೃಮ್ಯಶ್ವನೆಂಬುವವನು. ಅವನ ಹೆಸರಿನ ಅರ್ಥವೇ 'ಜೋರಾಗಿ ಓಡುವ ಕುದುರೆಗಳ ಮಾಲಕ'ನೆಂದು. ಅವನ ಬಳಿ ಹತ್ತಾರು ಕುದುರೆಗಳು, ನೂರಾರು ಎತ್ತುಗಳು, ಹಸುಗಳು ಇದ್ದುವು. ಎಲ್ಲವೂ ಚೆನ್ನಾಗಿ ಉಂಡು ಓಡಿಯಾಡಿ ಬೆಳೆದಿದ್ದುವು ; ಅವನ್ನು ನೋಡುವುದೇ ಕಣ್ಣಿಗೊಂದು ಹಬ್ಬ. ಹಲವರು ಕಳ್ಳರಿಗೆ ಅವುಗಳ ಮೇಲೆ ಕಣ್ಣು.

ಅವನ ಮಗ ಮುದ್ಗಲ. ವೀರನೂ ಹೌದು, ಶಾಂತನೂ ಹೌದು ; ಕೃಷಿಯಲ್ಲಿಯೂ ಆಸಕ್ತ ಕದನದಲ್ಲಿಯೂ ಶೂರ ; ಋಷಿಯಾದರೂ ರಸಿಕ. ಅವನ ಮಡದಿ ಇಂದ್ರಸೇನೆ ಅವನಿಗೆ ಎಲ್ಲ ವಿಧದಲ್ಲೂ ಅನುರೂಪ ಳಾದವಳು. ನೆರೆನಾಡಿನ ಅರಸನಾಗಿದ್ದ ನಳನೆಂಬುವನ ಮಗಳು. ಹಾಗಾಗಿ ನಳಾಯಿನಿಯೆಂಬುದೂ ಅವಳ ಹೆಸರು. ಮುದ್ಗಲನ ಹೆಂಡತಿಯಾದು ದರಿಂದ ಮುದ್ಗಲಾನಿ. ಸ್ವಭಾವದಲ್ಲಿ ಗಂಡನಂತೆಯೇ ಶಾಂತಳೂ, ಸಂದರ್ಭಬಿದ್ದರೆ ಗಂಡನಂತೆಯೇ ಶೂರಳು. ಮುದ್ಗಲ ರಥವೇರಿ ಹೊರಟನೆಂದರೆ ಮುದ್ಗಲಾನಿಯೆ ಸಾರಥಿ. ಯಾವ ಕೆಲಸದಲ್ಲಾಗಲಿ ಗಂಡನೊಂದಿಗೇ ಇರುವವಳು. ಕುದುರೆಗಳನ್ನೂ, ಹಸುಗಳನ್ನೂ,

ಎತ್ತುಗಳನ್ನೂ ಅಕ್ಕರೆಯಿಂದ ಆರೈಕೆ ಮಾಡುತ್ತಿದ್ದಳು. ಗಂಡನೇ ಅವಳನ್ನು ಮೆಚ್ಚಿಕೊಂಡು ಆಡಿದ ಮಾತುಗಳು ಋಗ್ವೇದದ ಹತ್ತನೆಯ ಮಂಡಲದ ನೂರೆರಡನೆಯ ಸೂಕ್ತದಲ್ಲಿವೆ (ಆರನೆಯ ಮಂತ್ರ).

ಹನ್ನೆರಡು ಮಂತ್ರಗಳಿರುವ ಈ ಸೂಕ್ತಕ್ಕೆ ಮುದ್ಗಲನೇ ಋಷಿ ('ಭಾರ್ಮ್ಯಶ್ವ' ಎಂದರೆ ಭೃಮ್ಯಶ್ವನ ಮಗ). ಅವನ ಒಲುಮೆಯ ಮರದ ದೊಣ್ಣೆಯು (ದ್ರುಘಣ) ಸೂಕ್ತದ ದೇವತೆ ! ಮುದ್ಗಲನಿಗೆ ಒಲಿದಿದ್ದ ಇಂದ್ರನು ದೇವತೆಯೆಂಬ ಎಣಿಕೆಯೂ ಇದೆಯೆನ್ನಿ. ಸೂಕ್ತದ ಹಿನ್ನೆಲೆಯಲ್ಲಿ ಕತೆಯೊಂದಿದೆಯೆಂದು ಯಾಸ್ಕರು ಸೂಚಿಸಿದ್ದಾರೆ. ಸೂಕ್ತದಲ್ಲೇ ಈ ಕತೆಯ ಹಲವಾರು ವಿವರಗಳು ಕಾಣಸಿಗುತ್ತವೆ ; ಸಾಯಣರು ಮತ್ತೆ ಕೆಲವು ವಿವರಗಳನ್ನು ಕಾಣಿಸಿದ್ದಾರೆ. ಸೂಕ್ತಕ್ಕೆ ನಿಮಿತ್ತವಾದ ಸಂಗತಿ ಇದೆಂದು ಒಕ್ಕಣೆ.

ಒಮ್ಮೆ ಮುದ್ಗಲನೂ, ಅವನ ಹೆಂಡತಿಯೂ ಮನೆಯಲ್ಲಿರದಿದ್ದಾಗ, ಅವರ ಮನೆಗೆ ಕಳ್ಳರು ನುಗ್ಗಿ ಅವರ ಕುದುರೆಗಳನ್ನೂ, ಹಸುಗಳನ್ನೂ, ಎತ್ತುಗಳನ್ನೂ ಕದ್ದೊಯ್ದು ಬಿಟ್ಟರು. ಕಳವಾದ ತುಸು ಹೊತ್ತಿನಲ್ಲೇ ಮುದ್ಗಲನೂ, ಅವನ ಹೆಂಡತಿಯೂ ಮನೆಗೆ ಹಿಂದಿರುಗಿದರು. ತಮ್ಮ ಪ್ರಾಣಿಗಳೆಲ್ಲವೂ ಕಾಣೆಯಾಗಿರುವುದನ್ನು ಕಂಡು ಹೌಹಾರಿದರು. ಒಡನೆಯೆ ಕಳ್ಳರ ಬೆನ್ನಟ್ಟಲು ಮುದ್ಗಲನು ನಿಶ್ಚಯಿಸಿ, ತನ್ನ ರಥವನ್ನು ಸಜ್ಜುಗೊಳಿಸಿದನು. ಆದರೆ ರಥಕ್ಕೆ ಹೂಡಲು ಕುದುರೆಗಳೆಲ್ಲಿ ? ಎತ್ತುಗಳೆಲ್ಲಿ ? ಮನೆಯ ಅಂಗಳದಲ್ಲಿ ಮುದಿ ಎತ್ತೊಂದು ಮಾತ್ರ ನಿಂತಿದ್ದುದನ್ನು ಕಂಡ. ಕಳ್ಳರಿಗೂ ಅದು ಬೇಡವೆನಿಸಿ, ಅದನ್ನು ಬಿಟ್ಟು ಹೋಗಿದ್ದರು. ಅದು ನಡೆಯಲಾರದು, ಬಹಳ ಹೊತ್ತು ನಿಲ್ಲಲಾರದು, ಮೇವನ್ನು ಬೇಗನೆ ತಿನ್ನಲಾರದು.

ಮುದ್ಗಲನಿಗೆ ಬೇರೆ ದಾರಿ ಕಾಣದೆ, ಅದನ್ನೆ ಕರೆತಂದು ರಥಕ್ಕೆ ಕಟ್ಟಿದ. ಒಂದು ಮಗ್ಗುಲಿಗೇನೋ ಆಯಿತು ; ಇನ್ನೊಂದು ಮಗ್ಗುಲಿಗೇನು

ಮಾಡುವುದು ? ಮುದ್ಗಲನ ಬಳಿ ಮರದ ದೊಣ್ಣೆಯೊಂದಿತ್ತು. ಅದು ಅವನಿಗೆ ತುಂಬ ಅಚ್ಚುಮೆಚ್ಚು. ಅದನ್ನೆ ರಥದ ಇನ್ನೊಂದು ಮಗ್ಗುಲಿಗೆ ಹೂಡಿದ. ಹೀಗೆ ವಿಚಿತ್ರವಾಗಿ ಸಜ್ಜಾದ ರಥಕ್ಕೆ ಅವನ ಹೆಂಡತಿಯೆ ಸಾರಥಿಯಾಗಿ ರಥವೇರಿದಳು ; ಮುದ್ಗಲನೂ ಅವಳ ಹಿಂದೆ ಕುಳಿತು, ಇಬ್ಬರೂ ಹೊರಟರು. ಮುದ್ಗಲನು ಋಷಿಯಲ್ಲವೆ ? ಅವನ ತಪಸ್ಸಿನ ಪ್ರಭಾವವು ರಥಕ್ಕೆ ಕಟ್ಟಿದ ಮರದ ದೊಣ್ಣೆಯಲ್ಲಿಯೂ ತೋರಿಕೊಂಡಿತಂತೆ. ಕಳ್ಳರು ಹೋದ ಹಾದಿಯ ಸುಳಿವನ್ನು ಈ ದೊಣ್ಣೆ ಕಂಡುಕೊಂಡು, ರಥವನ್ನು ಅತ್ತಲೇ ಒಯ್ಯಿತಂತೆ. ಮುದ್ಗಲನು ಇಂದ್ರನನ್ನು ನೆನಪಿಗೆ ತಂದುಕೊಂಡು ಅವನ ನೆರವನ್ನು ಬಯಸಿದ.

ಮುದಿಯೆತ್ತು, ಮರದ ದೊಣ್ಣೆ ಎರಡರಿಂದ ಮುಂದೆ ಸಾಗುತ್ತಿದ್ದ ರಥವನ್ನು ನಡೆಸುತ್ತಿದ್ದ ಮುದ್ಗಲಾನಿಯು ತನ್ನ ಶೌರ್ಯ, ಉತ್ಸಾಹಗಳಿಂದ ದನಿಯನ್ನೇರಿಸಿ 'ಹೇ' ಎಂದು ಕೂಗಿಟ್ಟಳು. ಅವಳ ಸಂಭ್ರಮ ಮುದಿಯೆತ್ತನ್ನೂ ಆವೇಶದಿಂದ ತುಂಬಿತು. ಅವಳ ದನಿಯನ್ನುಕೇಳಿ ಅದಕ್ಕೆ ಇದ್ದಕ್ಕಿದ್ದಂತೆ ಎಲ್ಲಿಂದಲೋ ಬಲ ಬಂದಡರಿತು ; ದೌಡಾಯಿಸಿ ಓಡತೊಡಗಿತು. ರಥದ ವೇಗಕ್ಕೆ ಹರಿದೆದ್ದ ಗಾಳಿ ಮುದ್ಗಲಾನಿಯು ಬೆನ್ನಮೇಲೆ ಹೊದ್ದಿದ್ದ ಉತ್ತರೀಯವನ್ನು ಮೇಲೆ ಹಾರಿಸಿತು. ರಥಕ್ಕೊಂದು ಬಾವುಟದಂತೆ ಕಾಣಿಸಿಕೊಂಡ ಈ ಬಟ್ಟೆಯು ಅವಳ ದಣಿವನ್ನೂ ಆರಿಸುವ ಬೀಸಣಿಗೆಯಾಯಿತು. ವಿಚಿತ್ರವಾಗಿ ಸಜ್ಜಾದ ರಥ ನಾಗಾಲೋಟದಿಂದ ಮುಂದೆ ಸಾಗಿತು.

ಅಷ್ಟಿಷ್ಟೆಂಬಷ್ಟರಲ್ಲೆ, ಕಳ್ಳರ ಸುಳಿವು ಸಿಕ್ಕೇಬಿಟ್ಟಿತು. ಮುಂದೊಂದು ದೊಡ್ಡ ಕೆರೆ ; ಅದರಾಚೆ ಸಣ್ಣದೊಂದು ಗುಡ್ಡ. ಗುಡ್ಡದ ಹಿಂಬದಿಯಲ್ಲೇ ಕಳ್ಳರು ಕುದುರೆಗಳನ್ನೂ, ಎತ್ತುಗಳನ್ನೂ, ಹಸುಗಳನ್ನೂ ಬಚ್ಚಿಟ್ಟಿದ್ದರು. ಕಾವಲು ಕಾಯುತ್ತ ಗುಡ್ಡದ ಮೇಲೆ ಕಳ್ಳರು ನಿಂತಿದ್ದರು ; ರಥಕ್ಕೆ ಹೂಡಿದ್ದ

ಮುದಿಯೆತ್ತನ್ನೂ, ಮರದ ದೊಣ್ಣೆಯನ್ನೂ ನೋಡಿ ನಗಲಾರಂಭಿಸಿದರು. ಆದರೆ ಅವರ ನಗುವೇನು ಬಹಳ ಹೊತ್ತು ಉಳಿಯಲಿಲ್ಲ. ಅವರು ನೋಡುತ್ತಿದ್ದಂತೆಯೇ, ಮುದ್ಗಲನ ರಥವನ್ನು ಮುದಿಯೆತ್ತು ಕೆರೆಯ ತಡಿಗೆ ತಂದುಬಿಟ್ಟಿತು. ಆದರೂ ಮುದಿಯೆತ್ತಿನ ರಥಕ್ಕೆ ದೊಡ್ಡ ಕೆರೆಯನ್ನು ದಾಟುವುದು ಅಷ್ಟೇನು ಸುಲಭವಲ್ಲವೆಂದುಕೊಂಡು ಕಳ್ಳರು ಗಲಿಬಿಲಿಗೊಳ್ಳಲಿಲ್ಲ. ಆದರೆ, ಮುದಿಯೆತ್ತು ಕೆರೆಯೊಳಗೆ ಇಳಿದು ನೀರನ್ನು ಕುಡಿಯತೊಡಗಿತು. ನೀರನ್ನು ಕುಡಿದು ಎಷ್ಟು ದಿನಗಳಾಗಿದ್ದುವೋ, ಎಷ್ಟು ಬಾಯಾರಿಕೆಯಿದ್ದಿತೋ, ಅದು ನೀರನ್ನು ಕುಡಿಯುತ್ತ ಕುಡಿಯುತ್ತ ಕೆರೆಯನ್ನೆ ಬರಿದುಮಾಡಿಬಿಟ್ಟಿತು!

ಈಗ ಮುದಿಯೆತ್ತು ಸರಾಗವಾಗಿ, ವೇಗವಾಗಿ ಕೆರೆಯನ್ನು ದಾಟಿ ಗುಡ್ಡದ ಮುಂದೆ ಬಂದು ನಿಂತಿತು. ಇನ್ನು ಕಳ್ಳರಿಗೆ ಆತಂಕವಾಗದಿರಲು ಸಾಧ್ಯವೆ ? ಮುಂದೇನು ಮಾಡುವುದೋ ಈ ಮುದಿಯೆತ್ತು ಎಂಬ ಕಳವಳ ಅವರನ್ನು ಕಾಡತೊಡಗಿತು. ಮುದಿಯೆತ್ತು ರಥದ ನೊಗದಿಂದ ಕಳಚಿಕೊಂಡು ಹೊರಬಂದಿತು. ಒಂದು ನೂರು ಪ್ರಾಯದ ಎತ್ತುಗಳಿಗಿರುವ ಬಲ ಅದಕ್ಕೆ ಬಂದಿರುವಂತೆ ತೋರಿತು. ತನ್ನ ಮೋಟು ಕೊಂಬುಗಳಿಂದ ಗುಡ್ಡವನ್ನೆ ಇರಿದು ನೆಲಸಮ ಮಾಡಿಬಿಟ್ಟಿತು. ಹಿಂದೆ ಬಚ್ಚಿಟ್ಟಿದ್ದ ಕುದುರೆಗಳೂ, ಎತ್ತುಗಳೂ, ಹಸುಗಳೂ ಮುದ್ಗಲ-ಮುದ್ಗಲಾನಿಯರ ಕಣ್ಣಿಗೆ ಬಿದ್ದುವು.

ಈಗ ಕಳ್ಳರು ಕದನಕ್ಕೆ ಸಿದ್ಧವಾದರು. ಮುದ್ಗಲನು ಮತ್ತೆ ಮುದಿಯೆತ್ತನ್ನು ರಥಕ್ಕೆ ಹೂಡಿದನು. ಮುದ್ಗಲಾನಿಯು ಮತ್ತೆ ರಥವೇರಿ ಸಾರಥಿಯಾದಳು. ಮುದ್ಗಲನೂ ರಥವೇರಿ ಮರದ ದೊಣ್ಣೆಯನ್ನು ಕೈಯಲ್ಲಿ ಹಿಡಿದು ನಿಂತನು. ಮುದ್ಗಲಾನಿಯು ರೋಷಾವೇಶದಿಂದ ಕೂಗಿಕೊಂಡಳು. ಅವಳ ದನಿಯನ್ನು ಕೇಳಿದೊಡನೆಯೆ ಮುದಿಯೆತ್ತು

ಮದವೇರಿ ಮುನ್ನುಗ್ಗಿತು. ಕಳ್ಳರೂ ಹೆಚ್ಚಿನ ಸಂಖ್ಯೆಯಲ್ಲೇ ಇದ್ದರು ; ಕೈಗಳಲ್ಲಿ ಕತ್ತಿಯನ್ನು ಝಳಪಿಸುತ್ತ ರಥವನ್ನು ಮುತ್ತಿದರು. ಮುದಿಯೆತ್ತು ಗಟ್ಟಿಯಾಗಿ ಗುಟುರು ಹಾಕುತ್ತ ಅವರ ಮೇಲೆ ನುಗ್ಗಿ ಹಲವರನ್ನು ಗಾಸಿ ಗೀಡುಮಾಡಿತು. ಮುದ್ಗಲಾನಿಯೂ ರಥವನ್ನು ಧೈರ್ಯದಿಂದ, ಜಾಣ್ಮೆಯಿಂದ ನಡೆಸುತ್ತ ತನ್ನ ವೀರಾವೇಶದಿಂದಲೇ ಹಗೆಗಳ ಒಡಲನ್ನು ಸೀಳಿದಳು. ಮುದ್ಗಲನ ಕೈಯಿಂದ ಮರದ ದೊಣ್ಣೆ ಕಳಚಿಕೊಂಡು ಕಳ್ಳರ ಬಳಗವನ್ನೆಲ್ಲ ಬಿರುಸಾಗಿ ಬಡಿಯತೊಡಗಿತು. ಮುದಿಯೆತ್ತಿಗಾದರೂ ಹುಲ್ಲುಬೇಕು, ನೀರುಬೇಕು. ಬೀಸುವ ದೊಣ್ಣೆಗೇನು ಬೇಕು ?

ಅಂತೂ ಆ ದಿಟ್ಟ ಹೆಣ್ಣಿನ ಅಬ್ಬರದ ಮುಂದೆ ಕಳ್ಳರ ಪಡೆಯೆಲ್ಲ ನಾಲ್ಕೂ ದಿಕ್ಕಿಗೆ ಚದುರಿಹೋಯಿತು. ಮುದಿಯೆತ್ತು ಬಸವಳಿದು ಒಂದು ಕಡೆ ಕುಳಿತುಕೊಂಡಿತು ; ಮರದ ದೊಣ್ಮೆಯೂ ಒಂದು ಕಡೆ ಬಿದ್ದುಕೊಂಡಿತು. ಬಂದ ಕೆಲಸವಾಯಿತು. ಕಳ್ಳರನ್ನು ಸದೆಬಡೆದು ಓಡಿಸಿಯಾಯಿತು ; ಕುದುರೆಗಳನ್ನೂ, ಎತ್ತುಗಳನ್ನೂ, ಹಸುಗಳನ್ನೂ ಮತ್ತೆ ಪಡೆದುಕೊಂಡುದಾಯಿತು. ಇಷ್ಟು ಹೊತ್ತು ಗಂಡನಿಂದ ದೂರವಿದ್ದು ಬೇರೆಯಾಗಿಯೆ ಕೆಲಸ ಮಾಡುತ್ತಿದ್ದ ಮುದ್ಗಲಾನಿ ಗಂಡನ ಹತ್ತಿರ ಬಂದು ಅವನನ್ನು ಬರಸೆಳೆದು ಅಪ್ಪಿಕೊಂಡಳು. ಮಳೆಗರೆಯುವ ಕಾರ್ಮೋಡ ಮಳೆಯಾಗಿ ಸುರಿಯುವಾಗ ಮುಗಿಲನ್ನೇ ಅಪ್ಪಿಕೊಂಡಂತೆ ಎಂದು ವೇದದ ಒಕ್ಕಣೆ (ಹನ್ನೊಂದನೆಯ ಮಂತ್ರ). ಸಂತೋಷದಿಂದ ಹಿರಿಹಿಗ್ಗಿದಳಂತೆ ('ಪೀಪ್ಯಾನಾ') ; ತಮ್ಮ ಕುದುರೆಗಳೂ, ಎತ್ತುಗಳೂ, ಹಸುಗಳೂ ಮತ್ತೆ ಮರಳಿದುವಲ್ಲ ಎಂಬುದೇ ಅವಳ ಸಂತೋಷಕ್ಕೆ ಕಾರಣವಂತೆ ('ಏಷೈಷ್ಯಾ').

ಅವಳಿಗೆ ಬೇಕಾಗಿದ್ದುದು ಅಷ್ಟೆ ಎಂದು ಮಂತ್ರ ಸ್ಪಷ್ಟಪಡಿಸುತ್ತದೆ ; ಮುದ್ಗಲಾನಿಯಂತ ಹೆಂಗಳೆಯರಿಂದಲೇ ನಮ್ಮ ಗೆಲುವು ಎಂಬ ಮಾತನ್ನೂ

ವೇದದ ಮಂತ್ರವು ಎತ್ತಿ ಆಡಿದೆ ('ಚಿದ್ರಥ್ಯಾಜಯೇಮ'). ರಣರಂಗದಲ್ಲೂ ಸಾರಥಿಯೆ ; ಗೃಹರಂಗದಲ್ಲೂ ಸಾರಥಿಯೇ. ಅವಳು ಪಡೆದುಕೊಂಡು ನಮಗೆ ಕೊಟ್ಟ ದನಕರುಗಳು ನಮ್ಮ ಅನ್ನ, ನಮಗೆ ಪ್ರಿಯವಾದ ವಸ್ತು. ಋಗ್ವೇದದ ಈ ಸೂಕ್ತವು ಮುಗಿಯುವುದೇ ಹೀಗೆ –

'ಸುಮಂಗಲಂ ಸಿನವದ್ ಅಸ್ತು ಸಾತಂ.'

[ಮುದ್ಗಲಾನಿಯು ಕೊಡಮಾಡಿದಂಥ ಸಂಪತ್ತು ನಮಗೆ ಮಂಗಳವನ್ನುಂಟು ಮಾಡಲಿ]

ಸತೀಮಣಿಯಾದ ಸುಕನ್ಯೆ

ಚ್ಯವನ ಋಷಿಯ ಕತೆ ಪ್ರಸಿದ್ಧವಾಗಿದೆ. ಆದರೆ ಈ ಕತೆಯಲ್ಲಿ ಪ್ರಧಾನಪಾತ್ರ ಆವನ ಹೆಂಡತಿ ಸುಕನ್ಯೆಯದು. ಕತೆಯು ಶತಪಥ ಬ್ರಾಹ್ಮಣದಲ್ಲಿ (4, 1, 5) ಬರುತ್ತದೆ. ಋಗ್ವೇದದ ಏಳನೆಯ ಮಂಡಲದ ನೂರ ಹದಿನಾರನೆಯ ಸೂಕ್ತದಲ್ಲೂ ಈ ಕತೆಯ ಪ್ರಸ್ತಾಪವಿದೆ. ಮುಂದೆ ಮಹಾಭಾರತದ ವನಪರ್ವ, ದೇವೀಭಾಗವತದ ಸಪ್ತಮಸ್ಕಂಧಗಳಲ್ಲಿಯೂ ಕತೆ ಕಾಣಿಸಿಕೊಳ್ಳುತ್ತದೆ. ವಿವರಗಳಲ್ಲಿ ಕೆಲವಾರು ವೈಪರೀತ್ಯಗಳೂ ಬಂದೊದಗಿವೆಯೆನ್ನಿ , ರೂಪಾಂತರಗಳನ್ನೂ ಕತೆ ತಳೆದಿದೆ. ಮುಂದೆ ಕಾಣಿಸಿರುವುದು ವೈದಿಕ ಚೌಕಟ್ಟಿನಲ್ಲೇ ಬಂದಿರುವ ಕತೆಯ ರೂಪ.

ಚ್ಯವನ ಋಷಿ ಭೃಗುವಂಶದವನು. ಭೃಗುವಿನ ಹೆಂಡತಿ ಪುಲೋಮೆ ಗರ್ಭವತಿಯಾಗಿದ್ದಾಗ ಅಸುರನೊಬ್ಬನಿಗೆ ಹೆದರಿ ಓಡುತ್ತಿರುವಾಗ ಗರ್ಭವು ದೊಪ್ಪನೆ ಕೆಳಗೆ ಬಿದ್ದಿತು. ಹಾಗೆ ಹುಟ್ಟಿದ್ದರಿಂದ ಇವನಿಗೆ ಚ್ಯವನನೆಂಬ ಹೆಸರಾಯಿತು. ಬೆಳೆದ ಮೇಲೆ ಅವನು ಕಾಡಿಗೆ ಹೋಗಿ ತಪಸ್ಸು ಮಾಡತೊಡಗಿದನು. ವರ್ಷಗಳು ಕಳೆದರೂ ಕುಳಿತಲ್ಲಿಂದ ಏಳದೆ ಧ್ಯಾನಾಸಕ್ತನಾಗಿದ್ದ ಅವನ ಮೇಲೆ ಮಣ್ಣಿನ ರಾಶಿಯೇ ಬೆಳೆದುಕೊಂಡಿತು, ಗಿಡಗಂಟೆಗಳು ಬೆಳೆದುನಿಂತವು. ಹಕ್ಕಿಗಳು ಗೂಡು ಕಟ್ಟಿಕೊಂಡವು.

ಒಂದು ದಿನ ಆ ಪ್ರದೇಶದ ಅರಸು ಶರ್ಯಾತಿಯೆಂಬುವನು ತನ್ನ ವ್ಯಕ್ತಿಗಳು, ಪರಿವಾರದೊಂದಿಗೆ ಈ ಕಾಡಿಗೆ ಬಂದನು. ಅವನ ಮಗಳಾದ

ಸುಕನ್ಯೆ ಅಲ್ಲಿ ಇಲ್ಲಿ ಅಡ್ಡಾಡುತ್ತ ಈ ಮಣ್ಣುಗುಡ್ಡೆಯ ಹತ್ತಿರ ಬಂದಳು. ಗುಡ್ಡೆಯ ಆಕಾರ ಅವಳಿಗೆ ವಿಚಿತ್ರವೆನಿಸಿ, ಒಳಗೆ ಏನಿದೆಯೊ ನೋಡಬೇಕೆಂಬ ಕುತೂಹಲದಿಂದ ಕಡ್ಡಿಯೊಂದನ್ನು ಎತ್ತಿಕೊಂಡು ಗುಡ್ಡೆಯನ್ನು ಕೆದಕಿ, ಬೆದಕಿ ನೋಡಿದಳು. ಎರಡು ಕಣ್ಣುಗಳು ಪಳಪಳನೆ ಹೊಲೆಯುತ್ತಿದ್ದುದನ್ನು ಕಂಡು ಬೆರಗಾಗಿ, ಕುತೂಹಲ ಹೆಚ್ಚಿ, ಮತ್ತಷ್ಟು ಕೆದಕಿದಳು, ಮಣ್ಣು ಗುಡ್ಡೆ ಕೆಳಗೆ ಬಿದ್ದು, ಒಳಗೆ ಕುಳಿತಿದ್ದ ಋಷಿಯನ್ನು ಕಂಡಳು. ಕಂಡೊಡನೆ ಬೆದರಿ ಓಡಿಹೋದಳು. ತಂದೆಯ ಬಳಿ ಹೋಗಿ ಸೇರಿಕೊಂಡಳು. ತಾನು ಕಂಡದ್ದನ್ನು ಮಾತ್ರ ಯಾರಿಗೂ ತಿಳಿಸಲಿಲ್ಲ.

ರಾಜ ಶರ್ಯಾತಿ ಪರಿವಾರದೊಂದಿಗೆ ತನ್ನೂರಿಗೆ ಹಿಂದಿರುಗಿದ ಮೇಲೆ ಇದ್ದಕ್ಕಿದ್ದಂತೆ ಅರಮನೆಯಲ್ಲಿ ವಿಚಿತ್ರ ಬೇನೆಯೊಂದು ತೋರಿಕೊಂಡಿತು. ಯಾರಿಗೆ ಯಾರ ಗುರುತೂ ಸಿಗದಂತಾಯಿತು ; ಎಲ್ಲರೂ ಮರುಳಾಗಿ, ಭೂತ ಮೆಟ್ಟಿದವರಂತೆ ಆಡಹತ್ತಿದರು. ವ್ಯವಹಾರ ವೆಲ್ಲ ಏರುಪೇರಾಯಿತು ; ಅರಸನಿಗೆ ಇದೊಂದು ತಲೆನೋವಾಯಿತು. ಇದಕ್ಕೆ ಕಾರಣವೇನೆಂದು ಯಾರಿಗೂ ತಿಳಿಯಲಿಲ್ಲ. ಕಡೆಗೆ ಅರಸನ ಮಗಳು ಸುಕನ್ಯೆಯು ಕಾಡಿನಲ್ಲಿ ನಡೆದ ಸಂಗತಿಯನ್ನು ನೆನಪಿಗೆ ತಂದುಕೊಂಡಳು. ಅರಸನಿಗೆ ಇದನ್ನು ಅವಳು ಹೇಳಿದಾಗ, ಒಡನೆಯ ಅರಸನು ತನ್ನ ಮಗಳೊಂದಿಗೆ ಕಾಡಿಗೆ ಬಂದು ತಪಶ್ಚರ್ಯೆಯಲ್ಲಿ ತೊಡಗಿದ್ದ ಚ್ಯವನ ಋಷಿಯನ್ನು ಕಂಡನು.

ಬಡಕಲ ಮೈ, ಮೂಳೆಗಳು ಕಾಣುತ್ತಿವೆ, ಚರ್ಮವೆಲ್ಲ ಸುಕ್ಕು ಗಟ್ಟಿದೆ. ಕಣ್ಣು ಗುಳಿಯಲ್ಲಿ ಬಿದ್ದಿವೆ. ಮುಪ್ಪು ಮೈಯನ್ನೆಲ್ಲ ವಶಮಾಡಿ ಕೊಂಡಿದೆ. ಅರಸನು ಋಷಿಗೆ ನಮಸ್ಕರಿಸಿ, ತನ್ನ ಮಗಳು ಮಾಡಿದ ತಪ್ಪಿಗಾಗಿ ಕ್ಷಮೆ ಬೇಡಿದನು. ಋಷಿಯು ಕಣ್ತೆರೆದು ನೋಡಿ ''ಅಯ್ಯಾ, ನಿನ್ನ ಪರಿವಾರಕ್ಕಾಗಿರುವ ತೊಂದರೆಗೆ ನನ್ನ ಶಾಪವೇನು ಕಾರಣವಲ್ಲ.

ನಾನು ನಿನ್ನ ಮಗಳ ಮೇಲೇನು ಸಿಟ್ಟಿಗೇಳಲಿಲ್ಲ. ಆದರೆ ನನ್ನನ್ನು ಸುಭದ್ರವಾಗಿ ಮುಚ್ಚಿ ನನ್ನ ತಪಸ್ಸಿಗೆ ಅನುಕೂಲವನ್ನೊದಗಿಸಿದ ಮಣ್ಣುಗುಡ್ಡೆ ಹಲವು ಗಿಡಗೆಂಟೆಗಳಿಗೂ ಹಕ್ಕಿಗಳಿಗೂ ಆಸರೆಯಾಗಿದ್ದಿತು. ಅದನ್ನು ಕೆಡವಿ ನಿನ್ನ ಮಗಳು ತಪ್ಪು ಮಾಡಿದಳು. ನಿನ್ನ ಮಗಳನ್ನು ನನ್ನ ಹೆಂಡತಿಯಾಗಿ ನೀನು ನೀಡಿದರೆ ತಪ್ಪಿನ ಪರಿಹಾರವಾಗುತ್ತದೆ. ನಿನ್ನ ಪರಿವಾರಕ್ಕಿರುವ ತೊಂದರೆ ತಪ್ಪುತ್ತದೆ'' ಎಂದನು.

ರಾಜನಿಗೆ ಕಳವಳಕ್ಕೆ ಕಾರಣವಾಯಿತು ಈ ಬೇಡಿಕೆ. ಈ ಋಷಿಯಾದರೋ ಮುದುಕ, ಈಗಲೋ ಆಗಲೋ ಕಡೆಯ ಉಸಿರು ಬಿಡುವಂತಿದ್ದಾನೆ. ಮೇಲಾಗಿ ಕುರೂಪಿ. ತನ್ನ ಮಗಳು ಇನ್ನೂ ಹುಡುಗಿ, ಚೆಲುವೆ ; ಅರಸುಗುವರಿ. ಇದೆಂಥ ಜೋಡಿಯಾದೀತು ? ತಾನಾಗಿ ತನ್ನ ಮುದ್ದಿನ ಮಗಳನ್ನು ಈ ಮುದಿಗೂಬೆಗೆ ಒಪ್ಪಿಸುವ ಮನಸ್ಸು ಹೇಗೆ ಬಂದೀತು ? ರಾಜನು ನಿರಾಕರಿಸುವುದರಲ್ಲಿದ್ದ ಅಷ್ಟರಲ್ಲಿ ಸುಕನ್ಯೆಯೇ ''ಅಪ್ಪಾ, ಪರಿವಾರದ ನೂರಾರು ಜನಕ್ಕೆ ತೊಂದರೆಯಾಗಿದೆ. ಅವರ ತೊಂದರೆಯನ್ನು ಪರಿಹರಿಸಲು ಇದೊಂದೇ ದಾರಿಯಾದರೆ ನನ್ನನ್ನು ಋಷಿಗೆ ಕೊಟ್ಟುಬಿಡು. ನನ್ನ ಹಣೆಯಬರಹ ಇದ್ದಂತೆ ಆಗುತ್ತದೆ. ಅರಸನಾದವನು ತನ್ನ ಮಗಳ ಹಿತವನ್ನೇ ಎಣಿಸಿ ಪ್ರಜೆಗಳ ಕಷ್ಟಕ್ಕೆ ಕಾರಣನಾಗಬಾರದು. ಅದು ಧರ್ಮವಲ್ಲ. ಮತ್ತೆ ಇವನು ಏನಂದರೂ ಋಷಿ ; ವಯಸ್ಸು, ಆಕಾರ ಇವೆಲ್ಲ ಎಣಿಕೆಗೆ ಬಾರವು. ಅವನ ಸಾತ್ತ್ವಿಕ ಜೀವನಕ್ಕೆ ನಾನು ನೆರವಾಗುವುದಾರೆ ಒಳ್ಳೆಯದೇ ಆಯಿತು'' ಎಂದು ಹೇಳಿದಳು.

ರಾಜನು ಮನಸ್ಸಿಲ್ಲದ ಮನಸ್ಸಿನಿಂದ, ದುಗುಡದಿಂದ ಸುಕನ್ಯೆಯನ್ನು ಚ್ಯವನ ಋಷಿಗೆ ಒಪ್ಪಿಸಿ ತನ್ನೂರಿಗೆ ಮರಳಿದ ; ಅಲ್ಲಿ ಅರಮನೆಯಲ್ಲಿ ತನ್ನ ಪರಿವಾರದ ಜನರೆಲ್ಲ ಮತ್ತೆ ಎಂದಿನಂತೆ ಸಂತೋಷದಲ್ಲಿದ್ದುದನ್ನು ಕಂಡ.

ಇತ್ತ ಸುಕನ್ಯೆ ಸಂತೋಷದಿಂದ ತನ್ನ ಗಂಡನ ಆರೈಕೆಯನ್ನು ಮಾಡುತ್ತ ಅವನಿಗೆ ಎಲ್ಲ ವಿಧದಲ್ಲೂ ಅನುಕೂಲವಾಗಿದ್ದಳು. ಚ್ಯವನ ಋಷಿಯೂ ತಾನು ವರ್ಷಗಟ್ಟಳೆ ಕುಳಿತಿದ್ದ ಕಡೆಯಿಂದ ಎದ್ದು ಸರಸ್ವತೀ ನದೀ ತೀರದಲ್ಲಿ ಒಂದು ಆಶ್ರಮವನ್ನು ಕಟ್ಟಿಕೊಂಡ. ಸುತ್ತಲೂ ಹೂಗಿಡಗಳು. ಮುಪ್ಪಿನ ಗಂಡನಾದರೂ ಚ್ಯವನ ಸುಕನ್ಯೆಯನ್ನು ಪ್ರೀತಿಸುತ್ತಿದ್ದ ; ಹುಡುಗಿ ಹೆಂಡತಿಯಾದರೂ ಸುಕನ್ಯೆ ಚ್ಯವನನನ್ನು ಪ್ರೀತಿಸುತ್ತಿದ್ದಳು. ಅವರಿಬ್ಬರಲ್ಲಿ ಅಸದೃಶವಾದ ಅನುರಾಗವೇರ್ಪಟ್ಟಿತು. ಸುಖದಿಂದಲೇ ಕಾಲ ಕಳೆಯುತ್ತಿದ್ದರು.

ಹೀಗಿರಲು, ಒಮ್ಮೆ ಅಲ್ಲಿಗೆ ಅಶ್ವಿನೀದೇವತೆಗಳು ಬಂದರು. ದೇವಲೋಕದ ದೇವತೆಗಳಲ್ಲಿ ಈ ಅವಳಿಸೋದರರು ವೈದ್ಯರು ; ದೇವತೆಗಳಿಗೆ ಮಾತ್ರವಲ್ಲದೆ ಮನುಷ್ಯರಿಗೂ ನೆರವಾಗುತ್ತಿದ್ದರು. ದೇವಲೋಕದವರಾದರೂ ತಮ್ಮ ಕಾಲವನ್ನು ಹೆಚ್ಚಾಗಿ ಭೂಮಿಯ ಮೇಲೇ ಕಳೆಯುತ್ತಿದ್ದರು ; ಮನುಷ್ಯರೊಂದಿಗೆ ಒಡನಾಡುತ್ತಿದ್ದರು. ಇದಕ್ಕೆ ದೇವತೆಗಳ ಒಡೆಯನಾದ ಇಂದ್ರನು ಮುನಿದು, ಇವರಿಬ್ಬರಿಗೆ ಸೋಮಪಾನದಲ್ಲಿ ಪಾಲ್ಗೊಳ್ಳುವ ಅವಕಾಶವಿರಬಾರದೆಂದು ಕಟ್ಟುಮಾಡಿಬಿಟ್ಟನು. ಇದರಿಂದ ತುಂಬ ಬೇಸರಗೊಂಡು ಅಶ್ವಿನೀಕುಮಾರರು ಭೂಮಿಯ ಮೇಲೆ ಅಲ್ಲಲ್ಲಿ ಅಲೆದಾಡುತ್ತ ಚ್ಯವನ ಋಷಿಯ ಆಶ್ರಮದ ಹತ್ತಿರ ಬಂದಿದ್ದರು.

ನದಿಯಿಂದ ನೀರು ತರುತ್ತಿದ್ದ ಸುಕನ್ಯೆ ಅವರಿಗೆ ಎದುರಾದಳು. ಇಂಥ ಚಲುವೆಯನ್ನು ಅವರು ಈವರೆಗೆ ಕಂಡುದೇ ಇಲ್ಲ, ಇವಳನ್ನು ತಮ್ಮ ಹೆಣ್ಣನ್ನಾಗಿ ಮಾಡಿಕೊಳ್ಳುವ ಮನಸ್ಸಾಯಿತು. ಆಶ್ರಮದೊಳಗೆ ಇಣಿಕಿ ನೋಡಿ ಮುಪ್ಪಡರಿದ್ದ ಋಷಿಯನ್ನು ಕಂಡರು. ಇವನೇ ಅವಳ ಗಂಡನೆಂಬುದನ್ನು ಅರಿತುಕೊಂಡು, ಅವರು ಸುಕನ್ಯೆಯನ್ನು ತಡೆದು ನಿಲ್ಲಿಸಿದರು. ಅಶ್ವಿನೀಕುಮಾರರು ಚೆಲುವರಲ್ಲಿ ಚೆಲುವರು, ತರುಣರಲ್ಲಿ

ತರುಣರು ; ಮೋಹಕವಾದ ಮುಖ. ಸುಕನ್ಯೆಯೂ ಅವರನ್ನು ನೋಡಿ ಬೆರಗಾಗಿ ನಿಂತಳು. ಅವರು ''ಓ ಚೆಲುವೆ, ನಿನಗೆ ಈ ಮುದಿಮನುಷ್ಯನ ಸಂಗ ಒಪ್ಪುವುದಿಲ್ಲ. ನಾವು ದೇವಲೋಕದವರು ; ನಮಗೇ ನೀನು ಸರಿ, ನಮ್ಮೊಂದಿಗೆ ಬಾ'' ಎಂದು ಕೇಳಿಕೊಂಡರು.

ಅದಕ್ಕೆ ಅವಳು ''ಮುದಿಯನೋ ಹರೆಯದವನೋ, ನನ್ನ ತಂದೆ ನನ್ನನ್ನು ಅವನಿಗೆ ಕೊಟ್ಟಿದ್ದಾನೆ. ಅವನೊಂದಿಗೆ ಇರಬೇಕಾದುದು ನನ್ನ ಧರ್ಮ. ಅವನನ್ನು ಬಿಟ್ಟು ಬರಲಾರೆ. ನಿಮ್ಮ ದೇವಲೋಕ ನಿಮಗೇ ಇರಲಿ ; ನನ್ನ ಮುದಿಗಂಡ ನನಗೆ ಸಾಕು !'' ಎಂದು ಹೇಳಿ ಮುಂದೆ ನಡೆದು ಆಶ್ರಮದೊಳಗೆ ಸೇರಿಕೊಂಡಳು. ನಡೆದ ಸಂಗತಿಯನ್ನು ಗಂಡನಿಗೆ ಹೇಳಿದಳು. ಋಷಿಗೆ ಅವಳ ವರ್ಣನೆಯಿಂದ ಇವರು ಅಶ್ವಿನೀಕುಮಾರರೇ ಎಂಬುದು ಸ್ಪಷ್ಟವಾಯಿತು. ಅವರಿಗೆ ಸೋಮಪಾನದ ಪಾಲು ತಪ್ಪಿದ್ದ ವಿಚಾರವೂ ಅವನಿಗೆ ತಿಳಿದಿದ್ದಿತು. ಮತ್ತೆ ತನ್ನ ಮುಪ್ಪನ್ನು ತೊಡೆದು ಹಾಕಲು ಅವರು ಕಾರಣರಾದಾರು ಎಂಬ ಆಸೆಯೂ ಈಗ ಚಿಗುರೊಡೆಯಿತು. ಅಶ್ವಿನೀದೇವತೆಗಳು ತಾವೇ ಚಿರತರುಣರು. ಇತರರ ಬೇನೆಗಳನ್ನು ಪರಿಹರಿಸುವ ಕೌಶಲ ಅವರದ್ದು ; ಮುಪ್ಪನ್ನು ದೂರ ಓಡಿಸ ಬಲ್ಲವರು.

ಚ್ಯವನನು ಸುಕನ್ಯೆಯನ್ನು ಕುರಿತು, ''ನೋಡು, ನಾಳೆಯೂ ಇದೇ ಹೊತ್ತಿಗೆ ಅವರಿಬ್ಬರು ನಿನ್ನೆದುರು ಕಾಣಿಸಿಕೊಂಡು ಇಂದು ಕೇಳಿದುದನ್ನೆ ಕೇಳುತ್ತಾರೆ. ನೀನು ಅವರಿಗೆ ಹೀಗೆ ಹೇಳು– 'ನನ್ನ ಗಂಡ ಮುದುಕನಿರ ಬಹುದು. ಆದರೆ ದೇವತೆಗಳೊಂದಿಗೆ ಸೋಮಪಾನ ಮಾಡುವ ಉಪಾಯ ಅವನಿಗೆ ತಿಳಿದಿದೆ. ನಿಮಗೆ ತಿಳಿದಿದೆಯೋ ? ವಿಚಾರ ಮಾಡಿ ಮಾತನಾಡಿ !' ಎಂದು. ಆಗ ಅವರು ನನ್ನ ಬಳಿ ಬರುತ್ತಾರೆ. ನನ್ನ ಮುಪ್ಪನ್ನು ಕಳೆದು ತಾರುಣ್ಯವನ್ನು ನೀಡುವ ಶಕ್ತಿ ಅವರಿಗುಂಟು ಎಂದು ಹೇಳಿದನು.

ಮರುದಿನ ಮತ್ತೆ ನದಿಯಿಂದ ನೀರು ತರುವ ಚೆಲುವೆಯ ದಾರಿಗೆ ಅಡ್ಡಗಟ್ಟಿ ಅಶ್ವಿನೀಕುಮಾರರು ನಿಂತರು. ''ಚೆಲುವೆಯೆ, ಮುದಿಗಂಡನನ್ನು ಬಿಡು, ನಮ್ಮನ್ನ ಹಿಡಿ. ನಿನಗೆ ಒಳ್ಳೆಯದೇ ಆದೀತು !'' ಎಂದರು. ಸುಕನ್ಯೆ ''ಅಯ್ಯಾ ಸೋದರರೇ, ನನ್ನ ಗಂಡನನ್ನು ಹೀಗೆ ಹೀಯಾಳಿಸಬೇಡಿ. ಅವನ ಹಿರಿಮೆ ನಿಮಗೇನು ತಿಳಿದಿದೆ ? ದೇವತೆಗಳೊಂದಿಗೆ ಕೂತು ಸೋಮಪಾನ ದಲ್ಲಿ ಪಾಲ್ಗೊಳ್ಳುವ ಹದನವನ್ನು ಅವನು ಬಲ್ಲ. ಅದು ನಿಮಗೇನಾದರೂ ತಿಳಿದಿದೆಯೆ? ಯೋಗ್ಯತೆಯುಳ್ಳವರನ್ನು ಸುಮ್ಮನೆ ನಿಂದನೆ ಮಾಡಲೇಕೆ ?'' ಎಂದು ಹೇಳಿದಳು.

ಇದನ್ನು ಕೇಳಿ ಅವರಿಗೆ ಆಶ್ಚರ್ಯವಾಯಿತು. ಸೋಮಪಾನದಲ್ಲಿ ಪಾಲ್ಗೊಳ್ಳುವ ಅವಕಾಶದಿಂದ ಅವರು ವಂಚಿತರಾಗಿದ್ದರು ; ಹೀಗಾಗಿ ಬೇಸರಗೊಂಡಿದ್ದರು. ಮತ್ತೆ ಈ ಅವಕಾಶ ದೊರೆಯಬಹುದೆಂಬ ಆಸೆ ಅವರಿಗೆ ಮೂಡಿತು. ಅವರು ಸುಕನ್ಯೆಯನ್ನು ಕುರಿತು, ''ಅಮ್ಮಾ ನಿನ್ನ ಗಂಡನಿಂದ ನಮಗೊಂದು ಉಪಕಾರವಾಗಬೇಕಾಗಿದೆ. ನಮ್ಮನ್ನು ಅವನ ಬಳಿ ಕರೆದುಕೊಂಡು ಹೋಗು'' ಎಂದು ಬೇಡಿಕೊಳ್ಳಲು, ಅವಳು ಅವರನ್ನು ಚ್ಯವನ ಋಷಿಯ ಬಳಿಗೆ ಕರೆತಂದಳು.

ಅವರು ಚ್ಯವನ ಋಷಿಯೆದುರು ತಮ್ಮ ಅಳಲನ್ನು ತೋಡಿ ಕೊಂಡು, ತಮಗೆ ಸೋಮಪಾನ ಮಾಡುವ ಅಧಿಕಾರವನ್ನು ಮತ್ತೆ ಒದಗಿಸಿ ಕೊಡಬೇಕೆಂದು ಕೇಳಿಕೊಂಡರು. ಚ್ಯವನನು ''ಓಹೋ, ಅದಕ್ಕೇನಂತೆ ? ಅಗತ್ಯವಾಗಿ ಒದಗಿಸಿಕೊಡುತ್ತೇನೆ. ಆದರೆ ಮೊದಲು ನನ್ನದೊಂದು ಕೋರಿಕೆಯನ್ನು ನೀವು ಈಡೇರಿಸಿಕೊಡಬೇಕು'' ಎಂದನು. ಅದಕ್ಕೆ ಅಶ್ವಿನೀಕುಮಾರರು ''ಖಂಡಿತ ಈಡೇರಿಸಿಕೊಡುತ್ತೇವೆ. ಅದೇನಿದ್ದರೂ ಹೇಳಿ'' ಎನ್ನಲು ಚ್ಯವನನು ''ನೋಡಿ, ನನ್ನ ಮೈಯನ್ನು ಮುಪ್ಪಡರಿದೆ ; ಒಡಲಲ್ಲಿ ತಾರುಣ್ಯವೇ ಇದೆ. ನನ್ನನ್ನು ನಂಬಿಕೊಂಡು ಬಂದಿರುವ ನನ್ನ

ಹೆಂಡತಿಯು ತರುಣಿ. ಅವಳಿಗೆ ಅನುರೂಪನಾದ ಗಂಡ ಇರದಿದ್ದರೆ ಸರಿಯಲ್ಲ. ನನ್ನ ಮುಪ್ಪನ್ನು ಕಳೆದು ನನ್ನನ್ನು ತರುಣನನ್ನಾಗಿ ಮಾಡಿ'' ಎಂದು ಕರಾರನ್ನೊಡ್ಡಿದನು.

ಅಶ್ವಿನೀಕುಮಾರರು ಪ್ರಕಟವಾಗಿ ''ಓಹೋ, ನಮಗೆ ಅದೇನು ಕಷ್ಟವಲ್ಲ. ಒಂದು ಗಳಿಗೆಯ ಕೆಲಸ ಅಷ್ಟೆ ನಿಮಗೆ ತಾರುಣ್ಯ ಒದಗಿತೆಂದೇ ಭಾವಿಸಿ'' ಎಂದು ಹೇಳಿದರಾದರೂ, ಮನಸ್ಸಿನಲ್ಲಿ ಇವನು ತರುಣನಾಗಿ ಬಿಟ್ಟರೆ ಈ ಚೆಲುವೆ ನಮ್ಮ ಪಾಲಿಗೆ ದಕ್ಕಲಾರಳು ಎಂಬ ಅಳುಕನ್ನೂ ಅನುಭವಿಸಿದರು. ಹೇಗಾದರೂ ಮಾಡಿ ತಮ್ಮನ್ನೆ ಒಲಿದುಬರುವಂತೆ ಮಾಡಬೇಕೆಂದು ತೀರ್ಮಾನಿಸಿಕೊಂಡರು.

ಇವರ ಅಂತರಂಗದ ಎಣಿಕೆ ಋಷಿಗೆ ತಿಳಿಯಿತು. ಅಶ್ವಿನೀ ಕುಮಾರರು ಋಷಿಯ ಮುಪ್ಪನ್ನು ಕಳೆಯಲು, ನದಿಯ ನೀರಿನಲ್ಲಿ ಮುಳುಗಬೇಕೆಂದು ಸೂಚಿಸಿ ''ನಿಮ್ಮೊಂದಿಗೆ ನಾವಿಬ್ಬರೂ ಮುಳುಗು ಹಾಕುತ್ತೇವೆ ; ನೀವು ಮೇಲೆದ್ದಾಗ ತರುಣರಾಗಿರುತ್ತೀರಿ. ಆದರೆ ನಮ್ಮದೊಂದು ಕಟ್ಟುಪಾಡಿದೆ. ನಾವು ಮೂವರೂ ನೀರಿನಲ್ಲಿ ಮುಳುಗಿ ಮೇಲೇಳುವಾಗ ಒಂದೇ ತೆರನಾಗಿ ಕಾಣಿಸುತ್ತೇವೆ. ಈ ಚೆಲುವೆಯು ನಮ್ಮಲ್ಲಿ ಯಾರಾದರೊಬ್ಬರನ್ನು ಆರಿಸಿಕೊಳ್ಳಬೇಕು ; ಅವನೊಂದಿಗೆ ಇರಬೇಕು'' ಎಂದು ಶರತ್ತನ್ನು ಹಾಕಿದರು. ಇದು ಋಷಿಗೆ ಮೊದಲೇ ತಿಳಿದಿದ್ದುದರಿಂದ, ಸುಕನ್ಯೆಯು ತನ್ನನ್ನು ಗುರುತಿಸುವ ಸಲುವಾಗಿ ಒಂದು ವಿವರವನ್ನು ಆಕೆಗೆ ಗುಟ್ಟಾಗಿ ಹೇಳಿದನು.

ಎಲ್ಲರೂ ಎದ್ದು ನದಿಯ ಕಡೆ ಹೊರಟರು. ಸುಕನ್ಯೆ ದಡದ ಮೇಲೆ ನಿಂತಳು ; ಮೂವರು ಗಂಡಸರೂ ನದಿಯಲ್ಲಿಳಿದು ಮುಳುಗಿದರು. ಅವರು ನೀರಿನಿಂದ ಮೇಲೆದ್ದು ಬರುವಾಗ ಮೂರೂ ಜನ ತರುಣರೇ, ಚೆಲುವರೇ ! ಅವರಲ್ಲಿ ಯಾವ ಅಂತರವನ್ನೂ ಕಾಣುವುದಾಗುತ್ತಿರಲಿಲ್ಲ.

ಸುಕನ್ಯೆಯ ಕಣ್ಣಿಗಾಗಲಿ ಯಾರು ತನ್ನ ಗಂಡ, ಯಾರು ಅಶ್ವಿನೀ ಕುಮಾರರು ಎಂದು ತಟ್ಟನೆ ಅರಿಯಲಾಗಲಿಲ್ಲ. ತನ್ನ ಗಂಡ ಗುಟ್ಟಾಗಿ ತಿಳಿಸಿಕೊಟ್ಟಿದ್ದ ವಿವರದಿಂದ ತನ್ನ ಗಂಡನನ್ನು ಕಂಡುಹಿಡಿದು ಅವನನ್ನೆ ಆರಿಸಿಕೊಂಡಳು. ಹೀಗೆ ಅಶ್ವಿನೀ ಕುಮಾರರ ಉಪಾಯ ಫಲಕಾರಿಯಾಗದೆ ಹೋಯಿತು.

ಈಗ ಸುಂದರ ತರುಣನಾದ ಚ್ಯವನನನ್ನು ಕಂಡು ಸುಕನ್ಯೆ ಹಿರಿಹಿಗ್ಗಿದಳು. ಚ್ಯವನನಾದರೋ ತನ್ನ ಕರ್ತವ್ಯವನ್ನು ಮರೆಯಲಿಲ್ಲ. ಅಶ್ವಿನೀಕುಮಾರರನ್ನು ಕುರಿತು ''ನನ್ನ ಕೋರಿಕೆಯನ್ನು ನೆರವೇರಿಸಿದ್ದೀರಿ. ಇನ್ನು ನಿಮ್ಮ ಕೋರಿಕೆಯನ್ನು ನಾನು ತೀರಿಸಿಕೊಡಬೇಕಾಗಿದೆ. ಈಗ ಕುರುಕ್ಷೇತ್ರದಲ್ಲಿ ದೇವತೆಗಳೆಲ್ಲ ಕಲೆತು ಯಜ್ಞವೊಂದನ್ನು ಕೈಗೊಂಡಿದ್ದಾರೆ. ಆದರೆ ಯಜ್ಞದ ತಲೆಯು ಒಡೆದು ಹೋಗಿ ಯಜ್ಞವು ವಿಕಲವಾಗಿಬಿಟ್ಟಿದೆ ; ಫಲಪ್ರದವಾಗುತ್ತಿಲ್ಲ. ಅದನ್ನು ಸರಿಪಡಿಸುವ ಗುಟ್ಟು ದಧೀಚಿ ಮುನಿಗೊಬ್ಬನಿಗೇ ತಿಳಿದಿದೆ. ಇದು ದೇವತೆಗಳಿಗೆ ತಿಳಿಯದು. ನೀವು ಒಡನೆಯೆ ದಧೀಚಿಯ ಬಳಿ ಹೋಗಿ ಅವನಿಂದ ಆ ಗುಟ್ಟನ್ನು ಅರಿತುಕೊಂಡು, ಕುರುಕ್ಷೇತ್ರಕ್ಕೆ ಹೋಗಿ ಯಜ್ಞದ ತಲೆಯನ್ನು ಸರಿಮಾಡಿ. ಇಂದ್ರನೊಡಗೂಡಿ ದೇವತೆಗಳೆಲ್ಲರೂ ನಿಮ್ಮ ಈ ಉಪಕಾರಕ್ಕಾಗಿ ನಿಮಗೆ ಸೋಮಪಾನದಲ್ಲಿ ಪಾಲ್ಗೊಳ್ಳುವ ಅವಕಾಶವನ್ನು ಮತ್ತೆ ಕಲ್ಪಿಸಿಕೊಡುತ್ತಾರೆ. ಹೋಗಿ ಬನ್ನಿ'' ಎಂದು ಅವರನ್ನು ಬೀಳ್ಕೊಟ್ಟನು.

ಸೋಮ ಭೂಮಿಗೆ ಬಂದದ್ದು

[ದೇವತೆಗಳು ಭೂಲೋಕದಲ್ಲೇ ಇದ್ದ ಕಾಲ ; ಆಗ ಸೋಮರಸವು ಸ್ವರ್ಗಲೋಕದಲ್ಲಿತ್ತು. ಸೋಮವೆಂದರೆ ಅನೇಕ ಅರ್ಥಗಳಿವೆ. ದೇವತೆಗಳ ಬ್ರಹ್ಮವೇ ಸೋಮವೆಂಬುದು ಇಲ್ಲಿನ ಅರ್ಥ. ಸೋಮರಸವೆಂದರೆ ಅಮೃತ ; ಭೂಲೋಕದ ಕಷ್ಟ-ನಿಷ್ಠುರಗಳನ್ನೆಲ್ಲ ನೀಗಿಸುವುದು ; ಸಂಸಾರದ ನೋವನ್ನೂ ಭಯವನ್ನೂ ತೊಲಗಿಸಿ ಎಂದೆಂದಿಗೂ ಒಂದೇ ಆಗಿರುವ ತತ್ತ್ವದ ಅರಿವನ್ನು ಮೂಡಿಸುವುದು. ಇದನ್ನು ಮೇಲಿನ ಲೋಕದಿಂದ ಕೆಲಗಿನ ನೆಲೆಗೆ ಕರೆತಂದ ಕತೆ ಇದು. ಇದು ಸಂಕೇತ ಪ್ರಮುಖವಾದ ಕತೆ. ಋಗ್ವೇದ, ಅಥರ್ವವೇದ, ಶತಪಥಬ್ರಾಹ್ಮಣ, ತೈತ್ತಿರೀಯ ಸಂಹಿತೆ ಮೊದಲಾದ ಆಕರಗಳಿಂದ ಈ ಕತೆಯ ಜಾಡನ್ನು ಗುರುತಿಸಬೇಕಾಗುತ್ತದೆ.]

ಭೂಮಿಯ ಮೇಲೇ ದೇವತೆಗಳು ಅಡ್ಡಾಡುತ್ತಿದ್ದರು. ಸ್ವರ್ಗಲೋಕದಲ್ಲಿ ಸೋಮರಸವೆಂಬ ಅಮೃತವು ಇದೆಯೆಂದು ಅವರಿಗೆ ತಿಳಿಯಿತು. ಅದನ್ನು ತಂದರೆ ತಮ್ಮ ಬದುಕು ಹಸನಾದೀತೆಂದು ಬಗೆದರು. ಆದರೆ ಅದನ್ನು ಅಲ್ಲಿಂದ ತರುವ ಬಗೆ ಹೇಗೆ ? ಆಗ ದೇವತೆಗಳಿಗೆ ಸ್ವರ್ಗಕ್ಕೆ ಹೋಗುವುದಾಗುತ್ತಿರಲಿಲ್ಲ. ಅವರು ಆಲೋಚಿಸಿ, ತಮ್ಮಲ್ಲಿ ವಿಚಾರಮಾಡಿ, ಕಡೆಗೆ ವೈದಿಕಛಂದಸ್ಸಾದ ಗಾಯತ್ರಿಯನ್ನು ಸ್ವರ್ಗಲೋಕಕ್ಕೆ ಕಳುಹಿಸಿ, ಅವಳಿಂದ ಸೋಮವನ್ನು ಪಡೆದುಕೊಳ್ಳಬೇಕೆಂದು ನಿರ್ಧರಿಸಿದರು. ಗಾಯತ್ರಿಗಾದರೆ ಮೂರೂ ಲೋಕಗಳಲ್ಲಿ ಸಂಚರಿಸುವ ಶಕ್ತಿಯಿದ್ದಿತು.

ಗಾಯತ್ರಿಯೂ ಒಪ್ಪಿ ಮೇಲಿನ ನೆಲೆಗೆ ಏರಿಹೋದಳು. ಅಲ್ಲಿ ಸೋಮವನ್ನು ಕಂಡುಹಿಡಿದು, ಅದನ್ನೆತ್ತಿಕೊಂಡು ಹೊರಟಳು. ನೆಲಕ್ಕಿಳಿಯುವ ಮೊದಲು ನಡುವಣ ಲೋಕದಲ್ಲಿ ಬರುತ್ತಿದ್ದಾಗ, ವಿಶ್ವಾವಸುವೆಂಬ ಗಂಧರ್ವ ಅವಳನ್ನು ಅಡ್ಡಗಟ್ಟಿದ. 'ನಿನ್ನ ಕೈಯಲ್ಲಿರುವುದೇನು ?' ಎಂದು ಕೇಳಿದ. ಗಾಯತ್ರಿ 'ಅದು ಸೋಮರಸ' ಎಂದುತ್ತರವಿತ್ತಳು.

'ಯಾರಿಗಾಗಿ ಅದನ್ನು ಒಯ್ಯುತ್ತಿರುವೆ ?' ಎಂದು ಕೇಳಲು 'ಭೂಮಿಯ ಮೇಲಿರುವ ದೇವತೆಗಳಿಗಾಗಿ' ಎಂದಳು. ತನಗೆ ಅದನ್ನು ಕೊಡೆಂದು ಗಂಧರ್ವ ನಿರ್ಬಂಧ ಮಾಡಿದ ; ಗಾಯತ್ರಿ ಕೊಡಲೊಪ್ಪಲಿಲ್ಲ. ಗಂಧರ್ವ ಬಲವಂತವಾಗಿ ಅದನ್ನು ಆಕೆಯಿಂದ ಕಿತ್ತುಕೊಂಡು ಓಡಿಬಿಟ್ಟ.

ಗಾಯಿತ್ರಿ ಬರಿಗೈಯಲ್ಲಿ ಭೂಮಿಗಿಳಿದು ಬಂದು ದೇವತೆಗಳಿಗೆ ನಡೆದುದನ್ನು ತಿಳಿಸಿದಳು. ದೇವತೆಗಳು ಹೇಗಾದರೂ ಮಾಡಿ ಗಂಧರ್ವನಿಂದ ಸೋಮವನ್ನು ಪಡೆದುಕೊಳ್ಳಲೇಬೇಕೆಂದು ನಿರ್ಧರಿಸಿ, ಗಂಧರ್ವನನ್ನು ಮರಳುಮಾಡುವ ಬಗೆ ಹೇಗೆಂದು ವಿಚಾರಮಾಡಿದರು. ಗಂಧರ್ವರಿಗೆ ಚೆಲುವೆಯರಾದ ಹೆಂಗಳೆಯರನ್ನು ಕಂಡರೆ ಆಸೆಯೆಂಬುದನ್ನು ಅವರು ತಿಳಿದಿದ್ದರು.

ಆಡುವ ಮಾತಿಗೆ ಮೆರುಗುಕೊಟ್ಟು ವಾಗ್ದೇವತೆಯನ್ನು ಸೃಷ್ಟಿ ಮಾಡಿದರು ; ವಾಕ್ಕಿಗೊಂದು ಮನ ಸೆಳೆಯುವ ರೂಪವನ್ನು ಕೊಟ್ಟರು. ಹದಿಹರೆಯದ ಹೆಣ್ಣಂತೆ ಕಂಡಳು ; ಎಣೆಯಿಲ್ಲದ ಚೆಲುವೆಯಂತಾದಳು. ಅವಳನ್ನು ಗಂಧರ್ವನೆದುರು ತೋರಿಕೊಳ್ಳುವಂತೆ ಮಾಡಿದರು ದೇವತೆಗಳು. ಅವರೆಣಿಸಿದಂತೆ ಗಂಧರ್ವನೂ ಅವಳ ರೂಪಕ್ಕೆ ಬೆಡಗಿಗೆ ಮನಸೋತ. ಎಷ್ಟಾದರೂ ವಾಗ್ದೇವತೆಯಲ್ಲವೆ ; ಮಾತಿನಲ್ಲಿಯೂ ಚದುರೆ, ಗಂಧರ್ವನು ಹತ್ತಿರ ಬಂದು, ತನ್ನ ಒಲುಮೆಯನ್ನು ತೋಡಿಕೊಂಡಾಗ, ಈ ಹೆಣ್ಣು ಮಾತಿನಿಂದ ಅವನನ್ನು ಮರುಳುಮಾಡಿ, ಅವನಲ್ಲಿದ್ದ ಸೋಮವನ್ನು ಪಡೆದುಕೊಳ್ಳುವುದು ಅವಳಿಗೇನು ಕಷ್ಟವಾಗಲಿಲ್ಲ.

ಸೋಮವು ಸಿಕ್ಕಿದೊಡನೆ ಇವಳು ಭೂಮಿಗಿಳಿದು ದೇವತೆಗಳತ್ತ ಹೊರಟಳು. ಅವಳಲ್ಲೆ ನೆಟ್ಟಮನಸ್ಸಿನ ಗಂಧರ್ವ ಅವಳನ್ನು ಹಿಂಬಾಲಿಸಿದ. ದೇವತೆಗಳ ಹತ್ತಿರ ಬಂದಾಗ ಗಂಧರ್ವ ದೇವತೆಗಳನ್ನು ಕೇಳಿದ — ''ಈ ಹೆಣ್ಣಿಗೆ ಮನಸೋತಿದ್ದೇನೆ ; ಇವಳಿಲ್ಲದೆ ನಾನು ಬದುಕಲಾರೆ. ದಯಮಾಡಿ ಅವಳನ್ನು ನನ್ನೊಂದಿಗೆ ಕಳುಹಿಸಿ. ಸೋಮವನ್ನು ಬೇಕೆಂದರೆ ನೀವೇ ಇರಿಸಿಕೊಳ್ಳಿ. ಈ ಸುಂದರಿಯ ಮುಂದೆ ಸೋಮ ಎಂಥದು ? ಇವಳು ಸಿಕ್ಕರೆ ಸೋಮ ನನಗೇನು ಬೇಡ !'' ಎಂದು.

ದೇವತೆಗಳು ''ಅಯ್ಯಾ ಗಂಧರ್ವ. ನಮಗೆ ಬೇಕಾದುದು ಸೋಮ. ಅದನ್ನು ಪಡೆದುಕೊಳ್ಳಲೆಂದು ಈ ಹೆಣ್ಣನ್ನು ಕಳುಹಿಸಿದೆವು. ನಿನಗೆ ಈ ಹೆಣ್ಣು ಬೇಕೆಂದರೆ ನಮ್ಮದೇನು ಅಡ್ಡಿಯಿಲ್ಲ. ಆದರೆ ಅವಳ ಮನದಿಚ್ಛೆಗೆ ಎದುರಾಗಿ ನೀನಾಗಲಿ ನಾವಾಗಲಿ ಏನನ್ನೂ ಮಾಡತಕ್ಕದ್ದಲ್ಲ. ಅವಳು ನಮ್ಮೊಂದಿಗೆ ಇರಲು ಬಯಸುವಳೋ ನಿನ್ನೊಂದಿಗೆ ಬರಲು ಬಯಸುವಳೋ ಅವಳೇ ನಿರ್ಧರಿಸಬೇಕು. ಅದಕ್ಕಾಗಿ ನೀನೂ ನಾವೂ ನಮ್ಮನಮ್ಮ ಜಾಣತನಗಳನ್ನು ಅವಳೆದರು ತೋರಿಸೋಣ. ಅವಳು ಅದರಿಂದ ಯಾರನ್ನು ಮೆಚ್ಚಿಕೊಳ್ಳು ವಳೋ ಅವಳಿಗೆ ಬಿಟ್ಟದ್ದು'' ಎಂದು ಸಮಯವೊಂದನ್ನು ಸೂಚಿಸಿದರು.

ವಿಶ್ವಾವಸುವೂ ಒಪ್ಪಿದ. ಹೆಣ್ಣು ತನ್ನನ್ನೇ ಒಲಿಯುವಂತೆ ಮಾಡಲು ಏನು ಮಾಡಬೇಕೆಂದು ಆಲೋಚಿಸಿದ. ದೇವತೆಗಳಿಗೆ ಪ್ರಿಯವಾದುದು ವೇದಮಂತ್ರಗಳೆಂದು ಅವನ ಎಣಿಕೆ. ಛಂದೋಬದ್ಧವಾದ ಮಂತ್ರಗಳನ್ನು ಯಜ್ಞಸಂದರ್ಭದಲ್ಲಿ ಉಚ್ಚರಿಸುತ್ತಿದ್ದುದನ್ನು ಕೇಳಿದ್ದನು. ಅವರ ಕಡೆಯಿಂದ ಬಂದ ಹೆಣ್ಣಿಗೆ ಅದೇ ರುಚಿಸುವುದೆಂದು ಬಗೆದು, ತಾನೂ ಛಂದೋಬದ್ಧ ವಾದ ಋಕುಗಳನ್ನು ಪಠಿಸತೊಡಗಿದನು. ದೇವತೆಗಳು ದಿಟವಾಗಿ ಮೆಚ್ಚಿಕೊಳ್ಳುತ್ತಿದ್ದುದು ಸಾಮಗಾನವನ್ನು. ಮಂತ್ರಗಳನ್ನು ಸಪ್ತಸ್ವರಗಳಲ್ಲಿ

ವೀಣೆಯೊಂದಿಗೆ ಹಾಡುವುದರಲ್ಲಿ ಅವರದ್ದು ಎತ್ತಿದ ಕೈ. ಅವರ ದನಿಯೂ ಈಗಿನ ಸೋಮಪಾನದಿಂದ ಇಂಪಾಗಿದ್ದಿತು.

ಅವರು ವೀಣೆಯನ್ನು ನುಡಿಸುತ್ತ ಹಾಡುತ್ತಿದ್ದುದು ವಾಗ್ದೇವಿಗೆ ಇಷ್ಟವಾಯಿತು. ಛಂದೋಬದ್ಧವಾದ ವೇದಪಾಠ ಅವಳಿಗೆ ಅಷ್ಟಾಗಿ ಹಿಡಿಸಲಿಲ್ಲ. ಅವಳ ಒಲುಮೆಯ ನೋಟ ದೇವತೆಗಳ ಕಡೆಗೇ ಓಲಿತು. ಗಂಧರ್ವನ ಯತ್ನ ನಿರರ್ಥಕವಾಯಿತು. ಸಮಯಕ್ಕೆ ಕಟ್ಟುಬಿದ್ದದ್ದರಿಂದ ಗಂಧರ್ವನು ಮರುಮಾತಿಲ್ಲದೆ ಅಲ್ಲಿಂದ ಹೊರಟುಹೋದ. ಇತ್ತ ವಾಗ್ದೇವಿ ಮತ್ತೆ ದೇವತೆಗಳನ್ನೆ ಕೂಡಿಕೊಂಡಳು. ದೇವತೆಗಳಿಗೆ ಸೋಮವೂ ದಕ್ಕಿತು, ಸೋಮಕ್ಕೆ ಸಾಧನವಾದ ವಾಗ್ದೇವಿಯೂ ಉಳಿದುಕೊಂಡಳು.

⅄ ⅄ ⅄

ವೇದಮಂತ್ರಗಳ ಪಠಣಕ್ಕಿಂತ ಸಾಮಗಾಯನವು ಹೆಚ್ಚು ಫಲಕಾರಿಯೆಂಬುದು ಕತೆಯ ಸೂಚನೆ. ಇಲ್ಲಿ ಗಂಧರ್ವನೆಂದರೆ ಸೂರ್ಯನೆಂದು ಶತಪಥಬ್ರಾಹ್ಮಣ ವಿವರಿಸುತ್ತದೆ. ಸೋಮವೆಂದರೆ ಚಂದ್ರ. ಸೋಮವು ಗಂಧರ್ವನ ಬಳಿ ಇದ್ದುದು ಮೂರು ರಾತ್ರಿಗಳೆಂದು ತೈತ್ತಿರೀಯ ಸಂಹಿತೆಯ ಒಕ್ಕಣೆ. ಅಮಾವಾಸ್ಯೆಗೆ ಮುನ್ನ ಮೂರು ರಾತ್ರಿಗಳು ಚಂದ್ರನು ಕಾಣದಿರುವುದು ಸಂದರ್ಭ. ಆಗ ಚಂದ್ರನು ಸೂರ್ಯನಲ್ಲೇ ಸೇರಿರುವುದು, ಬೇರೆಯಾಗಿ ಕಾಣದಿರುವುದು ವಿವರಣೆ. ಅಥರ್ವವೇದದಲ್ಲಿ ವಿಶ್ವಾವಸು ಗಂಧರ್ವನು ವಾಗ್ದೇವಿಯನ್ನು ಬಿಟ್ಟುಕೊಟ್ಟು ತನ್ನ ಅಪ್ಸರೆಯರ ಬಳಿ ಹಿಂದಿರುಗೆಂದು ಹೇಳಿರುವಾಗ, ಅವನು ಇಂದ್ರನ ಸಹಚರನೆಂಬ ಮಾತಿದೆ ; ಸೂರ್ಯನೆಂದೂ ಸೂಚನೆಯಿದೆ. ಸೂರ್ಯನೇ ಗಂಧರ್ವ, ಅವನ ಹೊಂಗಿರಣಗಳೇ ಅಪ್ಸರೆಯರು ಎಂಬ ವಿವರಣೆ ಶತಪಥ ಬ್ರಾಹ್ಮಣದ್ದು. ಸೋಮನಿಗೆ ಅಭಿಮಾನಿದೇವತೆ 'ಅಪಾಂ ನಪಾತ್' (ನೀರಿನ ಮಗ) ಎಂಬ

ವರ್ಣನೆಗೆ ಬಂದ ಅಗ್ನಿಯೇ. ಅಗ್ನಿಯ ದೇವತೆಗಳಲ್ಲಿ ಮುಖ್ಯನಾದವನು, ಮೊದಲಿಗನಾದವನು. ಇದು ದೇವತೆಗಳಿಗೂ ಸೋಮನಿಗೂ ಇರುವ ಸಹಜ ಸಂಬಂಧ.

ಅಗ್ನಿಯಲ್ಲಿ ಸೋಮವನ್ನು ಸಮರ್ಪಿಸುವುದು ಯಜ್ಞದ ವಿಧಿ. ದೇವತೆಗಳ ವಿಶೇಷ ಲಕ್ಷಣವೆಂದರೆ ಯಜ್ಞಮಾಡುವುದೇ. ಅವರು ಮಾಡಿದ ಯಜ್ಞವನ್ನು ಅನುಕರಿಸಿಯೇ ಮನುಷ್ಯರು ಯಜ್ಞಮಾಡ ಹೊರಟದ್ದು. ಈ ಸಂದರ್ಭದಲ್ಲಿಯೇ ಸೋಮಾಹರಣದ ಕತೆಗಳು ಪ್ರಸಕ್ತವಾಗುತ್ತವೆ. ಮೇಲಿನಿಂದ ಸೋಮವನ್ನು ನೆಲಕ್ಕೆ ತಂದ ಹಲವಾರು ಕತೆಗಳಲ್ಲಿ ಮೇಲೆ ಕಾಣಿಸಿರುವುದೊಂದು.

ಸೂರ್ಯನ ಮಗಳ ಮದುವೆ

[ಪ್ರಜಾಪತಿಯು ಎಲ್ಲ ದೇವತೆಗಳನ್ನೂ ಹುಟ್ಟಿಸಿದನು. ಮೊದಲು ಮೈದಳೆದ ದೇವತೆ ಸೋಮ ; ಅವನು ಮೈದಳೆದೊಡನೆಯೇ ಪ್ರಜಾಪತಿಯು ಮೂರೂ ವೇದಗಳನ್ನು (ಎಂದರೆ ಋಕ್, ಯಜುಸ್, ಸಾಮ) ಸಿದ್ಧಪಡಿಸಿ ಅವುಗಳನ್ನು ಸೋಮನ ಕೈಯೊಳಗಿರಿಸಿದನು. ಅನಂತರ ಹುಟ್ಟಿದವನು ಸೂರ್ಯ. ಅವನ ಮಗಳು ಸೂರ್ಯೆ. ಸವಿತೃವೆಂಬುದು ಸೂರ್ಯನ ಇನ್ನೊಂದು ಹೆಸರು. ಹಾಗಾಗಿ ಸೂರ್ಯೆಯ ಇನ್ನೊಂದು ಹೆಸರು ಸಾವಿತ್ರಿ (ಎಂದರೆ ಸವಿತೃವಿನ ಮಗಳು). ಸೂರ್ಯೆಯು ಋಷಿಯೂ ಹೌದು. ಋಗ್ವೇದದ ಹತ್ತನೆಯ ಮಂಡಲದಲ್ಲಿ ಎಂಭತ್ತೈದನೆಯ ಸೂಕ್ತಕ್ಕೆ ಅವಳೇ ಋಷಿ ; ಇಲ್ಲಿರುವ ನಲವತ್ತೇಳು ಮಂತ್ರಗಳು ಅವಳದ್ದೇ ಕಾಣ್ಕೆ.

ಈ ಮಂತ್ರಗಳಲ್ಲಿ ಅವಳು ಸೋಮನನ್ನು ಮದುವೆಯಾದ ಪ್ರಸ್ತಾಪವಿದೆ. ಇದೇ ಪ್ರಸಂಗವು ತೈತ್ತಿರೀಯಬ್ರಾಹ್ಮಣ, ಐತ್ತರೇಯ ಬ್ರಾಹ್ಮಣ, ಬೃಹದ್ದೇವತಾ, ಸಾಯಣಭಾಷ್ಯಗಳಲ್ಲೂ ಬೇರೆ ಬೇರೆ ಬಗೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಸ್ಕಂದಸ್ವಾಮಿಗಳೂ, ಸಾಯಣರೂ ಇದನ್ನು ಇತಿಹಾಸ ವೆಂದು ಗುರುತಿಸಿದ್ದಾರೆ. ಇದೊಂದು ಆಖ್ಯಾಯಿಕೆಯೂ ಹೌದು. ಪಾಠಾಂತರಗಳಲ್ಲಿ ಬಂದಿರುವ ವಿವರಗಳನ್ನು ಒಂದುಗೂಡಿಸಿ ಮುಂದಿನ ಕತೆಯನ್ನು ಕಾಣಿಸಲಾಗಿದೆ.]

ಸೂರ್ಯನ ಮಗಳು ಸೂರ್ಯೆ ಬಲು ಚೆಲುವೆ. ಅವಳ ಮೈಕಾಂತಿ ಥಳಥಳನೆ ಹೊಳೆಯುವಂಥದು. ಸೂರ್ಯನ ಮಗಳೆಂದ ಮೇಲೆ

ಕೇಳುವುದೇನು ? ಸಣ್ಣವಳಾಗಿದ್ದಾಗಿನಿಂದ ಅವಳ ಮನಸ್ಸನ್ನು ಸೋಮನು ವಶಪಡಿಸಿಕೊಂಡಿದ್ದನು. ತಾನು ಸೋಮನನ್ನೇ ಮದುವೆಯಾಗುವುದೆಂದು ನಿಶ್ಚಯಿಸಿದ್ದಳು. ಅವಳು ಬೆಳೆದು ನಿಂತಾಗ, ಅವಳ ಅಜ್ಜ ಪ್ರಜಾಪತಿ ಅವಳಿಗೆ ತಕ್ಕ ವರನನ್ನು ಹುಡುಕಬೇಕೆಂದೆಣಿಸಿದನು. ಇದನ್ನು ತಿಳಿದೊಡನೆ ಅವಳು ಪ್ರಜಾಪತಿಯ ಬಳಿ ಬಂದು, ತಾನು ಸೋಮನನ್ನೇ ಮದುವೆಯಾಗ ಬೇಕೆಂದಿರುವೆನು ಎಂದು ತಿಳಿಸಿದಳು. ಆದರೆ ಸೋಮನು ಶ್ರದ್ಧೆಯೆಂಬ ಇನ್ನೊಂದು ಹುಡುಗಿಯಲ್ಲಿ ಆಸಕ್ತನಾಗಿದ್ದುದು ಪ್ರಜಾಪತಿಗೆ ಗೊತ್ತಿತ್ತು.

ಇದನ್ನು ಸೂರ್ಯೆಗೆ ತಿಳಿಸಿದರೂ, ಸೂರ್ಯೆ ಸೋಮನನ್ನೇ ಮದುವೆಯಾಗುವೆನೆಂದು ಹಟ ಹಿಡಿದಳು. ಮತ್ತೆ , ಸೋಮನಿಗೆ ತನ್ನ ಮೇಲೆ ಅನುರಾಗ ಹುಟ್ಟಿಸುವ ಉಪಾಯವೊಂದನ್ನು ಹೇಳಿಕೊಡಬೇಕೆಂದು ಪ್ರಜಾಪತಿಯನ್ನು ಬೇಡಿಕೊಂಡಳು. ಬೇರೆ ದಾರಿ ಕಾಣದೆ, ಪ್ರಜಾಪತಿಯು ಆಕೆಗೆ ಸ್ಥಾಗರವೆಂಬ ಅಲಂಕಾರವೊಂದನ್ನು ಕೊಟ್ಟು, ಇದನ್ನು ಧರಿಸಿ ಸೋಮನೆದುರು ಕಾಣಿಸಿಕೊಳ್ಳುವಂತೆ ಹೇಳಿದನು. ಅವಳು ಹಾಗೆ ಮಾಡಲು, ಸೋಮನು ಸೂರ್ಯೆಯನ್ನು ಕಂಡೊಡನೆ ಅವಳನ್ನು ಮೋಹಿಸಿದನು.

ಅವರಿಬ್ಬರೂ ಮಾತನಾಡಿಕೊಂಡಿರುವಾಗ ಸೋಮನ ಬಲಗೈ ಮುಷ್ಟಿ ಮುಚ್ಚಿಕೊಂಡಿದ್ದುದನ್ನು ಸೂರ್ಯೆ ಕಂಡಳು. ಕೈಯಲ್ಲೇನಿದೆ ಯೆಂಬ ಕುತೂಹಲದಿಂದ, ಸೋಮನನ್ನು ಕೈಬಿಚ್ಚುವಂತೆ ಕೇಳಿದಳು. ಮೊದಲು ಸೋಮ ಒಪ್ಪಲಿಲ್ಲ. ಆದರೆ ಸೂರ್ಯೆಯ ಬಲವಂತಕ್ಕೆ ಮಣಿದು ಮುಷ್ಟಿಯನ್ನು ತೆರೆದು, ಅದರೊಳಗಿದ್ದ ಮೂರು ವೇದಗಳನ್ನು ಆಕೆಗೆ ತೋರಿಸಿದನು. ಪ್ರಣಯದ ಭರದಲ್ಲಿ ಅವುಗಳನ್ನು ಸೂರ್ಯೆಯ ವಶಕ್ಕೆ ಕೊಡಲೊಪ್ಪಿದನು.

ಸೂರ್ಯೆಯು (ಎಂದರೆ ಸಾವಿತ್ರಿಯು) ಮೂರೂ ವೇದಗಳ ಒಡತಿಯಾದುದು ಹೀಗೆ. ಈ ಸಾವಿತ್ರಿಯೇ ಗಾಯತ್ರಿ. ಅವಳೇ ವಾಕ್. ಗೌರಿಯೆಂದರೂ, ಸರಸ್ವತಿಯೆಂದರೂ, ಉಷಸ್ಸೆಂದರೂ ಅವಳೇ ಎಂದು ಬೃಹದ್ದೇವತೆಯ ಒಕ್ಕಣೆ.

ಮುಂದೆ ಸೂರ್ಯೆ ಮತ್ತು ಸೋಮ ಇವರ ವಿವಾಹವನ್ನು ಪ್ರಜಾಪತಿ ಏರ್ಪಡಿಸಿದನು. ಈ ಸಂದರ್ಭದಲ್ಲಿ ದೇವತೆಗಳೆಲ್ಲರೂ ಸೂರ್ಯೆಯನ್ನು ಮದುವೆಯಾಗಲು ತಾವು ತಾವೆಂದು ಮುನ್ನುಗ್ಗಿ ಬಂದರು. ಪ್ರಜಾಪತಿಯು ಇಕ್ಕಟ್ಟಿಗೆ ಸಿಕ್ಕಿದನು. ಈಗೇನು ಮಾಡುವುದೆಂದು ಯೋಚಿಸಿ, ಸ್ವಯಂವರವೆಂಬ ಉಪಾಯವನ್ನು ಹೂಡಿದನು. ಪಣವಾಗಿ ಒಂದು ಸಾವಿರ ಋಜ್ಮಂತ್ರಗಳನ್ನು (ಶಸ್ತ್ರಗಳೆಂದೂ ಕರೆಯುತ್ತಾರೆ) ದೇವತೆಗಳೆದುರು ಇರಿಸಿ, ಇವನ್ನು ಯಾರು ಅಡೆತಡೆಯಿಲ್ಲದೆ, ಇನ್ನೊಬ್ಬರ ನೆರವಿಲ್ಲದೆ ಪಠಿಸುವರೋ ಅವರು ಸೂರ್ಯೆಯನ್ನು ವರಿಸಬಹುದೆಂದು ಗೊತ್ತುಮಾಡಿದನು.

ದೇವತೆಗಳು ತಮ್ಮ ತಮ್ಮಲ್ಲೇ ಅಸೂಯೆಯಿಂದ ಶಸ್ತ್ರಗಳು (ಎಂದರೆ ಮಂತ್ರಗಳು) ತಮಗೆ ಸೇರಬೇಕು, ತಮಗೆ ಸೇರಬೇಕು ಎಂದು ಜಗಳವಾಡತೊಡಗಿದರು. ಕಡೆಗೆ ಅವರೇ ಒಂದು ಒಪ್ಪಂದಕ್ಕೆ ಬಂದರು. ಮನೆಯಲ್ಲಿರುವ ಅಗ್ನಿಯಿಂದ (ಗಾರ್ಹಪತ್ಯಾಗ್ನಿ) ಮೇಲೆ ಮೇಲೆ ಏರುತ್ತ ಸೂರ್ಯನವರೆಗೆ ಯಾರು ಮೊದಲು ಹೋಗುವರೋ, ಅವರೇ ಪಂದ್ಯದಲ್ಲಿ ಗೆದ್ದಂತೆ, ಅವರೇ ಸೂರ್ಯೆಯ ಕೈಹಿಡಿಯುವರು ಎಂದು ತೀರ್ಮಾನಿಸಿಕೊಂಡರು.

ಕೆಂಬಣ್ಣದ ಎತ್ತುಗಳಿಂದ ಹೂಡಿದ ರಥವನ್ನೇರಿ ಉಷೋದೇವತೆಯೂ, ಹೇಸರಗತ್ತೆಯ ರಥದಲ್ಲಿ ಕುಳಿತು ಅಗ್ನಿಯೂ, ಬಂಗಾರದ ಬಣ್ಣದ ಕುದುರೆಗಳನ್ನು ಕಟ್ಟಿದ ರಥದಲ್ಲಿ ಕುಳಿತು ಇಂದ್ರನೂ, ಕತ್ತೆಗಳೆ

ಳೆಯುವ ರಥದಲ್ಲಿ ಅಶ್ವಿನೀದೇವತೆಗಳೂ ಹೊರಟರು. ಬೇರೆಬೇರೆ ದೇವತೆಗಳೂ ಹೊರಟರು ; ಆದರೆ ಇವರು ಮುಖ್ಯರು. ಅಶ್ವಿನೀದೇವತೆಗಳು ಯುವಕರು, ಚೆಲುವರು, ಬಲಶಾಲಿಗಳು ; ಅವರ ರಥವೂ ವೇಗವುಳ್ಳದ್ದು. ಅವರೇ ಮುಂದೆ ಮುಂದೆ ಹೋಗತೊಡಗಿದರು. ಆದರೆ ಅವರನ್ನು ಮೀರಿಸಿ ಅಗ್ನಿಯು ಸಾಗಿದ್ದನು.

ಆಗ ಅವರು ಅಗ್ನಿಯನ್ನು ಕುರಿತು ''ಅಯ್ಯಾ, ಸ್ವಲ್ಪ ತಡೆ. ನೀನು ಹೇಗೂ ದೇವತೆಗಳಲ್ಲಿ ಅಗ್ರಗಣ್ಯ ; ಎಲ್ಲ ಹವಿರ್ಭಾಗವೂ ನಿನಗೇ ಸೇರುವುದಿದೆ. ಈ ಪಂದ್ಯದಲ್ಲಿ ಗೆದ್ದು ನೀನೇನು ಮಾಡುವೆ ? ನಮಗೆ ಸೋಮಯಾಗದಲ್ಲಿ ಪಾಲೇ ಇಲ್ಲ. ನಮ್ಮನ್ನು ಕೇಳುವವರು ಯಾರು ? ನಮ್ಮ ಮೇಲೆ ಕರುಣೆ ತೋರಿ ನಮ್ಮನ್ನು ಮುಂದೆ ಹೋಗಲು ಬಿಡು. ನಮಗೆ ಸಂಭಾವನೆಯಾಗಿ ಬರುವ ಸಹಸ್ರ ಋಕ್ಕುಗಳಲ್ಲಿ ನಿನಗೂ ಒಂದು ಪಾಲು ಕೊಡುತ್ತೇವೆ'' ಎಂದು ಕೇಳಿಕೊಂಡರು. ಅಗ್ನಿಯು ಆಗಲೆಂದು ಒಪ್ಪಿದ.

ಅಶ್ವಿನೀದೇವತೆಗಳು ಅಗ್ನಿಗಿಂತ ಮುಂದಾದರು. ಆದರೆ ತಮ್ಮ ಮುಂದೆ ಉಷೋ ದೇವತೆ ಇರುವುದನ್ನು ಕಂಡರು. ಮತ್ತೆ ಹಿಂದೆ ಹೂಡಿದ ತಂತ್ರದಿಂದಲೇ ತಾವು ಮುಂದಾದರು. ಈಗ ತಮಗಿಂತ ಮುಂದಾಗಿ ಇಂದ್ರ ಇರುವುದನ್ನು ಕಂಡರು. ಇಂದ್ರನೊಂದಿಗೂ ಇದೇ ಒಪ್ಪಂದವನ್ನು ಮಾಡಿಕೊಂಡು, ಇಂದ್ರನನ್ನು ಹಿಂದೆ ಸರಿಸಿ ತಾವು ಮುಂದಾಗಿ ಪಣವನ್ನು ಗೆದ್ದರು.

ಋಕ್ಸಹಸ್ರದಲ್ಲಿ (ಶಸ್ತ್ರಮಂತ್ರಗಳಲ್ಲಿ) ಅಗ್ನಿ ಪರವಾಗಿ, ಉಷೋದೇವತಾಪರವಾಗಿ ಮತ್ತು ಇಂದ್ರಪರವಾಗಿ ಮಂತ್ರಗಳಿರುವುದು ಈ ಕಾರಣದಿಂದಲೇ. ಅಶ್ವಿನೀದೇವತೆಗಳೇ ಪಣವಾಗಿ ಇರಿಸಿದ್ದ ಸಾವಿರ ಋಙ್ಮಂತ್ರಗಳಿಗೂ ಒಡೆಯರಾದುದರಿಂದ ಈ ಮಂತ್ರಗಳಿಗೆ ಒಟ್ಟು ಆಶ್ವಿನಶಸ್ತ್ರವೆಂದು ಕರೆಯುವ ವಾಡಿಕೆಯಿದೆ.

ಅಶ್ವಿನೀದೇವತೆಯರು ವಿವಸ್ವಾನನ ಮಕ್ಕಳು ; ಮುಂಜಾನೆ ಮಾಡುವ ಪ್ರಾತಃ ಸವನ, ನಡುಹಗಲಲ್ಲಿ ಮಾಡುವ ಮಾಧ್ಯಂದಿನ ಸವನ ಮತ್ತು ಸಂಜೆಮಾಡುವ ಸಾಯಂಸವನಗಳಲ್ಲಿ ಪಾಲ್ಗೊಳ್ಳುತ್ತಾರೆ. ಪ್ರಾತಃಸವನದಲ್ಲಿ ಅವರೊದಿಗೆ ಇರುವವಳು ಉಷೋದೇವತೆ ; ಮಧ್ಯಾಹ್ನ ಸಮಯದಲ್ಲಿ ಸೂರ್ಯ ; ಸಂಜೆಯಲ್ಲಿ ವೃಷಾಕಪಾಯಿ. ಈ ಮೂರು ರೂಪಗಳೇ ಸಾವಿತ್ರಿ, ಗಾಯಿತ್ರಿ, ಸರಸ್ವತಿಯರೆಂಬ ಮೂರು ರೂಪಗಳು. ಅಶ್ವಿನೀದೇವತೆಗಳು ಮೂರು ಚಕ್ರಗಳುಳ್ಳ ರಥವನ್ನೇರಿ ಅಂತರಿಕ್ಷದಲ್ಲಿ ಸಂಚರಿಸುವರೆಂದು ಹೇಳುವುದು ಈ ಅರ್ಥದಲ್ಲೇ. ಅವರ ರಥ ಸಂಚಾರವು ಪೃಥ್ವೀ, ಅಂತರಿಕ್ಷ ಮತ್ತು ದ್ಯುಲೋಕ ಎಂಬ ಮೂರು ನೆಲೆಗಳಲ್ಲಿ, ತ್ರಿವಿಕ್ರಮನಾದ ವಿಷ್ಣುವಿನ ತಾತ್ಪರ್ಯವೂ ಇದೇ.

⅄ ⅄ ⅄

ಕತೆಯ ಇನ್ನೊಂದು ಪಾಠದಲ್ಲಿ, ಪ್ರಜಾಪತಿಯು ದೇವತೆಗಳನ್ನೆಲ್ಲ ಒಪ್ಪಿಸಿ ಸೂರ್ಯೆಯನ್ನು ಸೋಮನಿಗೆ ಕೊಟ್ಟು ಮದುವೆ ಮಾಡಿದನು. ಸೂರ್ಯೆಯು ತವರುಮನೆಯಿಂದ ಗಂಡನ ಮನೆಗೆ ಹೊರಡುವಾಗ ಮನಸ್ಸೇ ರಥವಂತೆ, ಅಂತರಿಕ್ಷವೇ ಅದರ ಹೊದ್ದಿಕೆಯಂತೆ ; ಅಂತರಿಕ್ಷದಲ್ಲಿ ಬೆಳಗುವ ಎರಡು ಮಂಡಲಗಳೇ (ಎಂದರೆ ಚಂದ್ರ-ಸೂರ್ಯರೇ) ರಥಕ್ಕೆ ಕಟ್ಟಿದ ಎತ್ತುಗಳು ; ಋಕ್ ಮತ್ತು ಸಾಮ ಎಂಬೆರಡು ವೇದಗಳು ನೊಗಗಳು ; ಕಿವಿಗಳೆರಡು ರಥದ ಗಾಲಿಗಳು. ಅಂತರಿಕ್ಷವೇ ರಥವು ಸಂಚರಿಸುವ ದಾರಿ. ರಥದ ಮುಂದೆ ದಾರಿ ಮಾಡಿಕೊಡಲು ಹೊರಟವನು ಅಗ್ನಿ. ರಥದ ಇಕ್ಕೆಲಗಳಲ್ಲಿ ಅಂಗರಕ್ಷಕರಾಗಿ ಅಶ್ವಿನೀದೇವತೆಗಳು.

ಹೀಗೆ ಸೂರ್ಯೆಯು ವೈಭವದಿಂದ ಸೋಮನೆಡೆಗೆ ಹೋಗುತ್ತಿರುವಾಗ, ನಡುದಾರಿಯಲ್ಲಿ ವಿಶ್ವಾವಸುವೆಂಬ ಗಂಧರ್ವನು

ಅವಳನ್ನು ಅಡ್ಡಗಟ್ಟಿದ. ಗಂಧರ್ವರು ಸ್ತ್ರೀಕಾಮರು ; ಹೆಂಗಳೆಯವರೆಂದರೆ ಮರುಳಾಗುವವರು. ವಾಯುಮಂಡಲದ ಮೇಲ್ಭಾಗದಲ್ಲಿ ಅವರ ವಾಸ ; ಆಕಾಶವನ್ನು ಅಳೆಯುವರು, ಅಂತರಿಕ್ಷದಲ್ಲಿ ಸಂಚರಿಸುವವರು. ಸೂರ್ಯ-ಸೋಮರೊಂದಿಗೆ ಅವರ ಗೆಳೆತನ.

ವಿಶ್ವಾವಸು ತನ್ನನ್ನು ಹಿಡಿದು ನಿಲ್ಲಿಸಿ ತನ್ನನ್ನೇ ಮದುವೆಯಾಗೆಂದು ಹೇಳಲು, ಸೂರ್ಯೆ'' ಅಯ್ಯಾ ಧರ್ಮಾತ್ಮ ಮದುವೆಯಾಗದಿರುವ ಹೆಣ್ಣು ಮಕ್ಕಳತ್ತ ನಿನ್ನ ನೋಟವನ್ನು ಹರಿಸು. ನಾನು ಸೋಮನನ್ನು ಈಗಾಗಲೇ ವರಿಸಿದ್ದೇನೆ. ನನ್ನನ್ನು ಬಲಾತ್ಕರಿಸುವುದು ನಿನಗೆ ತರವಲ್ಲ. ನನ್ನ ಗಂಡನ ಮನೆಗೆ ಹೊರಟಿದ್ದೇನೆ ; ನನ್ನನ್ನು ಮುಂದಕ್ಕೆ ಹೋಗಗೊಡು'' ಎಂದು ಕೇಳಿಕೊಂಡಳು. ಆದಕ್ಕೆ ಗಂಧರ್ವನು ''ನೀನು ಹೇಳುವುದು ಸರಿ ; ನಿನ್ನ ಪ್ರಯಾಣವನ್ನು ಮುಂದುವರಿಸು. ನಿನ್ನ ಗಂಡನೊಂದಿಗೆ ಸುಖವಾಗಿ ಬಾಳು. ನಿಮ್ಮಿಬ್ಬರ ನಂಟು ನೇರವಾಗಿರಲಿ, ನೀವು ನಡೆಯುವ ದಾರಿ ಕಂಟಕವಿಲ್ಲದಿರಲಿ. ದಂಪತಿಗಳ ಪರಸ್ಪರ ಸಂಬಂಧ ಮಧುರವಾಗಿರಲಿ. ಹೋಗಿ ಬಾ !'' ಎಂದು ಕಳುಹಿಸಿಕೊಟ್ಟನು.

ಸೂರ್ಯೆ ಮುಂದೆ ಸೋಮನೊಂದಿಗೆ ಕೂಡಿಕೊಂಡು ಬಾಳಿದಳು.

[ಮೇಲೆ ಕಾಣಿಸಿದ ಋಗ್ವೇದಸೂಕ್ತದಲ್ಲಿ ಬರುವ ಮಂತ್ರಗಳಲ್ಲಿ ಕೆಲವನ್ನು ಈಗಲೂ ವಿವಾಹ ಸಂದರ್ಭದಲ್ಲಿ ಬಳಸುವುದಿದೆ. ಸಣ್ಣ ಹುಡುಗಿ ಯಾಗಿದ್ದಾಗ ಸೋಮನೇ ಒಡೆಯನೆಂದೂ, ಮದುವೆಯ ವಯಸ್ಸು ಬಂದಾಗ ಅವಳು ಗಂಧರ್ವನ ವಶದಲ್ಲಿರುವಳೆಂದೂ, ಮದುವೆಯಾಗು ವಾಗ ಅಗ್ನಿಯೇ ಗಂಡನೆಂದೂ, ಮದುವೆಯಾದ ಮೇಲೆ ಮನುಷ್ಯವರನು ಗಂಡನೆಂದೂ ಸ್ಮೃತಿಗಳಲ್ಲಿ ಕಾಣಬರುವ ಒಕ್ಕಣೆ. ಇದಕ್ಕೆ ಈ ಕತೆಯ ವಿವರಗಳೇ ಆಧಾರ.

ವೇದಾಭಿಮಾನಿ ದೇವತೆಯಾದ ಸೂರ್ಯೆ-ಸಾವಿತ್ರಿಗೆ (ಎಂದರೆ ಶಬ್ದ ಬ್ರಹ್ಮಾತ್ಮಕವಾದ ವಾಕ್ಕಿಗೆ) ಮೇಲಿನ ಲೋಕದಲ್ಲಿ (ದಿವಿ) ಇದ್ದು ಕೊಂಡು, ಆದಿತ್ಯರಿಗೆ ಬಲವನ್ನೊದಗಿಸುವ, ಪೃಥ್ವಿಯನ್ನು ಮಹತ್ತ್ವವುಳ್ಳ ದ್ದನ್ನಾಗಿ ಮಾಡುವ, ರಸಾತ್ಮಕವಾದ ಸೋಮನೇ ಗಂಡನೆನ್ನುವುದು ಸಾಂಕೇತಿಕ ವಿವರ. ಸೋಮನನ್ನು ಕಾಪಾಡುವವನು ವಾಯುವೆಂದೂ, ಕಾಲವ್ಯವಸ್ಥೆಗೆ ಕಾರಣನಾದವನು ಸೋಮನೆಂದೂ ವಿವರಣೆಯಿದೆ.]

ಹೆಣ್ಣಿನ ಹಂಬಲದಿಂದ ಋಷಿಯಾದವನು

[ಈ ಪ್ರಸಂಗವು ಋಗ್ವೇದದ ಐದನೆಯ ಮಂಡಲದಲ್ಲಿರುವ ಐವತ್ತೆರಡನೆಯ ಸೂಕ್ತದ ಮಂತ್ರಗಳನ್ನು ಕಂಡುಕೊಂಡ ಶ್ಯಾವಾಶ್ವನೆಂಬ ಋಷಿಯ ಹಿನ್ನೆಲೆಯನ್ನು ಹೇಳುತ್ತ ಬೃಹದ್ದೇವತಾ (5-50 ರಿಂದ 80) ದಲ್ಲಿರುವ ಒಕ್ಕಣೆಯಲ್ಲಿ ಕಾಣುತ್ತದೆ. ಸಾಯಣ ಭಾಷ್ಯದಲ್ಲಿಯೂ ಈ ಕತೆ ಬಂದಿದೆ (5-61)]

ರಥವೀತಿ-ದಾರ್ಭ್ಯ (ದರ್ಭನ ಮಗ)ನೆಂಬ ರಾಜ. ಆಳರಸನಾಗಿ ಆಡಳಿತವನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದನಾದರೂ, ಪ್ರವೃತ್ತಿಯಲ್ಲಿ ಋಷಿಯಂತೆ ಇದ್ದುಬಿಟ್ಟಿದ್ದ ; ಆಧ್ಯಾತ್ಮಿಕದತ್ತಲೇ ಒಲವು. ಅವನ ಹೆಂಡತಿಯಂತೂ ಋಷಿಪುತ್ರಿಯೇ ಆಗಿದ್ದವಳು ; ರಾಜನಿಗೆ ಅನುರೂಪಳಾದ ರಾಣಿ. ಅವರು ಅರಮನೆಯಲ್ಲಿಯೂ ಇರುತ್ತಿದ್ದರು ; ಸಮಯ ಸಿಕ್ಕಾಗೆಲ್ಲ ಗೋಮತೀ ನದಿಯ ದಂಡೆಯ ಮೇಲೆ, ಗುಡ್ಡವೊಂದರ ತಪ್ಪಲಲ್ಲಿ ಮಾಡಿಕೊಂಡಿದ್ದ ಆಶ್ರಮದಲ್ಲಿ ಇರುತ್ತಿದ್ದರು. ಅವರಿಗೊಬ್ಬಳು ಮಗಳು ; ತುಂಬ ಚೆಲುವೆ, ಅಷ್ಟೇ ಜಾಣೆ ; ಗುಣಶೀಲೆ.

ಒಮ್ಮೆ ರಥವೀತಿರಾಜನಿಗೆ ಸೋಮಯಾಗ ಮಾಡಬೇಕೆಂಬ ಮನಸ್ಸಾಯಿತು. ರಾಜನ ಬಯಕೆಯೆಂದರೆ ಏನು ತಡೆ ? ಎಲ್ಲ ಸಿದ್ಧತೆಗಳೂ ಆದುವು. ಆದರೆ ಯಾಗವನ್ನು ನಡೆಸಿಕೊಡುವ ಋತ್ವಿಕರು ಬೇಕಲ್ಲ ? ಅತ್ರಿವಂಶಕ್ಕೆ

ಸೇರಿದ ಅರ್ಚನಾನಸವೆಂಬ ಪುರೋಹಿತನು ಆಗ ಪ್ರಸಿದ್ಧನಾಗಿದ್ದನು. ಅವನಿಗೆ ವೇದದ ಸಾಂಗ ಪರಿಚಯವೂ ಇದ್ದಿತು ; ಆತ ಕರ್ಮಕಾಂಡದಲ್ಲೂ ನುರಿತವನಾಗಿದ್ದನು. ಅವನಿಗೊಬ್ಬ ಮಗ ; ಶ್ಯಾವಾಶ್ವನೆಂದು ಅವನ ಹೆಸರು. ತಂದೆಯ ಬಳಿಯೇ ವೇದ ವಿದ್ಯೆಯನ್ನು ಕಲಿತು, ನಿಷ್ಠನಾದ ಬ್ರಹ್ಮಚಾರಿಯಾಗಿದ್ದನು ; ಜಾಣ, ಗುಣಶೀಲ.

ರಾಜನು ಅರ್ಚನಾನಸ ಮುನಿಯನ್ನು ತನ್ನ ಯಾಗದಲ್ಲಿ ಹೋತೃವೆಂಬ ಪ್ರಮುಖ ಋತ್ವಿಜನಾಗಿರುವಂತೆ ಕೇಳಿಕೊಂಡನು. ಅವನೂ ಒಪ್ಪಿ ತನ್ನ ಮಗ ಶ್ಯಾವಾಶ್ವನನ್ನೂ ಜೊತೆಮಾಡಿಕೊಂಡು ಯಜ್ಞ ಶಾಲೆಗೆ ಬಂದನು. ಯಜ್ಞ ನಡೆಯುತ್ತಿರುವಾಗ ರಾಜದಂಪತಿಗಳ ಪಕ್ಕದಲ್ಲೇ ರಾಜಪುತ್ರಿಯೂ ಕುಳಿತಿದ್ದಳು. ಹೋತೃವಾಗಿದ್ದ ಅರ್ಚನಾನಸನ ಕಣ್ಣು ರಾಜಪುತ್ರಿಯತ್ತ ಹಾಯಿತು. ಅವಳನ್ನು ಕಂಡೊಡನೆ ಅರ್ಚನಾನಸನಿಗೆ ಅವಳು ಜಾಣೆಯೆಂಬುದೂ, ಗುಣಶೀಲಯೆಂಬುದು ತಟ್ಟನೆ ತಿಳಿದು ಹೋಯಿತು. ಇವಳನ್ನು ತನ್ನ ಮಗನಿಗೆ ತಂದುಕೊಂಡರೆ ಹೇಗೆ ಎಂಬ ಆಲೋಚನೆಯೂ ಒದಗಿ ಬಂದಿತು. ತನ್ನ ಮಗ ಶ್ಯಾವಾಶ್ವನ ಗಮನವನ್ನು ಈ ಹುಡುಗಿಯತ್ತ ಸೆಳೆದನು. ಶ್ಯಾವಾಶ್ವನೂ ಆಕೆಯ ಚೆಲುವಿಗೆ ಮನಸೋತ.

ಯಜ್ಞದ ಕೆಲಸವೆಲ್ಲ ಮುಗಿದ ಮೇಲೆ ಅರ್ಚನಾನಸನು ರಾಜನ ಬಳಿ ಬಂದು, ''ಅಯ್ಯಾ ದೊರೆಯೆ, ನಿನ್ನ ಮಗಳನ್ನು ನನ್ನ ಸೊಸೆಯನ್ನಾಗಿ ಮಾಡಿಕೊಳ್ಳಬೇಕೆಂದಿದ್ದೇನೆ ; ನನ್ನ ಮಗನೂ ಆಕೆಯನ್ನು ಒಪ್ಪಿದ್ದಾನೆ. ನಿನ್ನ ಸಮ್ಮತಿಯಿದೆಯೆ ?'' ಎಂದು ಕೇಳಿದನು. ಆ ಕಾಲದಲ್ಲಿ ಮುಂದೆ ಬಂದಂತೆ ಬ್ರಾಹ್ಮಣ, ಕ್ಷತ್ರಿಯ ಎಂಬ ವಿಭಾಗ ಯಾವ ಸಂಬಂಧಕ್ಕೂ ಅಡ್ಡಿಬರುತ್ತಿರಲಿಲ್ಲ. ಕ್ಷತ್ರಿಯ-ಬ್ರಾಹ್ಮಣರ ನಡುವೆ ವಿವಾಹಾದಿಗಳು ನಡೆಯುತ್ತಿದ್ದವು.

ಆದುದರಿಂದ ಪುರೋಹಿತನ ಬಯಕೆ ಸೋಜಿಗದ್ದೇನಾಗಿರಲಿಲ್ಲ ; ರಾಜನಿಗೂ ಅದು ಅನುಚಿತವೆಂದು ಕಾಣಲಿಲ್ಲ.

ರಾಜನೂ ಶ್ಯಾವಾಶ್ವನನ್ನು ನೋಡಿದ್ದನು ; ಅವನೂ ತನ್ನ ತಂದೆಗೆ ಸರಿಸಮನಾಗಿಯೆ ಮಂತ್ರಪಾಠ ಮಾಡುತ್ತಿದ್ದುದನ್ನು ಕಂಡಿದ್ದನು ; ಒಳ್ಳೆಯ ತೇಜಸ್ವಿಯೆಂಬುದನ್ನೂ ಗಮನಿಸಿದ್ದನು. ಒಡನೆಯೆ ಅವನು ಅರ್ಚನಾನಸನಿಗೆ, ಯಾಕಾಗಬಾರದು ? ಅನುರೂಪವಾದ ಜೋಡಿಯೆಂದೇ ನನಗೆ ತೋರುತ್ತದೆ. ಆದರೆ ನನ್ನ ಹೆಂಡತಿಯನ್ನೂ ಒಂದು ಮಾತು ಕೇಳಿಬಿಡುತ್ತೇನೆ, ತಾಳಿ'' ಎಂದು ಹೇಳಿ ಒಳಗೆ ಹೋದನು. ಈ ವಿಷಯವನ್ನು ರಾಣಿಯಲ್ಲಿ ಪ್ರಸ್ತಾಪ ಮಾಡಿದಾಗ ಆಕೆ, ''ಅತ್ರಿಯ ವಂಶದವರೆಂದ ಮೇಲೆ ಯಾವ ಅಳುಕು, ಏನು ಅಂಜಿಕೆ ? ಅರ್ಚನಾನಸಮುನಿಯೂ ವಿದ್ವಾಂಸ, ಸಂಭಾವಿತ, ಸಾತ್ತ್ವಿಕ ; ಅವನ ಮಗನೂ ಅವನಂತೆಯೇ ಯೋಗ್ಯ. ಆದರೆ ನೀನು ರಾಜರ್ಷಿ ; ನಾನೂ ಋಷಿಯ ಮಗಳು. ಋಷಿಯಲ್ಲದವನಿಗೆ ನಮ್ಮ ಮಗಳನ್ನು ಕೊಡಬಾರದೆಂದು ನನ್ನ ಎಣಿಕೆ'' ಎಂದು ಹೇಳಿಬಿಟ್ಟಳು.

ಅವಳ ಮಾತಿಗೆ ರಾಜನೂ ಒಪ್ಪಿ, ಹೊರಗೆ ಬಂದು ಅರ್ಚನಾನಸಮುನಿಗೆ ''ನನ್ನ ಪತ್ನಿಯು ಈ ಸಂಬಂಧಕ್ಕೆ ಸಮ್ಮತಿಸುತ್ತಿಲ್ಲ. ಅವಳಿಗೆ ಋಷಿಯಾದವನೇ ಅಳಿಯನಾಗಬೇಕೆಂಬ ಮನಸ್ಸಿದೆ'' ಎಂದು ತಿಳಿಸಿದನು ಅರ್ಚನಾನಸನಿಗೆ ಅಸಮಾಧಾನವಾದರೂ ಏನು ಮಾಡುವುದಿದೆ ? ಸರಿಯೆಂದು ಹೇಳಿ ಹೊರಟುಬಿಟ್ಟನು. ಆದರೆ ಅವನೊಂದಿಗೇ ನಿಂತಿದ್ದ ಅವನ ಮಗ ಶ್ಯಾವಾಶ್ವನಿಗೆ ಇದೊಂದು ಪೆಟ್ಟು ಬಿದ್ದಂತಾಯಿತು. ಋಷಿಯಾಗಲೇಬೇಕೆಂದು ಹಟಹಿಡಿದುಹಿಂದಿರುಗಿದನು.

ಋಷಿಯೆಂದರೆ ವೇದಮಂತ್ರಗಳನ್ನು ನೇರಾಗಿ ಕಂಡವನು ; ಮಂತ್ರದೇವತೆಯನ್ನು ತನ್ನಲ್ಲೇ ಸಾಕ್ಷಾತ್ಕರಿಸಿಕೊಂಡವನು. ಬರಿಯ ಓದಿನಿಂದ, ವಿದ್ಯೆಯಿಂದ ಯಾರೂ ಋಷಿಯಾಗಲಾರ. ತಪಸ್ಸು ಬೇಕು ;

ಆದರಿಂದ ಒಡಲು ತಿಳಿಯಾದ ಮೇಲೆ ಒಳಗಿನ ಬೆಳಕು ತೋರಿಕೊಳ್ಳುತ್ತದೆ. ಈ ಬೆಳಕಿನಲ್ಲಿ ಕಂಡದ್ದೇ ಮಂತ್ರಗಳು. ಅವುಗಳನ್ನು ಬರಿದೆ ಆಲೋಚನೆ, ಕಲ್ಪನೆ, ಭಾವನೆಯೆನ್ನಲಾಗದು ; ತತ್ತ್ವದ ದರ್ಶನವೇ ಮಂತ್ರ. ಇದು ಶ್ಯಾವಾಶ್ವನಿಗೆ ತಿಳಿದಿದ್ದಿತು. ಆಶ್ರಮಕ್ಕೆ ಹಿಂದಿರುಗಿದೊಡನೆ ತಪಶ್ಚರ್ಯೆಯಲ್ಲಿ ತೊಡಗುವುದೆಂದು ನಿಶ್ಚಯಿಸಿದನು.

ಹಾಗೆಯೆ ನೈಷ್ಠಿಕ ಬ್ರಹ್ಮಚರ್ಯವ್ರತವನ್ನು ಕೈಗೊಂಡು ಭಿಕ್ಷೆ ಬೇಡಿ ಕೊಂಡೇ ಜೀವಿಸುವುದೆಂದು ಪರ್ಯಟನೆಗೆ ಹೊರಟುಬಿಟ್ಟನು. ಅಲ್ಲಲ್ಲಿ ತಿರು ಗಾಡುತ್ತ ಒಮ್ಮೆ ಪಕ್ಕದ ಊರಿನ ಅರಮನೆಯ ಬಳಿ ಬಂದ. ಅವನ ಕಣ್ಣಿಗೆ ಬಿದ್ದವಳು ಶಶೀಯಸಿಯೆಂಬ ಅರಸಿ ; ತರಂತನೆಂಬ ಅರಸನ ಮಡದಿ. ಅರಸಿಯು ಶ್ಯಾವಾಶ್ವನನ್ನು ಕಂಡೊಡನೆ, ಅವನು ತಪಸ್ವಿಯೆಂಬುದನ್ನರಿತು, ಅವನ ಪಾದಗಳಿಗೆ ನಮಸ್ಕರಿಸಿ, ಅರಮನೆಗೆ ಒಯ್ದು ಉಪಚರಿಸಿದಳು. ಅರಸನೂ ಅವನಿಗೆ ಹಸುಗಳು, ಕುದುರೆ, ಹಣ ಮುಂತಾದ್ದನ್ನೆಲ್ಲ ದಾನವಾಗಿ ಕೊಟ್ಟನು.

ಶ್ಯಾವಾಶ್ವನಿಗೇನೂ ಇವೆಲ್ಲ ಬೇಕಾಗಿರಲಿಲ್ಲ ; ಈಗ ಅವನು ಏನೆಂದರೂ ತಪಸ್ವಿ. ತರಂತನು ಅಷ್ಟಕ್ಕೆ ಬಿಡದೆ ತನ್ನ ತಮ್ಮ ಪುರುಮೀಳ್ಹ ನೆಂಬುವನು ಪಕ್ಕದೊಂದು ಊರಿನ ಅರಸನೆಂದೂ ಅವನನ್ನು ಕಾಣಬೇಕೆಂದೂ ಶ್ಯಾವಾಶ್ವನನ್ನು ಬಲವಂತ ಮಾಡಿದನು. ಅವನನ್ನು ಸಂತೋಷಪಡಿಸ ಲೆಂದು ಶ್ಯಾವಾಶ್ವನು ಒಪ್ಪಿ ಪುರುಮೀಳ್ಹನ ಊರಿನತ್ತ ಹೊರಟನು. ತರಂತನ ಹೆಂಡತಿ ಶಶೀಯಸಿಯೇ ಅವನಿಗೆ ದಾರಿ ತೋರಿದಳು.

ಶ್ಯಾವಾಶ್ವನು ನಡೆದು ಹೋಗುತ್ತಿರುವಾಗ ನಡುವೆ ಒಂದು ಕಾಡು. ಕಾಡಿನಲ್ಲಿ ಸಾಗುತ್ತಿರುವಾಗ ಅವನಿಗೆ ಕಾಡೇ ಹಿತವೆನಿಸಿತು. ಹೆಣ್ಣಿನ ಹಂಬಲವಂತೂ ಇದ್ದೇ ಇದ್ದಿತು ; ಮಂತ್ರದ್ರಷ್ಟನಾಗುವ ಬದಲು ಈ ಸಿರಿವಂತಿಗೆಯ ಹಿಂದೆ ಹೋಗುವುದು ಅವನಿಗೆ ಸರಿಕಾಣಲಿಲ್ಲ. ಅವನಿಗೆ ದಿಗ್ಭ್ರಮೆಯಾಗಿ ಹುಚ್ಚನಂತೆ ಅಲೆದಾಡತೊಡಗಿದನು. ಆಗ ಅವನ

ಎದುರಿಗೆ ಒಂದೇ ರೂಪ, ಒಂದೇ ವಯಸ್ಸು ಇರುವ ನಿತ್ಯತರುಣರಾದ ಏಳುಮಂದಿ ಮರುತ್ತುಗಳು (ಮರುದ್ಗಣ)ತೋರಿಕೊಂಡುವು. ವಾಯುವಿನ ಅನುಚರರು ಮರುದ್ಗಣ. ಇವರನ್ನು ಕಂಡೊಡನೆ ಶ್ಯಾವಾಶ್ವನಿಗೆ ದಿಗಿಲಾಯಿತು ; ಭಕ್ತಿಯೂ ಭುಗಿಲೆದ್ದಿತು. ಆಗ ಮರುದ್ಗಣಗಳು ಸೇರಿ ವಾಯುವಿನ ರೂಪವನ್ನು ತಾಳಿ ಅದು ಕಂಗೊಳಿಸುತ್ತ ನಿಂತಿತು.

ಈ ದಿವ್ಯರೂಪವನ್ನು ಕಂಡೊಡನೆ ಶ್ಯಾವಾಶ್ವನ ಹೃದಯದಲ್ಲಿ ಮಂತ್ರದೇವತೆಯ ಸ್ಫುರಣವಾಯಿತು. ಇದ್ದಕ್ಕಿದ್ದಂತೆ ಇವರು ಯಾರೆಂಬ ಕುತೂಹಲವುಂಟಾಗಿ, ಒಡನೆಯೆ ಪ್ರತಿಭೆಯ ಬೆಳಕಿನಲ್ಲಿ ಇವರು ಯಾರೆಂದು ತಿಳಿದು ಮಂತ್ರಗಳು ತಾವೇ ತಾವಾಗಿ ಹೊರಹೊಮ್ಮಿ ಕೊಂಡುವು. ಈ ಮಂತ್ರಗಳಿಗೆ ಮರುತ್ತೇ (ಎಂದರೆ ವಾಯು) ದೇವತೆ. ಹತ್ತು ಸೂಕ್ತಗಳಾಗಿ ಕಾಣಿಸಿಕೊಂಡ ಈ ಮಂತ್ರಗಳು ಋಗ್ವೇದ ಸಂಹಿತೆಯ ಐದನೆಯ ಮಂಡಲದಲ್ಲಿ ಸೇರಿವೆ. ಇವಕ್ಕೆ ಶ್ಯಾವಾಶ್ವನೇ ಋಷಿ.

ಹೀಗೆ ತನಗೇ ತಿಳಿಯದಂತೆ ಶ್ಯಾವಾಶ್ವನು ಋಷಿಯಾಗಿಬಿಟ್ಟ ; ಮಂತ್ರದ್ರಷ್ಟಾರನೂ ಆದ. ಇನ್ನು ಅವನ ಮನೋರಥ ಪೂರ್ಣ ವಾದಂತೆಯೆ ಎನಿಸಿತು. ಒಡನೆಯೆ ರಾತ್ರಿದೇವತೆಯನ್ನೇ ದೂತಿಯನ್ನಾಗಿ ಮಾಡಿಕೊಂಡು ರಥವೀತಿರಾಜನ ಬಳಿಗೆ ಅಟ್ಟಿದ ; ತಾನು ಈಗ ಋಷಿ ಯಾಗಿರುವುದರಿಂದ ರಾಜಪುತ್ರಿಯ ಕೈ ಹಿಡಿಯಲಾದೀತೇ ಎಂಬ ಸಂದೇಶವನ್ನು ಕಳುಹಿಸಿದ. ಜೊತೆಗೆ ತಾನು ಕಂಡುಕೊಂಡ ಮಂತ್ರಗಳನ್ನೂ ಕಳುಹಿಸಿದ. ಹೆಣ್ಣಿನ ಹಂಬಲ ತನಗಿನ್ನೂ ಹಾಗೆಯ ಇದೆ ಎಂಬುದನ್ನು ಅರಿತೊಡನೆ ಶ್ಯಾವಾಶ್ವನನ್ನು ಮದುವೆಯಾಗಲು ರಾಜಪುತ್ರಿ ಒಪ್ಪಿದಳು. ರಥವೀತಿರಾಜನು ರಾಣಿಯೊಡಗೂಡಿ ಸಂಭ್ರಮದಿಂದ ಶ್ಯಾವಾಶ್ವನ ಬಳಿಗೆ ಬಂದು ಹಿಂದೆ ಮಾಡಿದ ನಿರಾಕರಣೆಗೆ ಮನ್ನಿಸಬೇಕೆಂದೂ, ಈಗ ಮದುವೆಗೆ ಸಿದ್ಧನಾಗಬೇಕೆಂದೂ ಬೇಡಿಕೊಂಡನು.

ಶ್ಯಾವಾಶ್ವನು ತನ್ನ ತಂದೆ ಅರ್ಚನಾನಸನ ಆಶ್ರಮಕ್ಕೆ ಹಿಂದಿರುಗಿದ ಮೇಲೆ, ಶ್ಯಾವಾಶ್ವ ಋಷಿ ಮತ್ತು ರಾಜಪುತ್ರಿಯ ವಿವಾಹವು ವೈಭವದಿಂದ ನೆರವೇರಿತು. ಶ್ಯಾವಾಶ್ವನು ಮುಂದೆ ಅತ್ರಿಶದಲ್ಲೇ ಪ್ರಸಿದ್ಧನಾದ ಋಷಿಯಾದ. ಅವನ ಹೆಸರಿನಲ್ಲಿ ಮಂತ್ರಗಳು ಋಗ್ವೇದದ ಐದನೆಯ ಮಂಡಲದಲ್ಲಿ (ಮೇಲೆ ಹೇಳಿದಂತೆ) ಮಾತ್ರವಲ್ಲದೆ, ಎಂಟನೆಯ ಮಂಡಲದಲ್ಲೂ (35, 38) ಮತ್ತು ಒಂಬತ್ತನೆಯ ಮಂಡಲದಲ್ಲೂ (37) ಇವೆ. ಈ ಮಂತ್ರಗಳು ಮನಸ್ಸಿನ ಆಳಲನ್ನೂ, ತಪಸ್ಸಿನ ಶಕ್ತಿಯನ್ನೂ, ಮರುದ್ದೇವತೆಗಳ ಸಾಮರ್ಥ್ಯವನ್ನೂ ಸೂಚಿಸುತ್ತದೆ. ಒಂದು ಮಂತ್ರದಲ್ಲಿ (5, 5, 6) ರಾಜ ತರಂತನ ಮಡದಿಯಾದ ಶಶೀಯಸಿಯು ಔದಾರ್ಯದಲ್ಲಿ, ವಿವೇಕದಲ್ಲಿ, ಪರೋಪಕಾರ ಬುದ್ಧಿಯಲ್ಲಿ ಗಂಡಸರೆಲ್ಲರಿಗಿಂತ ಹೆಚ್ಚಿನವಳು ಎಂಬ ವರ್ಣನೆಯಿದೆ.

ಇಂದ್ರ ನಮುಚಿಯನ್ನು ಕೊಂದದ್ದು

ಇಂದ್ರನು ವೃತ್ರಾಸುರನನ್ನು ಕೊಂದದ್ದು ವೇದವಾಙ್ಮಯದಲ್ಲಿ ಪ್ರಸಿದ್ಧವಾಗಿದೆ. ಋಗ್ವೇದದ ಹಲವೆಡೆ ಈ ವೃತ್ತಾಂತವು ಬರುತ್ತದೆ ; ತೈತ್ತಿರೀಯ ಸಂಹಿತೆ ಮೊದಲಾದ ಇತರ ವೈದಿಕ ಗ್ರಂಥಗಳಲ್ಲೂ ಉಲ್ಲೇಖವಿದೆ. ಇದಕ್ಕೆ ಅನುಬಂಧಿಯಾಗಿ ಇಂದ್ರನು ನಮುಚಿಯನ್ನು ಕೊಂದ ಕತೆಯೂ ಬರುತ್ತದೆ. ವೃತ್ರನ ಇನ್ನೊಂದು ರೂಪವೇ ನಮುಚಿ. ಇಂದ್ರನೊಂದಿಗೆ ಅವನು ಯುದ್ಧಮಾಡುವುದನ್ನು ಬಿಡಲಿಲ್ಲವಾದ್ದರಿಂದ ನಮುಚಿ ಮೋಡದೊಳಗಣ ನೀರನ್ನು ಹೊರಬಾರದಂತೆ ತಡೆದು ಜನಗಳಿಗೆ ತೊಂದರೆ ಮಾಡಿದ ನಮುಚಿ. ನಮುಚಿಯೆಂಬ ಮಾತಿಗೆ ಅರ್ಥ 'ಬಿಡಲಾರೆ' ಎಂದು.

ದೇವತೆಗಳ ಶಿಲ್ಪಿ ತ್ವಷ್ಟೃ ಎಂಬುವನು ; ತುಂಬ ಜಾಣ. ಮನೆಗಳನ್ನು ಕಟ್ಟುವುದು, ದಿನನಿತ್ಯದ ವ್ಯವಹಾರಕ್ಕೆ ಪರಿಕರಗಳನ್ನು ಸಿದ್ಧಮಾಡಿ ಕೊಡುವುದು, ಯುದ್ಧಕ್ಕೆ ಆಯುಧಗಳನ್ನು ತಯಾರಿಸುವುದು ಇವೆಲ್ಲ ಅವನ ಕೆಲಸ. ಅವನಿಗೊಬ್ಬ ಮಗ. ವಿಶ್ವರೂಪನೆಂದು ಅವನ ಹೆಸರು. ದೇವತೆಗಳು ಅವನನ್ನು ತಮ್ಮ ಪುರೋಹಿತನನ್ನಾಗಿ ನೇಮಿಸಿಕೊಂಡಿದ್ದರು. ಅವನ ತಾಯಿ, ಎಂದರೆ ತ್ವಷ್ಟಾರನ ಹೆಂಡತಿ, ಅಸುರ ಜನಾಂಗದ ಹೆಣ್ಣು ಮಗಳು. ಮೊದಲಿಂದ ದೇವತೆಗಳಿಗೂ ಅಸುರರಿಗೂ ಜಗಳ. ವಿಶ್ವರೂಪನು ದೇವತೆಗಳ ಪುರೋಹಿತನಾಗಿದ್ದರೂ

ಒಳಗೊಳಗೆ ಅಸುರರಿಗೇ ನೆರವಾಗುತ್ತಿದ್ದನು. ಯಜ್ಞ ಯಾಗಾದಿಗಳನ್ನು ನಡೆಸುವಾಗ ಬಾಯಿಂದ ದೇವತೆಗಳಿಗೆ ಒಳಿತಾಗಲಿ ಎಂದು ಹೇಳಿದರೂ, ಮನಸ್ಸಿನಲ್ಲಿ ಅಸುರರಿಗೇ ಜಯವಾಗಲಿ ಎಂದೆಣಿಸುತ್ತಿದ್ದನು.

ಹೀಗೆ ಅಸುರಪಕ್ಷಪಾತಿಯಾಗಿದ್ದ ವಿಶ್ವರೂಪನ ಮೋಸ ಕಡೆಗೊಮ್ಮೆ ದೇವತೆಗಳಿಗೆ ತಿಳಿದುಹೋಯಿತು ; ಅವರು ಇಂದ್ರನನ್ನು ಕಂಡು "ವಿಶ್ವರೂಪನ ಕಪಟವನ್ನು ನಾವು ಹೀಗೆಯೇ ಬಿಟ್ಟರೆ ನಮಗೆ ಸರ್ವನಾಶವಾದೀತು. ನೀನು ಹೇಗಾದರೂ ಮಾಡಿ ಅವನನ್ನು ಕೊಂದು ಬಿಡು" ಎಂದು ಹೇಳಿದರು. ಇಂದ್ರನು ವಿಶ್ವರೂಪನನ್ನೆದುರಿಸಿದನು. ವಿಶ್ವರೂಪನೇನು ಸಾಮಾನ್ಯನಲ್ಲ, ಅವನದ್ದೊಂದು ಅಸುರಸೇನೆಯೆ ಇದ್ದಿತು. ಅವರಿಬ್ಬರಲ್ಲಿ ಹೋರಾಟ ನಡೆಯಿತು. ಕಡೆಗೆ ತಕ್ಷನೆಂಬ ದೇವತೆಗಳ ಬಡಗಿ ವಿಶ್ವರೂಪನನ್ನು ಕೊಂದು ಇಂದ್ರನನ್ನು ಗೆಲ್ಲಿಸಿದ.

ತನ್ನ ಮಗನನ್ನು ಇಂದ್ರನು ಹೀಗೆ ಕೊಲ್ಲಿಸಿದುದನ್ನು ತಿಳಿದು, ತ್ವಷ್ಟ್ರುವಿಗೆ ಸಿಟ್ಟು ಬಂದಿತು. ಇಂದ್ರನನ್ನು ಕೊಲ್ಲುವಂಥ ಮಗನು ತನಗೆ ಹುಟ್ಟಬೇಕೆಂದು ಒಂದು ಯಜ್ಞದಲ್ಲಿ ತೊಡಗಿದನು. ಅವನ ಆಶಯ ಯಾರಿಗೂ ತಿಳಿದಿರಲಿಲ್ಲ. ದೇವತೆಗಳನ್ನೂ ಯಜ್ಞದಲ್ಲಿ ಪಾಲ್ಗೊಳ್ಳಲು ಬರಮಾಡಿಕೊಂಡನು. ಇಂದ್ರನನ್ನು ಮಾತ್ರ ಕರೆಯಲಿಲ್ಲ. ದೇವತೆಗಳಿಗೆಲ್ಲ ಸೋಮವನ್ನು ಕೊಟ್ಟನು. ಇದನ್ನು ತಿಳಿದು ಸೋಮಪ್ರಿಯನಾದ ಇಂದ್ರನು ಸಿಟ್ಟಿಗೆದ್ದು ಯಜ್ಞವು ನಡೆಯುತ್ತಿದ್ದಲ್ಲಿಗೆ ಬಂದು ಸೋಮವನು ಬಲಾತ್ಕಾರ ಮಾಡಿಕೊಂಡು ಹೋದನು. ತ್ವಷ್ಟ್ರುವು ಇವನಿಗೆ ತಕ್ಕದ್ದು ಮಾಡುತ್ತೇನೆಂದುಕೊಂಡು, ಉಳಿದ ಸೋಮವನ್ನೆಲ್ಲ ಯಜ್ಞಕುಂಡಕ್ಕೆ ಸುರಿದು "ಇಂದ್ರನನ್ನು ಜಯಿಸುವ, ಇಂದ್ರನಿಗೆ ಶತ್ರುವಾಗುವ ಮಗನು ಹುಟ್ಟಲಿ (ಸ್ವಾಹೇಂದ್ರಶತ್ರುರ್ವರ್ಧಸ್ವ)" ಎಂದು ಹೇಳಿಬಿಟ್ಟನು. ಆಗ ಹೇಳಿದ ಮಾತು ದಿಟವಾಗದೆ ಇರದು.

ಆದರೆ ಉದ್ವೇಗದಿಂದ ತ್ವಷ್ಟೃವು ಹೇಳುವಾಗ ಒಂದು ಸ್ವರ ತಪ್ಪಿ ಹೋಯಿತು. 'ಇಂದ್ರನನ್ನು ಜಯಿಸುವ ಮಗನಾಗಲಿ' ಎಂದು ಹೇಳುವುದಕ್ಕೆ ಬದಲು 'ಇಂದ್ರನಿಂದ ಜಯಿಸಲ್ಪಡುವ ಮಗನಾಗಲಿ' ಎಂಬರ್ಥ ಮೂಡಿಕೊಂಡಿತು.

ತ್ವಷ್ಟೃವಿಗೆ ಮಗನೊಬ್ಬ ಹುಟ್ಟಿದ. ಸೋಮ ಸುರಿದಾಗ ಅಗ್ನಿಯಿಂದ ಸರ್ಪರೂಪದಲ್ಲೆ ಹೊರಬಂದವನು. ವೃತ್ರನೆಂದು ಅವನ ಹೆಸರು. ಎಳವೆಯಿಂದಲೂ ಅವನು ಇಂದ್ರನಿಗೆ ಶತ್ರುವೇ. ಇಂದ್ರನನ್ನು ಕೊಲ್ಲುವ ಬಯಕೆಯಿಂದ ಯಜ್ಞಮಾಡಿ ಅಗ್ನಿ ಮತ್ತು ಸೋಮದೇವತೆಗಳನ್ನು ಒಲಿಸಿಕೊಂಡ ; ದಿನದಿನಕ್ಕೆ ಅವನ ಬಲ ಬೆಳೆಯುತ್ತ ಬಂದಿತು. ಒಂದು ದಿನಕ್ಕೆ ಒಂದು ಬಿಲ್ಲಿನ ಪ್ರಮಾಣದಂತೆ ಅವನ ಬೆಳವಣಿಗೆ. ಹೀಗೆ ಹಿಗ್ಗುತ್ತ ಹಿಗ್ಗುತ್ತ ಲೋಕಗಳನ್ನೆಲ್ಲ ವ್ಯಾಪಿಸಿ ಕೊಂಡುಬಿಟ್ಟ. ಎಲ್ಲವನ್ನೂ ಅವನು ತನ್ನ ದೇಹದಿಂದ ಆವರಿಸಿಕೊಂಡನಾಗಿ ವೃತ್ರನೆಂಬ ಹೆಸರು ಸಾರ್ಥಕವಾಯಿತು. ಇವನ ಅಭ್ಯುದಯವನ್ನು ನೋಡಿ ಇಂದ್ರನಿಗೆ ದಿಗಿಲಾಯಿತು.

ಪ್ರಜಾಪತಿಯ ಬಳಿಗೆ ಬಂದು ವೃತ್ರನನ್ನು ನಿಗ್ರಹಿಸುವ ಉಪಾಯವೇನೆಂದು ಇಂದ್ರನು ಕೇಳಿದನು. ಪ್ರಜಾಪತಿಯು ಅವನಿಗೆ ವಜ್ರಾಯುಧವನ್ನು ಕೊಟ್ಟು ಇದರಿಂದ ನೀನು ಅವನನ್ನು ಕೊಲ್ಲೆಂದು ಹೇಳಿದನು. ಅವನು ವೃತ್ರನ ಮೇಲೆರಗಿ ಬಂದಾಗ, ಅವನಿಗೆ ಒಲಿದಿದ್ದ ಅಗ್ನಿ ಮತ್ತು ಸೋಮ ಈ ದೇವತೆಗಳು ಇಂದ್ರನನ್ನು ತಡೆದರು. ಅವರು ವೃತ್ರನ ಶರೀರದಲ್ಲೇ ವಾಸಮಾಡಿಕೊಂಡಿದ್ದರು. ಇಂದ್ರನು ಜ್ವರದೇವತೆಯನ್ನು ಸೃಷ್ಟಿಮಾಡಿ, ವೃತ್ರನ ದೇಹವನ್ನಾಕ್ರಮಿಸುವಂತೆ ಹೇಳಿದನು.

ಜ್ವರದೇವತೆಯು ವೃತ್ರನ ದೇಹವನ್ನು ಹೊಕ್ಕೊಡನೆ ವೃತ್ರನಿಗೆ ಚಳಿ, ಜ್ವರ, ಕೆಮ್ಮು ನೆಗಡಿ ಕಾಡಲಾರಂಭಿಸಿದುವು. ಆಗ ಅಗ್ನಿಯೂ ಸೋಮನೂ ಅವನ ದೇಹದಲ್ಲಿರಲಾರದೆ ಹೊರಗೆ ಬಂದರು. ಅವರಿಬ್ಬರೂ

ಅವನ ಮೈಯನ್ನು ಬಿಡಲಾಗಿ ವೃತ್ರನ ಪ್ರಾಣ ಮತ್ತು ಅಪಾನವಾಯುಗಳೂ ಹೊರ ಬಂದುವು. ಪ್ರಾಣದ ಹೆಸರು ದಕ್ಷ (ಎಂದರೆ ಕೆಲಸ ಮಾಡುವ ಸಾಮರ್ಥ್ಯ) ; ಅಪಾನದ ಹೆಸರು ಕ್ರತು ಎಂದರೆ ಸಂಕಲ್ಪಶಕ್ತಿ). ಹೀಗೆ ವೃತ್ರನ ದೇಹಶಕ್ತಿ, ಸಂಕಲ್ಪಶಕ್ತಿ ಎರಡೂ ಅವನ ಕೈಬಿಟ್ಟವು.

ಹೀಗೆ ವೃತ್ರ ಬಲಗುಂದಿದಾಗ ಇಂದ್ರನು ಹುಣ್ಣಿಮೆಯ ದಿನದಂದು ವಜ್ರಾಯುಧದಿಂದ ವೃತ್ರಾಸುರನನ್ನು ಕೊಲ್ಲಲು ಹೊರಟನು. ವೃತ್ರನೆಂದರೆ ಎಲ್ಲೆಲ್ಲಿಯೂ ಕತ್ತಲೆಗವಿದಿರುವ ಸ್ಥಿತಿ ; ಲೋಕದಲ್ಲಿನ ಅಂಧಕಾರವನ್ನು ಸೀಳಿ ಬೆಳದಿಂಗಳು ಕಾಣಿಸಿಕೊಳ್ಳುವುದು ಇಲ್ಲಿನ ಸಂಕೇತ. ಆದರೆ ಇಂದ್ರನು ವೃತ್ರನ ಮೇಲೆರಗಿದಾಗ ಭೂಮಿ ಮತ್ತು ಅಂತರಿಕ್ಷ ಇವೆರಡೂ ದೇವತೆಗಳು (ದ್ಯಾವಾಪೃಥಿವೀ) ನಡುವೆ ಬಂದು ''ಅಯ್ಯಾ ಇಂದ್ರ, ವೃತ್ರನನ್ನು ಕೊಲ್ಲಬೇಡ. ಇವನು ಭೂಮಿಯಿಂದ ಸ್ವರ್ಗದವರೆಗೂ ಎಲ್ಲ ಪ್ರದೇಶವನ್ನೂ ವ್ಯಾಪಿಸಿಕೊಂಡಿದ್ದಾನೆ. ನಮ್ಮನ್ನಾಶ್ರಯಿಸಿರುವ ಇವನನ್ನು ಸಾಯಲು ಬಿಟ್ಟೆವೆಂಬ ಕೆಟ್ಟ ಹೆಸರು ನಮಗೆ ಬರುತ್ತದೆ'' ಎಂದರು.

ಆಗ ಇಂದ್ರನು ''ಇವನು ಲೋಕಕಂಟಕ. ಇವನು ಬದುಕಿದ್ದರೆ ನಿಮಗೂ ಒಳಿತಿಲ್ಲ. ನೀವು ಇವನನ್ನು ಬಿಟ್ಟುಕೊಡಿ. ಅದಕ್ಕೆ ಪ್ರತಿಯಾಗಿ ನಾನು ನಿಮಗೆ ವರಗಳನ್ನು ನೀಡುತ್ತೇನೆ. ಅಂತರಿಕ್ಷವು ನಕ್ಷತ್ರದಿಂದ ಚೆಂದ ಗಾಣಲಿ ; ಭೂಮಿಯು ಮನುಷ್ಯರು, ಪ್ರಾಣಿಗಳು, ನದಿಗಳು, ಬೆಟ್ಟಗಳು, ಮರಗಳು ಇವೆಲ್ಲದರಿಂದ ಶೋಭಾಯಮಾನವಾಗಿರಲಿ'' ಎಂದನು. ಆಗ ದ್ಯಾವಾಪೃಥಿವಿಗಳು ವೃತ್ರನನ್ನು ಬಿಟ್ಟುಕೊಟ್ಟರು. ಅನಂತರ ಅಗ್ನಿ, ಸೋಮ, ದ್ಯಾವಾ, ಪೃಥಿವಿ ಇವರ ಅನುಮತಿಯನ್ನು ಪಡೆದುಕೊಂಡು ವೃತ್ರಾಸುರನನ್ನು ಕೊಂದುಬಿಟ್ಟನು.

ಇದು ತೈತ್ತಿರೀಯ ಸಂಹಿತೆಯಲ್ಲಿ (2, 5, 2, 1) ಬರುವ ಒಕ್ಕಣೆ ; ಋಗ್ವೇದದ (4, 19) ಮಂತ್ರಗಳ ಹಿನ್ನೆಲೆಯಾಗಿ ಈ ಕತೆ ಬರುತ್ತದೆ. ಅಲ್ಲಿ

ವೃತ್ರನು ದುಷ್ಟಸ್ವಭಾವದವನು, ಎಷ್ಟು ಭೋಗವನ್ನನುಭವಿಸಿದರೂ ಸಾಕೆಂಬ ತಿಳಿವಳಿಕೆಯಿಲ್ಲದವನು, ಪರೋಪಕಾರವನ್ನು ಎಳ್ಳಷ್ಟೂ ಮಾಡದವನು ; ಲಂಪಟ, ಲೋಭಿ, ಮೋಡಗಳನ್ನು ಸುತ್ತುಗಟ್ಟಿ ಮಳೆಬಾರದಂತೆ ತಡೆಯುವವನು ; ನದಿಗೆ ಅಡ್ಡಲಾಗಿ ಮಲಗಿ ಅದು ಹರಿಯದಂತೆ ಮಾಡುವವನು, ನಿರುಕ್ತದಲ್ಲಿ ವೃತ್ರನೆಂದರೆ ಮಳೆಗರೆಯದ ಕರಿಯ ಮೋಡವೆಂದು ಹೇಳಲಾಗಿದೆ.

ತೈತ್ತಿರೀಯ ಬ್ರಾಹ್ಮಣ (೧, ೭, ೧, ೬) ಮತ್ತು ಶತಪಥ ಬ್ರಾಹ್ಮಣ (೧೨, ೭, ೧, ೧೦)ಗಳಲ್ಲಿ ಇಂದ್ರನು ನಮುಚಿಯನ್ನು ಕೊಂದ ಕತೆ ಬರುತ್ತದೆ. ಋಗ್ವೇದದಲ್ಲೂ ಹಲವೆಡೆ ನಮುಚಿಯ ಪ್ರಸ್ತಾಪ ಬಂದಿದೆ. ಅವನು ಅಸುರಸ್ವಭಾವದವನು, ಮಾಯಾವಿ, ವಂಚಕ, ಬಲಶಾಲಿ, ಇಂದ್ರನ ಹಗೆಯೆಂಬ ವರ್ಣನೆಯಿದೆ. ಇಂದ್ರನಿಂದ ಕೊಲ್ಲಲ್ಪಟ್ಟ ವೃತ್ರನೇ ನಮುಚಿಯಾಗಿ ಕಾಣಿಸಿಕೊಂಡನೆಂದು ಒಂದು ವಿವರಣೆ ; ವೃತ್ರನಿಗಿಂತ ಬೇರೆಯಾದ ಇನ್ನೊಬ್ಬ ಅಸುರನೆಂದು ಇನ್ನೊಂದು ಎಣಿಕೆ. ಇದು ಹೇಗಾದರಿರಲಿ. ತೈತ್ತಿರೀಯ ಬ್ರಾಹ್ಮಣದಲ್ಲಿರುವ ಕತೆ ಇದು.

ಇಂದ್ರನು ವೃತ್ರನನ್ನು ಕೊಂದಮೇಲೆ ಇತರ ಅಸುರರನ್ನೂ ಸೆಣಿಸಿ ಗೆದ್ದನು. ಆದರೆ ನಮುಚಿಯು ಮಹಾಬಲಶಾಲಿಯಾಗಿದ್ದುದರಿಂದ ಅವನನ್ನು ಗೆಲ್ಲಲಾಗಲಿಲ್ಲ. ಇಂದ್ರನು ಯಾವ ಆಯುಧವನ್ನು ಪ್ರಯೋಗಿಸಿದರೂ ನಮುಚಿಯೇನು ಮಣಿಯಲಿಲ್ಲ. ಕಡೆಗೆ ಇಂದ್ರನು ನಮುಚಿಯೊಂದಿಗೆ ಮಲ್ಲಯುದ್ಧ ಮಾಡುವುದೆಂದು ನಿಶ್ಚಯಿಸಿದನು. ಇಂದ್ರನ ಯಾವ ಪಟ್ಟಿಗೂ ನಮುಚಿಯು ಬಗ್ಗಲಿಲ್ಲ. ಬಹು ಹೊತ್ತು ಹೋರಾಡಿದರೂ ಇಂದ್ರನು ಬಳಲುತ್ತಿದ್ದಂತೆ ನಮುಚಿಯು ಬಲಗೊಳ್ಳುತ್ತಿದ್ದನು. ಕಡೆಗೊಮ್ಮೆ ನಮುಚಿಯು ಇಂದ್ರನನ್ನು ತನ್ನ ತೋಳುಗಳಲ್ಲಿ ಬಿಗಿ ಹಿಡಿದು, ಬಗ್ಗಿಸಿ,

ಉಸಿರಾಡದಂತೆ ಮಾಡಿಬಿಟ್ಟನು. ಇಂದ್ರನು ಬೇರೆ ದಾರಿ ಕಾಣದೆ ತನ್ನನ್ನು ಬಿಟ್ಟುಬಿಡುವಂತೆ ನಮುಚಿಯನ್ನು ಬೇಡಿಕೊಳ್ಳಬೇಕಾಯಿತು.

ನಮುಚಿಯು "ಬಿಟ್ಟುಬಿಡುತ್ತೇನೆ. ಆದರೊಂದು ಷರತ್ತು. ನಾನು ನಿನಗೆ ಎಷ್ಟೆಂದರೂ ಹಗೆ ; ನನ್ನನ್ನು ಕೊಲ್ಲಲು ಸಮಯ ಸಾಧಿಸುತ್ತಿರುತ್ತೀ. ನೀನು ಯಾವ ಆಯುಧವನ್ನು ಬೇಕಾದರೂ ಬಳಸು ; ಯಾವ ಉಪಾಯವನ್ನಾದರೂ ಹೂಡು. ನನಗೇನು ಭಯವಿಲ್ಲ. ಆದರೆ ನೀನು ಬಳಸುವ ಆಯುಧ ಹಸಿಯಾಗಿರಬಾರದು, ಒಣಗಿರಬಾರದು. ನನ್ನನ್ನು ನೀನು ಹಗಲಿನಲ್ಲಿ ಕೊಲ್ಲಬಾರದು, ಇರುಳಿನಲ್ಲಿ ಕೊಲ್ಲಬಾರದು. ಈ ಕರಾರಿಗೆ ಒಪ್ಪುವೆಯಾದರೆ ನಿನ್ನನ್ನು ಬಿಟ್ಟುಬಿಡುತ್ತೇನೆ" ಎಂದನು. ಹೇಗಾದರೂ ಇವನ ಹಿಡಿತದಿಂದ ತಪ್ಪಿಸಿಕೊಂಡರೆ ಸಾಕೆಂದು ಇಂದ್ರನು ಹಾಗೆಯೇ ಆಗಲೆಂದು ಒಪ್ಪಿಕೊಂಡನು. ನಮುಚಿಯು ಇಂದ್ರನನ್ನು ತನ್ನ ತೋಳುಗಳಿಂದ ಬಿಟ್ಟೊಡನೆ, ಬದುಕಿದೆನೆಂದು ಇಂದ್ರನು ಓಡಿಹೋದನು.

ಆದರೆ ಇಂದ್ರನ ದ್ವೇಷ ಇನ್ನಷ್ಟು ಹೆಚ್ಚಿತು. ಮಾಡಿಕೊಂಡ ಕರಾರನ್ನು ಮುರಿಯದೆ ಈ ಅಸುರನನ್ನು ಕೊಲ್ಲುವ ಉಪಾಯವೇನೆಂದು ಆಲೋಚಿಸುತ್ತ ಸಮುದ್ರದ ದಡದಲ್ಲೊಮ್ಮೆ ನಡೆದಾಡುತ್ತಿದ್ದಾಗ, ಸಮುದ್ರದ ಮೇಲೆ ನೊರೆಗಳಿದ್ದುದನ್ನು ಕಂಡ, ತಟ್ಟನೆ ಅವನಿಗೆ ಇದು ಹಸಿಯೂ ಅಲ್ಲ, ಒಣಗಿದುದೂ ಅಲ್ಲವೆಂಬುದು ಹೊಳೆಯಿತು. ಅದನ್ನೆ ಹೆಕ್ಕಿಕೊಂಡು ಆಯುಧವನ್ನಾಗಿ ಮಾಡಿಕೊಂಡ. ಆಗ ಮುಂಜಾನೆಯ ಮಬ್ಬು, ಅದು ಹಗಲೂ ಅಲ್ಲ, ಇರುಳೂ ಅಲ್ಲ. ಇದೇ ಸರಿಯಾದ ಕಾಲವೆಂದು ನಮುಚಿಯನ್ನೆದುರಿಸಲು ಹೊರಟ. ನಮಿ ಮತ್ತು ಸಾಯ್ಯ ಎಂಬಿಬ್ಬರು ಸ್ನೇಹಿತರೊಡಗೂಡಿ ನಮುಚಿಯ ಮೇಲೆ ಬಿದ್ದು ಸಮುದ್ರದ ನೊರೆಯ ಆಯುಧದಿಂದ ಅವನ ತಲೆಯನ್ನು ಜಜ್ಜಿಕೊಂಡನು.

ಎಷ್ಟಾದರೂ ನಮುಚಿ ಮಾಯಾವಿಯಲ್ಲವೆ ? ಅವನು ಸಾಯದೆ, ಮತ್ತೆ ಬದುಕಿ ಬಂದು, ''ಎಲಾ ವಿಶ್ವಾಸಘಾತುಕ, ಮಾತಿಗೆ ತಪ್ಪಿ ನಡೆದು ಕೊಂಡೆಯಲ್ಲವೆ ? ನಿನ್ನನ್ನು ಸದೆಬಡಿಯದೆ ಬಿಡುತ್ತೇನೆಯೆ ? ನನ್ನ ಬಲವನ್ನು ಇನ್ನೂ ನೀನು ಅರಿಯೆ !'' ಎಂದು ಇಂದ್ರನನ್ನು ಅಟ್ಟಿಸಿಕೊಂಡು ಹೋದನು. ಆಗ ಇಂದ್ರನು ಹೆದರಿ ಓಡುತ್ತ ದಾರಿಯಲ್ಲಿದ್ದ ಅಪಾಮಾರ್ಗ ಮರವೊಂದರ ಸಮಿತ್ತುಗಳನ್ನು ಆರಿಸಿಕೊಂಡು, ವೀರ್ಯವೃದ್ಧಿಗಾಗಿ ಅಲ್ಲಿಯೇ ಹೋಮವೊಂದನ್ನು ಮಾಡಿದನು. ಇದರಿಂದಾಗಿ ಬಲಗೊಂಡು ನಮುಚಿಯನ್ನು ಕೊಂದನು.

ಇಂದ್ರನೂ ನಮುಚಿಯೂ ಮೊದಲಿಗೆ ಸ್ನೇಹಿತರಾಗಿದ್ದರೆಂದು ಋಗ್ವೇದದಲ್ಲೆ ಉಲ್ಲೇಖವಿದೆ. ನಮುಚಿಯೂ ಇಂದ್ರನೂ ಪಕ್ಕಪಕ್ಕದಲ್ಲೆ ಕುಳಿತು ಸುರಾಪಾನ ಮಾಡುತ್ತಿದ್ದರಂತೆ (೧೦, ೧೩೧, ೪ ತ್ತು ೫). ಒಮ್ಮೆ ನಮುಚಿಯೊಂದಿಗೆ ಹೆಚ್ಚಾಗಿ ಸುರೆಯನ್ನು ಕುಡಿದಿದ್ದರಿಂದ ಇಂದ್ರನ ಮೈಕೆಟ್ಟಿತಂತೆ. ಆಗ ಸರಸ್ವತಿಯು ಗುಣಪಡಿಸಿದಳಂತೆ. ಅದು ಯಾವ ಕಾರಣದಿಂದಲೋ ಇಬ್ಬರೂ ಹಗೆಗಳಾಗಿ ಬಿಟ್ಟರು. ಇಂದ್ರನ ಜೊತೆ ಕಾದಾಡುವುದನ್ನು ಬಿಡಲಿಲ್ಲ ಎಂಬುದೆ 'ನಮುಚಿ' ಎಂಬ ಮಾತಿನ ಅರ್ಥವೆಂದೂ ಹೇಳುತ್ತಾರೆ. ನಿಷೇದಾರ್ಥವಿಲ್ಲವೆಂದೂ, 'ನಮಿ' ಎಂಬ ಮಾತಿನ ಮಾರ್ಪಾಟೆಂದೂ ಇನ್ನೊಂದು ವಿವರಣೆಯಿದೆ.

ನಮುಚಿಗೂ ಸುರಾಪಾನಕ್ಕೂ ನಂಟು. ಸೋಮಯಾಗದಲ್ಲಿ ಸೋಮರಸ ಹೇಗೋ, ಸೌತ್ರಾಮಣಿಯೆಂಬ ಯಾಗದಲ್ಲಿ ಸುರೆ ಹಾಗೆ. ನಮುಚಿಗೂ ಸೀಸಕ್ಕೂ ಸಂಬಂಧವಿರುವುದೂ ಇದೆ ; ಕೆಲವು ಕ್ರಿಯೆಗಳಲ್ಲಿ ಸೀಸದ ಗುಂಡನ್ನೆ ನಮುಚಿಯೆಂದು ನಿರ್ದೇಶಿಸುವ ವಾಡಿಕೆಯಿದೆ. ಪಟ್ಟಾಭಿಷೇಕವಾಗುವಾಗ ರಾಜನು ಕೃಷ್ಣಾಜಿನದ ಮೇಲೆ ಇರಿಸಿರುವ ಸೀಸದ ಗುಂಡೊಂದನ್ನು ಕಾಲಿನಿಂದ ಒದೆಯುವ ಸಂಪ್ರದಾಯವಿದ್ದಿತು.

ಪಟ್ಟಾಭಿಷಿಕ್ತನಾದ ರಾಜನು ಇಂದ್ರನ ಪ್ರತಿನಿಧಿಯೆಂದು ಕಲ್ಪನೆ ; ಇಂದ್ರನು ದೇವತೆಗಳ ರಾಜನಲ್ಲವೆ ? ಆವನ ಪ್ರತಿನಿಧಿಯಾಗಿ ಮನುಷ್ಯ ರಾಜನೂ ನಮುಚಿಯನ್ನು ನಿಗ್ರಹಿಸಬೇಡವೆ ?

ಅನ್ನದೇವರ ಹಿರಿಮೆ

ವೇದಕಾಲದಲ್ಲಿ ಚಕ್ರನೆಂಬೊಬ್ಬ ಋಷಿ. ಅವನ ಮಗ ಉಷಸ್ತ. ಚಕ್ರನ ಮಗನಾದುದರಿಂದ ಚಾಕ್ರಾಯಣ. ಯಾಜ್ಞವಲ್ಕ್ಯನಿಗೂ ಉಷಸ್ತ ಚಾಕ್ರಾಯಣನಿಗೂ ನಡುವೆ ನಡೆದ ಮಾತುಕತೆ ಶುಕ್ಲಯಜುರ್ವೇದಕ್ಕೆ ಸೇರಿದ ಬೃಹದಾರಣ್ಯಕೋಪನಿಷತ್ತಿನಲ್ಲಿ (ಮೂರನೆಯ ಅಧ್ಯಾಯ ನಾಲ್ಕನೆಯ ಬ್ರಾಹ್ಮಣ) ಬಂದಿದೆ. ಉಷಸ್ತ ಚಾಕ್ರಾಯಣನನ್ನು ಕುರಿತಂತೆ ಹಿನ್ನೆಲೆಯ ವಿವರಗಳು ಬ್ರಾಹ್ಮಣ ಗ್ರಂಥಗಳಲ್ಲಿ ದೊರೆಯುತ್ತವೆ.

ಆ ಕಾಲದಲ್ಲಿ ಋಷಿಗಳು ಬಹುಮಟ್ಟಿಗೆ ಇರುತ್ತಿದ್ದುದು ಕುರುಕ್ಷೇತ್ರ ವೆಂಬ ಪ್ರದೇಶದಲ್ಲಿ. ಈಗಿನ ಪಂಜಾಬು ಗಡಿಯಾದ ಸಿರ್ಹಿಂದ್‌ನಿಂದ ವಿದೇಹದವರೆಗೆ ಹರಡಿಕೊಂಡಿದ್ದುದು ಕುರುಕ್ಷೇತ್ರ. ಈ ಪ್ರದೇಶದಲ್ಲಿ ಮುಖ್ಯ ವಾಗಿ ಕಾಶಿ, ಪಾಂಚಾಲ, ವಿದೇಹಗಳು ಋಷಿಗಳಿಗೆ ಅನುಕೂಲವಾದ ತಾಣಗಳೆನಿಸಿದ್ದುವು. ಕುರು-ಪಂಚಾಲವೆಂಬುದೂ ಈ ಕ್ಷೇತ್ರದಲ್ಲಿಯೆ ಇದ್ದಿತು. ಅಲ್ಲಿನ ಸಣ್ಣದೊಂದು ಜಾನಪದ ಗ್ರಾಮದಲ್ಲಿದ್ದವನು ಚಕ್ರಋಷಿ.

ಚಕ್ರನ ಮಗನಾದ ಉಷಸ್ತನಿಗೆ ಮೊದಲಿನಿಂದ ವಿದ್ಯೆಯ ಕಡೆ ಒಲವು. ಹಲವು ಗುರುಗಳನ್ನಾಶ್ರಯಿಸಿ ಬಹುಶ್ರುತನಾದ. ಅವನ ತಂದೆ ಚಕ್ರನು ಮಂತ್ರದ್ರಷ್ಟಾರನಾದ ಋಷಿಯ ಬಳಿ ಶಿಷ್ಯವೃತ್ತಿ ಮಾಡಿ ಬೆಳಕನ್ನು ಕಂಡುಕೊಂಡವನು. ಉಷಸ್ತನು ತಂದೆಯಲ್ಲಿಯೇ ಅಧ್ಯಾತ್ಮವಿದ್ಯೆಯನ್ನೂ

ಕಲಿತನು. ಕುರುಕ್ಷೇತ್ರದಲ್ಲೆ ಉಷಸ್ತನಿಗೆ ಸಮನಾದ ಮೇಧಾವಿಯಿಲ್ಲ, ಪಂಡಿತನಿಲ್ಲ ಎಂಬುದು ಸಿದ್ಧವಾಯಿತು.

ಆದರೆ ಉಷಸ್ತನು ಬೇರೆ ಯಾರಿಗಾಗಲಿ ಶಿಷ್ಯರಿಗೆ ಪಾಠ ಹೇಳಿಕೊಡುವ ಮನಸ್ಸು ಮಾಡಲಿಲ್ಲ. ಅಲ್ಲಿಂದಿಲ್ಲಿಗೆ ಅಲೆದಾಡುತ್ತ, ವಿದ್ವತ್ಸಭೆಗಳಲ್ಲಿ ಪಾಲ್ಗೊಳ್ಳುತ್ತ, ವಾದವಿವಾದಗಳನ್ನು ಬೆಳೆಸುತ್ತ ಕಾಲ ಕಳೆಯುತ್ತಿದ್ದನು. ಅವನ ಪಾಂಡಿತ್ಯ, ವಾಗ್ಮಿತೆಗಳು ಪ್ರದೇಶದಲ್ಲೆಲ್ಲ ಮನೆ ಮಾತಾದುವು. ಕಡೆಗೆ ಅವನಿಗೆ ಈ ಅಲೆದಾಟ ಸಾಕಾಗಿ ತನ್ನ ಊರಿನಲ್ಲೇ ತನ್ನ ಹೆಂಡತಿಯೊಂದಿಗೆ ನೆಮ್ಮದಿಯಿಂದ ಇರತೊಡಗಿದ. ಅವನಾಯಿತು, ಅವನ ಅಧ್ಯಯನವಾಯಿತು. ಕರೆದೆಡೆ ಹೋಗಿ ಪುರೋಹಿತನಾಗಿ ಕೆಲಸ ನಿರ್ವಹಿಸಿ ಬರುತ್ತಿದ್ದ ಅಷ್ಟೆ

ಅವನ ವ್ಯಕ್ತಿತ್ವದ ಮುಖ್ಯವಾದ ಅಂಶ ಅವನ ಸ್ವಾಭಿಮಾನ. ಜಂಭವೆನ್ನಲಾಗದಿದ್ದರೂ ಕೊಂಚಮಟ್ಟಿಗೆ ಗರ್ವವಿದ್ದಿತು. ತನ್ನ ವಿದ್ವತ್ತು, ತನ್ನ ಪ್ರವಚನಪಟುತ್ವ, ತನ್ನ ಪರಿಶುದ್ಧ ಜೀವನ ಇವುಗಳ ಬಗ್ಗೆ ಹೆಮ್ಮೆಯಿದ್ದಿತು. ಮೇಲಾಗಿ, ತನ್ನ ದುಡಿಮೆಯಿಂದಲೇ ತನ್ನ ಬದುಕನ್ನು ನೂಕಬೇಕೆಂಬ ಹಟ; ಯಾರಿಂದಲೂ ಏನನ್ನೂ ದಾನವಾಗಿ ಪಡೆಯಬಾರದೆಂಬುದು ಅವನ ವ್ರತ - ಬೇರೆಯವರನ್ನು ಎಂದೂ ಏತಕ್ಕಾಗಲಿ ಕಾಡುವವನಲ್ಲ ಅವನು. ಬಡವನೇ ಆದರೂ ಬಲ್ಲಿದನಲ್ಲವೆ ?

ಹೀಗಿರುವಾಗ ಒಮ್ಮೆ ಇದ್ದಕ್ಕಿದ್ದಂತೆ ಭೀಕರವಾದ ಬರಗಾಲ ಕುರುಪಂಚಾಲವನ್ನಾವರಿಸಿಬಿಟ್ಟಿತು. ಕೆಲವು ವರ್ಷಗಳು ಮಳೆಯೇ ಬಾರದೆ, ಚಳಿಗಾಲದ ಕೊರೆತದಿಂದ ಬೇಸಗೆಯ ಬೇಗೆಯಿಂದ ನೆಲ ಬರಡಾಯಿತು ; ಬೆಳೆಗೆ ದಾರಿಯಿಲ್ಲದೆ ಕಳೆಯ ಹೆಚ್ಚಿತು. ಜನರಲ್ಲಿ ಹಾಹಾಕಾರ ಮೊದಲಿಟ್ಟಿತು. ಬಡವರು, ಭಾಗ್ಯವಂತರೆಂಬ ಭೇದವೇ ಇಲ್ಲದಂತೆ ಎಲ್ಲರೂ ಹಸಿವಿನಿಂದ ಕಂಗಾಲಾದರು. ದನಕರು, ಕುರಿಮೇಕೆ

ಎಷ್ಟೋ ಕುದುರೆ ಮೇವಿಲ್ಲದೆ ನಿತ್ರಾಣವಾದುವು ; ಎಷ್ಟೋ ಪ್ರಾಣಿಗಳು ಕೊನೆಯುಸಿರೆಳೆದವು. ಹಕ್ಕಿಗಳು ಹಾರಾಡಲಾರದೆ ಹೋದವು. ಮಕ್ಕಳು ಮೂಲೆಗೊರಗಿ ಸೊರಗಿದವು. ಯಾರೇನು ಮಾಡಲೂ ಅರಿಯರು !

ಉಷಸ್ತನು ಸ್ವಾಭಿಮಾನವಿರುವವರೆಗೂ ಹಸಿದೇ ಇದ್ದನು ; ಅವನ ಹೆಂಡತಿಯೂ ಉಪವಾಸದಲ್ಲೇ ಸೊರಗಿದಳು. ಹೊಟ್ಟೆಗಿಷ್ಟು ಹಾಕದೆ ಬುದ್ಧಿ ಓಡುವುದು ಹೇಗೆ ? ಮೊದಲು ಹಸಿವನ್ನು ಹಿಂಗಿಸಿಕೊಂಡ ಮೇಲೆ ತಾನೆ ವಿದ್ಯೆಯ ಕಡೆ ಒಲವು ? ಪ್ರಾಣವುಳಿಯುವುದೇ ಕಷ್ಟವೆನಿಸಿದಾಗ ಪಾಂಡಿತ್ಯದ ಬೆಲೆಯೇನು ? ಅನ್ನವೇ ಬ್ರಹ್ಮವೆಂಬುದು ಈಗ ಉಷಸ್ತನಿಗೆ ಮನವರಿಕೆಯಾಯಿತು. ತನ್ನ ಸ್ವಾಭಿಮಾನವನ್ನು ಬದಿಗೊತ್ತಿ ಭಿಕ್ಷೆ ಬೇಡಿಯಾದರೂ ಹೊಟ್ಟೆ ಹೊರೆದುಕೊಳ್ಳುವ ನಿರ್ಧಾರಕ್ಕೆ ಬಂದನು. ತನ್ನ ಅಕ್ಕರೆಯ ಹೆಂಡತಿಯೂ ಹೊಟ್ಟೆಗಿಲ್ಲದೆ ಸೊರಗುವುದನ್ನು ಕಂಡು ಅವನ ಕರುಳೇ ಕಿತ್ತುಬಂದಿತು !

ಗಂಡ ಹೆಂಡರಿಬ್ಬರೂ ಭಿಕ್ಷೆಬೇಡಲು ಹೊರಟರು. ಒಂದೇ ದಾರಿ ಹಿಡಿದರೆ ಸಿಗುವುದು ಕಡಿಮೆಯಾದೀತೆಂದು ಬಗೆದು, ಬೇರೆ ಬೇರೆ ದಾರಿಗಳಲ್ಲಿ ಭಿಕ್ಷೆ ಬೇಡುತ್ತ ಹೋಗುವುದೆಂದು ಮಾತನಾಡಿಕೊಂಡರು. ಯಾವ ದಾರಿಯನ್ನು ಯಾರು ಹಿಡಿದರೇನು, ದಾನ ನೀಡಲು ಮುಂದೆ ಬರುವವರು ಯಾರು ? ಎಲ್ಲರ ಮನೆಯಲ್ಲೂ ಕೂಳಿನದೆ ಚಿಂತೆ ; ತಮಗೇ ತಿನ್ನಲು ಸಾಲದು ; ಬೇಡಿ ಬರುವವರನ್ನು ಆದರಿಸುವವರು ಯಾರು ? ಯಾರಿಗೆ ಯಾರು ಏನನ್ನು ತಾನೆ ಕೊಟ್ಟಾರು ? ಬರಗಾಲದಲ್ಲಿ ಎಲ್ಲರೂ ಒಂದೇ, ಎಲ್ಲರ ಮನಸ್ಸೂ ಕಲ್ಲೆ ! ಉಷಸ್ತನು ಹೀಗೆ ಮನೆಯಿಂದ ಮನೆಗೆ ಅಲೆದನಾದರೂ ಬರಿಗೈಯಲ್ಲೇ ಹಿಂದಿರುಗಬೇಕಾಯಿತು. ಹೆಂಡತಿಯ ಪಾಡೂ ಅದೇ.

ಅಷ್ಟರಲ್ಲಿ ಉಷಸ್ತನಿಗೆ ಆ ಜಾನಪದದ ಗ್ರಾಮಣಿಯ (ಎಂದರೆ ಹೆಗ್ಗಡೆಯ) ನೆನಪಾಯಿತು. ಅವನು ತುಂಬ ಭಾಗ್ಯವಂತನಾಗಿದ್ದನು ; ತುಂಬ ಉದಾರಿಯೂ ಹೌದು. ಉಷಸ್ತನಿಗೆ ಅವನ ಪರಿಚಯ ಚೆನ್ನಾಗಿಯೆ ಇದ್ದಿತು ; ಉಷಸ್ತನನ್ನು ಕಂಡರೆ ಆ ಗ್ರಾಮಣಿಗೆ ಎಲ್ಲಿಲ್ಲದ ಆದರ. ಉಷಸ್ತನು ಅವನ ಮನೆಯ ಕಡೆ ಆಸೆಯಿಂದಲೇ ನಡೆದನು. ತನ್ನ, ತನ್ನ ಹೆಂಡತಿಯ ಹಸಿವು ತೀರುವ ಭರವಸೆ ಅವನ ಮನಸ್ಸಿನಲ್ಲಿ ಮೂಡಿತು. ಉಷಸ್ತನು ಗ್ರಾಮದ ಧಣಿಯ ಮನೆಯನ್ನು ಮುಟ್ಟಿದಾಗ, ಮನೆಯ ಜಗುಲಿಯ ಮೇಲೇ ಸೊರಗಿದ ಮೋರೆಯಿಂದ ಗ್ರಾಮಣಿ ಕುಳಿತಿದ್ದುದನ್ನು ಕಂಡನು.

ಉಷಸ್ತನನ್ನು ಕಂಡೊಡನೆ ಗ್ರಾಮಣಿಯು ದಿಗ್ಗನೆದ್ದು, ಆದರದಿಂದ ಬರಮಾಡಿಕೊಂಡು ಪಕ್ಕದಲ್ಲೆ ಕುಳ್ಳಿರಿಸಿಕೊಂಡು ಬಂದ ಕಾರಣವೇನೆಂದು ಕೇಳಿದನು. ಉಷಸ್ತನು ''ಅಯ್ಯಾ, ಹಸಿವಿನಿಂದ ಪ್ರಾಣ ಹೋಗುತ್ತಿದೆ ; ಕಾಲು ನಡುಗುತ್ತಿದೆ, ಕಣ್ಣು ಮಂಜಾಗುತ್ತಿದೆ. ಒಂದಿಷ್ಟು ತಿನ್ನಲು ಏನನ್ನಾದರೂ ಕೊಡುವೆಯೆಂದುಕೊಂಡು ಬಂದಿದ್ದೇನೆ'' ಎಂದು ಹೇಳಲು, ಗ್ರಾಮಣಿಯ ಕಣ್ಣುಗಳಿಂದ ನೀರು ಧಾರೆಯಾಗಿ ಹರಿಯತೊಡಗಿತು. ''ಸ್ವಾಮಿ ತಮ್ಮನ್ನು ಸತ್ಕರಿಸುವ ಭಾಗ್ಯ ಈ ಹೊತ್ತು ನನಗಿಲ್ಲವಾಗಿದೆ. ಬರಗಾಲದ ಬಡಿತಕ್ಕೆ ಸಿಕ್ಕು ತತ್ತರಿಸುತ್ತಿದ್ದೇನೆ. ನನಗೂ ಮನೆಮಂದಿಗೂ ನಾಲ್ಕಾರು ದಿನಗಳಿಂದ ಉಪವಾಸವೇ ಆಗಿದೆ. ಇಂದೇ ಮುಂಜಾನೆ, ನನ್ನ ಹೊಲಕ್ಕೆ ಹೋಗಿ, ತಡಕಾಡಿ ಮೂರು ಬೊಗಸೆ ಹುರುಳಿಯನ್ನು ಹೆಕ್ಕಿಕೊಂಡು ಬಂದೆ. ನನ್ನ ಪಾಲಿಗೆ ಬಂದ ಈ ಒಂದು ಹಿಡಿ ಹುರುಳಿಯನ್ನು ತಿನ್ನುತ್ತ ಕುಳಿತಿದ್ದೇನೆ. ಇದರಲ್ಲೇ ಒಂದು ಪಾಲು ತಮಗೆ ಸಲ್ಲಿಸುತ್ತೇನೆ. ಇದಕ್ಕಿಂತ ಹೆಚ್ಚಾಗಿ ಕೊಡಲು ನನ್ನಲ್ಲಿ ಏನೂ ಇಲ್ಲವಾಗಿದೆಯಲ್ಲ, ನಾನೇನು ಮಾಡಲಿ ?'' ಎಂದು ಅರಿಕೆ ಮಾಡಿಕೊಂಡನು.

ಉಷಸ್ತನು "ಹೊಟ್ಟೆ ಹಸಿದು ತಳಮಳಗೊಂಡಿದೆ. ನಾಲ್ಕಾರು ಹುರುಳಿಯ ಕಾಳುಗಳೇ ಆಗಲಿ, ದಯಮಾಡಿ ನೀಡುವೆಯಾದರೆ, ಅಷ್ಟನ್ನೇ ಹೊಟ್ಟೆಗೆ ಹಾಕಿಕೊಳ್ಳುತ್ತೇನೆ ?" ಎಂದನು.

ಹಸಿದುಬಂದ ಸಾಧುವಿಗೆ ಇಷ್ಟಾದರೂ ನೀಡುವುದಾಯಿತಲ್ಲ ಎಂದು ಗ್ರಾಮಣಿಗೆ ಸಂತೋಷವೇ ಆಯಿತು. ಹಿಂದೆಮುಂದೆ ನೋಡದೆ ತನ್ನ ಹಿಡಿಯಲ್ಲಿದ್ದುದರ ಮುಕ್ಕಾಲು ಭಾಗವನ್ನು ಉಷಸ್ತನಿಗೆ ಕೊಟ್ಟುಬಿಟ್ಟನು. ಉಷಸ್ತನು ತನ್ನ ಕೈಗೆ ಕಾಳುಗಲು ಬಿದ್ದೊಡನೆ, ಕೆಲವನ್ನು ಬಾಯಿಗೆ ಹಾಕಿಕೊಂಡನು. ಒಡನೆಯೇ ಅವನಿಗೆ ತನ್ನ ಹೆಂಡತಿಯ ನೆನಪಾಯಿತು ; ತನ್ನಂತೆ ಅವಳೂ ಹಸಿವಿನಿಂದ ಬಳಲಿದ್ದಾಳಲ್ಲವೆ ? ಈ ಕಾಳುಗಳಲ್ಲಿ ಕೆಲವನ್ನು ಅವಳಿಗೆ ಕೊಡಬೇಕೆಂದೆಣಿಸಿ, ಎದ್ದು ಮನೆಯ ಕಡೆ ನಡೆದನು.

ಮನೆಯಲ್ಲಾಗಲೆ ಆಕೆ ಬಂದು ಕುಳಿತಿದ್ದಳು. ಉಷಸ್ತನು ತಾನು ತಂದ ಹುರುಳಿಯ ಕಾಳುಗಳಲ್ಲಿ ಅರ್ಧಭಾಗವನ್ನು ಅವಳಿಗೆ ಕೊಟ್ಟನು. ಅವಳು ಆ ಕಾಳುಗಳನ್ನು ತೀರ ಅಗತ್ಯ ಬಿದ್ದಾಗ ತಿನ್ನೋಣ' ಎಂದುಕೊಂಡು ಪಕ್ಕದಲ್ಲಿ ಇರಿಸಿಕೊಂಡಳು. ಅವಳಿಗಾಗಲಿ ಅಂದು ತಿನ್ನಲು ಏನೂ ದೊರೆತಿರಲಿಲ್ಲವಾದರೂ, ಹಸಿವೆ ಮುಚ್ಚಿ ಹೋಗಿತ್ತು. ಸ್ವಲ್ಪ ನೀರನ್ನು ಕುಡಿದು ಹೊಟ್ಟೆ ತುಂಬಿಸಿಕೊಂಡಿದ್ದಳು. ಹುರುಳಿಕಾಳುಗಳನ್ನು ಆಗಲೆ ತಿನ್ನಬೇಕೆಂಬ ಅಗತ್ಯ ಅವಳಿಗೆ ಕಾಣಲಿಲ್ಲ.

ಅಂದು ರಾತ್ರಿ ಗಂಡ-ಹೆಂಡತಿಯರು ಮಾತನಾಡುತ್ತ ಕುಳಿತಿದ್ದಾಗ, ಹೆಂಡತಿಯು ನೆರೆಯೂರಿನಲ್ಲಿ ಅರಸನು ಯಜ್ಞಮಾಡುತ್ತಿರುವ ಸುದ್ದಿಯನ್ನು ತಿಳಿಸಿದಳು. ನೆರೆಯೂರಾದ ವಿದೇಹದಲ್ಲಿ ಬರಗಾಲವಿರಲಿಲ್ಲ ; ಜನರ ಜೀವನ ಎಂದಿನಂತೆಯೆ ಇದ್ದಿತು. ಅರಸನು ಅದ್ದೂರಿಯಿಂದ ಯಜ್ಞ ಮಾಡುವ ಹವಣಿಕೆಯಲ್ಲಿರುವುದನ್ನು ಕೇಳಿ ಉಷಸ್ತನಿಗೆ ಅಚ್ಚರಿಯೇ ನಾಗಲಿಲ್ಲ. ಆದರೆ ಆ ಅರಸನು ಯಜ್ಞಕ್ಕೆ ತನ್ನನ್ನು ಕರೆದಿಲ್ಲ

ಅನಾಹೂತನಾಗಿ ಅಲ್ಲಿಗೆ ಹೇಗೆ ಹೋಗುವುದು ? ಹೋದರೇನೋ ತನಗೆ ಸಂಭಾವನೆ ಸಿಗುತ್ತದೆ ; ಹೊಟ್ಟೆ ತುಂಬುತ್ತದೆ. ಸ್ವಾಭಿಮಾನದಿಂದ ಸಾಯುವುದಕ್ಕಿಂತ ಅಭಿಮಾನಗೆಟ್ಟು ಅಲ್ಲಿಗೆ ಹೋಗುವದು ಲೇಸೆಂದು ಬಗೆದು, ಹೋಗುವ ನಿರ್ಧಾರ ಮಾಡಿದನು. ಹೆಂಡತಿಯೂ ಒಪ್ಪಿದಳು.

ಮುಂಜಾನೆ ಎದ್ದು ಸ್ನಾನವನ್ನು ಮಾಡಿ, ನಿತ್ಯಕರ್ಮವನ್ನು ಮುಗಿಸಿ ವಿದೇಹದ ಯಜ್ಞಶಾಲೆಗೆ ಹೊರಟುನಿಂತನು. ಆಗ ಅವನ ಹೆಂಡತಿಯು ನೆನ್ನೆ ತನಗಾಗಿ ಅವನೇ ತಂದು ಕೊಟ್ಟಿದ್ದ ಹುರುಳಿಕಾಳುಗಳನ್ನು ಅವನ ಮುಂದೆ ಹಿಡಿದಳು. ''ಏನು, ನೆನ್ನೆ ನೀನು ತಿನ್ನಲಿಲ್ಲವೆ ? ಈಗಲಾದರೂ ತಿನ್ನು'' ಎಂದು ಉಷಸ್ತ ಹೇಳಲು, ಆಕೆ ''ನೀವಿನ್ನೂ ವಿದೇಹದವರೆಗೆ ನಡೆದುಕೊಂಡು ಹೋಗಬೇಕು ; ಮೈಯಲ್ಲಿ ತ್ರಾಣವಿರಬೇಡವೆ ? ನಾನೇನು ಮಾಡುತ್ತೇನೆ ? ಸುಮ್ಮನೆ ಕುಳಿತಿರುತ್ತೇನೆ. ನನ್ನ ಅಗತ್ಯಕ್ಕಿಂತ ನಿಮ್ಮ ಅಗತ್ಯ ಹೆಚ್ಚಿನದು '' ಎಂದು ಸಮಾಧಾನ ಹೇಳಿದಳು. ಉಷಸ್ತನು ಮರುಮಾತಾಡದೆ ಹುರುಳಿಕಾಳುಗಳನ್ನು ತಿಂದು ವಿದೇಹದತ್ತ ಕಾಲು ಬೆಳೆಸಿದನು.

ವಿದೇಹಕ್ಕೆ ಅವನು ಬರುವಷ್ಟರಲ್ಲಿ ಯಜ್ಞ ಆರಂಭವಾಗಿದ್ದಿತು. ಋತ್ವಿಜರು ಗಟ್ಟಿಯಾಗಿ ಮಂತ್ರಗಳನ್ನು ಹೇಳುತ್ತ ಅಗ್ನಿಗೆ ಆಹುತಿಯನ್ನು ನೀಡುತ್ತಿದ್ದರು. ಉಷಸ್ತನು ಅಲ್ಲಿಗೆ ಬಂದೊಡನೆ ''ಸ್ವಲ್ಪ ತಡೆಯಿರಿ. ನೀವು ಮಂತ್ರಗಳನ್ನು ಹೇಳುತ್ತಿದ್ದೀರಲ್ಲ, ಆ ಮಂತ್ರಗಳ ದೇವತೆ ಯಾರೆಂದು ನಿಮಗೆ ತಿಳಿದಿದೆಯೆ ?'' ಎಂದು ಕೇಳಿದನು. ಋತ್ವಿಜರು ಕಕ್ಕಾಬಿಕ್ಕಿ ಯಾದರು ; ಮಂತ್ರಗಳನ್ನು ಪಠಿಸುವುದಷ್ಟೆ ಅವರಿಗೆ ತಿಳಿದಿದ್ದಿತು ; ಮಂತ್ರ ದೇವತೆಯನ್ನು ಕುರಿತಂತೆ ಅವರು ತಲೆಕೆಡಿಸಿಕೊಂಡಿರಲಿಲ್ಲ. ''ನಮಗೆ ತಿಳಿಯದು'' ಎಂದು ಅವಗುತ್ತರವಿತ್ತಾಗ, ''ಮಂತ್ರದೇವತೆಯನ್ನೇ ತಿಳಿಯದೆ ಪಠಿಸಿದ ಮಂತ್ರವಾಗಲಿ, ನೀಡಿದ ಆಹುತಿಯಾಗಲಿ ನಿಷ್ಪ್ರಯೋಜಕವಾಗು

ತ್ತದೆ. ಹಾಗೆ ಮಾಡಿದ ಯಜ್ಞ ಯಾವ ರೀತಿಯಿಂದಲೂ ಸಂಪನ್ನವಾಗು ವುದಿಲ್ಲ. ಯಜಮಾನನ ಶ್ರಮವೆಲ್ಲ ವ್ಯರ್ಥವಾಗುತ್ತದೆ'' ಎಂದು ಉಷಸ್ತನು ಹೇಳಿದನು.

ಆಗ ಋತ್ವಿಜರೂ ಅರಸನೂ ಉಷಸ್ತನನ್ನು ಮರ್ಯಾದೆಯಿಂದ ಬರಮಾಡಿಕೊಂಡು ಆದರಿಂದ ಉಪಚರಿಸಿ ಮಂತ್ರದೇವತೆಯ ವಿಚಾರ ತಿಳಿಸಿಕೊಡಬೇಕೆಂದು ಬಿನ್ನವಿಸಿಕೊಂಡರು. ಉಷಸ್ತನು ''ಮೊದಲನೆಯ ಮಂತ್ರದೇವತೆ ಪ್ರಾಣ ; ಇದು ಅಧ್ಯಾತ್ಮ. ಎರಡನೆಯ ಮಂತ್ರದೇವತೆ ಸೂರ್ಯ ; ಇದು ಅಧಿದೈವ. ಮೂರನೆಯದು ಅನ್ನ; ಇದು ಅಧಿಭೂತ. ಅನ್ನದಿಂದಲೇ ಪ್ರಾಣ ; ಪ್ರಾಣದಿಂದಲೇ ಸೂರ್ಯ. ಅಧಿಭೂತವಾದುದೇ ಅಡಿಗಲ್ಲು, ಅದರ ಮೇಲೆ ನಿಲ್ಲುವುದು ಅಧ್ಯಾತ್ಮದ ಹಂದರ ; ಅದರ ಮೇಲೆ ಏಳುವುದು ಅಧಿದೈವದ ಉಪ್ಪರಿಗೆ. ಅನ್ನದಿಂದ ಪ್ರಾಣವನ್ನು ಉಳಿಸಿ ಕೊಳ್ಳುವುದೇ ಮನುಷ್ಯನ ಮೊದಲ ಧರ್ಮ'' ಎಂದು ಮೊದಲಾಗಿ ತಿಳಿಯ ಹೇಳಿದನು. ಇದು ಅವನ ಅನುಭವದಿಂದಲೇ ಸಿದ್ಧವಾದ ಜ್ಞಾನಭಾಗವಾಗಿದ್ದಿತು.

ಯಜಮಾನನಾದ ಅರಸನು ಯಜ್ಞದಲ್ಲಿ ಉಷಸ್ತನಿಗೇ ಪ್ರಧಾನ ಪುರೋಹಿತನ ಪಟ್ಟಕಟ್ಟಿ, ಧಾರಾಳವಾಗಿ ಸನ್ಮಾನ ಮಾಡಿದನು ; ಹೊಟ್ಟೆ ತುಂಬ ಆಹಾರವನ್ನು ನೀಡಿದನು. ತನ್ನೂರಾದ ಕುರುಪಂಚಾಲದಲ್ಲಿ ಜನರು ಬರಗಾಲದಿಂದ ಕಂಗಾಲಾಗಿರುವುದನ್ನು ಉಷಸ್ತನು ಅರಸನಿಗೆ ತಿಳಿಸಿ ದೊಡನೆ, ಅಲ್ಲಿಗೆ ಅರಸನು ಬಂಡಿಗಳಲ್ಲಿ ಆಹಾರವನ್ನು ಕಳುಹಿಸಿಕೊಟ್ಟನು. ಉಷಸ್ತನನ್ನೂ ಅವನ ಹೆಂಡತಿಯನ್ನೂ ವಿದೇಹಕ್ಕೇ ಕರೆಯಿಸಿಕೊಂಡು ಅವರ ಸುಖಜೀವನಕ್ಕೆ ಅಣಿಮಾಡಿಕೊಟ್ಟನು.

ಮಂತ್ರದ ಮಹಿಮೆ

ಗಾಧಿವಂಶದ ಅರಸನಾದ ವಿಶ್ವರಥನು ಕ್ಷತ್ರಿಯನಾದರೂ, ತಪಸ್ಸಿಗೆ ಒಲಿದು ಋಷಿಯಾಗಿ ಬಿಟ್ಟಿದ್ದನು. ಮುಂದೆ ಅವನು ವಿಶ್ವಾಮಿತ್ರನೆಂದೇ ಪ್ರಸಿದ್ಧನಾದನು. ಹಲವು ವೇದಮಂತ್ರಗಳಿಗೆ ಇವನೇ ದ್ರಷ್ಟಾರ ; ಸುಪ್ರಸಿದ್ಧವಾದ ಗಾಯತ್ರೀ ಮಂತ್ರವೂ ಇವನದ್ದೆ ಕಾಣ್ಕೆ. ಇವನ ವಂಶದಲ್ಲಿ ಬಂದ ಹಲವರು ವೇದಮಂತ್ರಗಳ ಋಷಿಗಳಾಗಿದ್ದಾರೆ. ಇವನು ಗೋತ್ರ ಪ್ರವರ್ತಕನಾದ ಋಷಿಯೂ ಹೌದು.

ಬ್ರಾಹ್ಮಣರಿಗೆ ಸಹಜವಾದ ಮುನಿಜೀವನವನ್ನು ಅವನು ನಡೆಸುತ್ತಿದ್ದನಾದರೂ ಬೇಗನೆ ಸಿಟ್ಟಿಗೇಳುವ ಸ್ವಭಾವ ಮಾತ್ರ ಅವನಿಂದ ಮರೆಯಾಗಿರಲಿಲ್ಲ. ಮೇಲಾಗಿ, ಜೋರು-ಜಂಭಗಳೂ ಅವನಲ್ಲಿ ಮನೆಮಾಡಿದ್ದುವು. ಏನಾದರೂ ಕೆಲಸವನ್ನು ಮಾಡಿಯೇ ತೀರುತ್ತೇನೆಂಬ ಹಟವೂ ಅವನದ್ದೇ.

ಭರತರೆಂಬ ಜನರಿಗೆ ಇವನೇ ಪುರೋಹಿತ. ಈ ಭರತರೆಂಬ ಜನರು ಗಂಗಾನದಿ-ಯಮುನಾನದಿಗಳ ನಡುವಣ ಪ್ರದೇಶದಲ್ಲೆಲ್ಲ ಹರಡಿಕೊಂಡಿದ್ದರು ; ಈ ನದಿಗಳ ಆಚೆಗೂ ಅವರ ವಸತಿಯಿದ್ದಿತು. ಈ ಜನರಲ್ಲಿ ಕ್ಷತ್ರಿಯರೇ ಬಹುಮಂದಿ ; ಗಂಡಸರು ಹೆಂಗಸರೆಲ್ಲ ವೀರರೇ, ಕದನದಲ್ಲಿ ಪಾಲ್ಗೊಳ್ಳಲು ಯಾರೂ ಅಂಜುತ್ತಿರಲಿಲ್ಲ. ಹೀಗಿದ್ದುದರಿಂದ ಅವರು ಮತ್ತೆ ಮತ್ತೆ ನೆರೆರಾಜ್ಯಗಳನ್ನು ಮುತ್ತಿ ಅಲ್ಲಿನವರೊಂದಿಗೆ ಕಾದು, ಅವರನ್ನು ಗೆದ್ದು ಹಿಂದಿರುಗಿ ಬರುತ್ತಿದ್ದರು. ಕೆಲವೊಮ್ಮೆ ನೆರೆಹೊರೆಯ ಅರಸರೇ ಇವರ ಮೇಲೆ ಬಿದ್ದು ಹಗರಣ ನಡೆಸುತ್ತಿದ್ದರು.

ಒಮ್ಮೆ ಏನಾಯಿತೆಂದರೆ, ನೆರೆಯ ಬೀಡಿನಲ್ಲಿದ್ದ ಕೆಲವರು ಶೂರರು, ಸಮರ ಕುತೂಹಲಿಗಳು ಇದ್ದಕ್ಕಿದ್ದಂತೆ ಭರತರನ್ನು ಮುತ್ತಿದರು ; ಅವರ ಪಾಳೆಯಕ್ಕೆ ನುಗ್ಗಿ, ಅವರಲ್ಲಿದ್ದುದನ್ನೆಲ್ಲ ಕೊಂಡೊಯ್ದರು. ಇದರಿಂದ ರೊಚ್ಚಿಗೆದ್ದ ಭರತರು ಸರಿಯಾದ ಸೇನೆಯನ್ನು ಸಿದ್ಧಪಡಿಸಿಕೊಂಡು ಇವರ ಮೇಲೆ ದಂಡೆತ್ತಿ ಹೋದರು. ಅವರನ್ನು ಸದೆಬಡೆದು, ಅವರು ಕೊಂಡೊಯ್ದಿದ್ದುದನ್ನೆಲ್ಲ ವಶಪಡಿಸಿಕೊಂಡು, ಅವರ ಭಂಡಾರವನ್ನೂ ಲೂಟಿಮಾಡಿ ಹಿಂದಕ್ಕೆ ಬಂದರು. ಇವರೊಂದಿಗೆ ಪುರೋಹಿತನಾದ ವಿಶ್ವಾಮಿತ್ರರೂ ಅಲ್ಲಿಗೆ ಹೋಗಿದ್ದನು.

ಕಾದಾಟ ಮುಗಿದ ಮೇಲೆ ಸೇನೆಯವರೆಲ್ಲ ಭರತರ ನಾಡಿಗೆ ಹಿಂದಿರುಗಲು ಗಂಗಾನದಿಯನ್ನು ದಾಟಿ ಹೊರಟರು. ವಿಶ್ವಾಮಿತ್ರನು ಅವರೊಂದಿಗ ಹಿಂದಿರುಗದೆ ಗಂಗೆಯ ದಂಡೆಯ ಮೇಲೆ ಕೊಂಚಹೊತ್ತು ವಿಶ್ರಮಿಸಿಕೊಳ್ಳುತ್ತ ಕುಳಿತ. ಅವನದೊಂದು ಎತ್ತಿನ ಬಂಡಿಯೂ ಇದ್ದಿತು ; ಬಂಡಿ ಹೊಡೆಯುವವನೂ ಇದ್ದನು. ಸೇನೆಯವರು ತಮ್ಮ ಪುರೋಹಿತನೆಂದು ಅನೇಕ ಪದಾರ್ಥಗಳನ್ನೂ ಅವನಿಗೆ ಕೊಟ್ಟಿದ್ದರು. ಬಂಡಿಯ ತುಂಬ ಸಾಮಾನು ತುಂಬಿದ್ದಿತು. ಇವನು ವಿಶ್ರಮಿಸಿಕೊಂಡಾದ ಮೇಲೆ, ಬಂಡಿ ಹೂಡಿ ನದಿಯನ್ನು ದಾಟಲು ಸಿದ್ಧನಾದನು.

ಅದೇ ವೇಳೆಗೆ ಆ ಪ್ರದೇಶದವರೇ ಆದ ಕೆಲವರು ವರ್ತಕರು ನದಿಯನ್ನು ದಾಟಿ ಭರತರ ನಾಡಿಗೇ ಹೊರಡಲು ಬಂದರು. ವಿಶ್ವಾಮಿತ್ರನ ಪರಿಚಯ ಅವರಿಗಿದ್ದಿತು. ಎಲ್ಲರೂ ಮಾತನಾಡಿಕೊಂಡೇ ನದಿಯನ್ನು ದಾಟಿದರು. ವರ್ತಕರು ವ್ಯಾಪಾರಕ್ಕೆಂದು ಬೇಕಾದಷ್ಟು ಸರಕನ್ನು ತಂತಮ್ಮ ಬಂಡಿಗಳಲ್ಲಿ ಹೇರಿಕೊಂಡು ಬಂದಿದ್ದರು. ಅವರ ಬಂಡಿಗಳಿಗೆ ಹೂಡಿದ ಎತ್ತುಗಳು ಬಲು ಬಲಶಾಲಿಗಳು ; ಹಾಗೆಂದೇ ಅವರಿಗೆ ಮಹಾವೃಷಭರೆಂಬ ಹೆಸರಿದ್ದಿತು. ಭಾರಿ ಎತ್ತುಗಳನ್ನು ಸಾಕಿಕೊಳ್ಳುವುದರಲ್ಲಿ ನಿಪುಣರು, ತಮ್ಮ

ಎತ್ತುಗಳ ಮೇಲೆ ಅವರಿಗೆ ಪ್ರೀತಿಯಿದ್ದುದು ಸಹಜವೇ ; ಅವುಗಳನ್ನು ಕುರಿತಂತೆ ಹೆಮ್ಮೆಯೂ ಇದ್ದಿತೆನ್ನಿ. ಈ ಎತ್ತುಗಳಿಗೆ ಸರಿಸಾಟಿಯಾದ ಎತ್ತುಗಳು ಆ ವಲಯದಲ್ಲೆಲ್ಲೂ ಇರವೆಂಬುದು ಅವರ ಹಟ.

ವಿಶ್ವಾಮಿತ್ರನ ಎತ್ತುಗಳೇನೋ ಅವುಗಳಂತೆ ಬಲಿಷ್ಠವಾಗಿರಲಿಲ್ಲ. ಕೆಂಪುಬಣ್ಣದ ಆ ಎರಡು ಎತ್ತುಗಳು ಚುರುಕಾಗಿದ್ದವು ದಿಟ ; ಆದರೆ ಬಲುಭಾರವನ್ನು ಹೊತ್ತು ಅತಿವೇಗದಿಂದ ಓಡುವಂತಿರಲಿಲ್ಲ. ವಿಶ್ವಾಮಿತ್ರನಿಗಿದ್ದ ಉತ್ಸಾಹ ಅವಕ್ಕಿರಲಿಲ್ಲ. ಆದರೂ ನದಿಯನ್ನೇನೋ ತೊಂದರೆಯಿಲ್ಲದೆ ದಾಟಿದವು. ಆಚೆಯ ದಂಡೆಯ ಮೇಲೆ ವಿಶ್ವಾಮಿತ್ರನೂ, ಮಹಾವೃಷಭರೆನಿಸಿಕೊಂಡ ಆ ವಣಿಕ್ ಜನರೂ ಬಂದಿಳಿದರು. ಅವರೆಲ್ಲ ಬಂದಿಳಿದ ಎಡೆಯಲ್ಲಿ, ತುಂಬ ಕಡಿದಾದ ಏರಿಯಿದ್ದಿತು. ಅದನ್ನೇರಿ ಹೋಗುವುದು ಮನುಷ್ಯರಿಗೇ ಕಷ್ಟವೆನಿಸುತ್ತಿದ್ದಿತು ; ಇನ್ನು ಹೊರೆ ಹೊತ್ತುಕೊಂಡ ಎತ್ತಿನ ಬಂಡಿಗಳನ್ನು ನಡೆಸಿಕೊಂಡು ಹೋಗುವುದು ಹೇಗೆ ?

ವರ್ತಕರು ವಿಶ್ವಾಮಿತ್ರನಿಗೆ — "ಸ್ವಾಮಿ, ಈ ಕಡೆಯಿಂದ ಏರಿಯನ್ನು ಹತ್ತಿಹೋಗುವುದು ಕಷ್ಟ. ಇಲ್ಲಿಂದ ಸ್ವಲ್ಪದೂರ ನದಿಯ ಪಕ್ಕದಲ್ಲೇ ಹೋಗೋಣ ; ಅಲ್ಲಿ ಬಂಡಿಯ ದಾರಿ ಸುಲಭವಾಗುತ್ತದೆ ; ದಿಣ್ಣೆ ಇಷ್ಟು ಕಡಿದಾಗಿಲ್ಲ." ಎಂದು ಸಲಹೆ ಮಾಡಿದರು. ವಿಶ್ವಾಮಿತ್ರನಿಗೆ ಈ ಸೂಚನೆ ಹಿಡಿಸಲಿಲ್ಲ. ಯಾವುದೂ ಅವನಿಗೆ ಕಷ್ಟವೆನಿಸುತ್ತಿರಲಿಲ್ಲ. ಮತ್ತೆ, ಯಾರಾದರೂ ಏನನ್ನಾದರೂ ಸಲಹೆ ಮಾಡಿದರೂ ಅವನು ಸಹಿಸುತ್ತಿರಲಿಲ್ಲ. "ನನ್ನ ಎತ್ತುಗಳನ್ನು ಏನೆಂದು ತಿಳಿದಿರಿ ? ಎಂಥ ಏರಿಯನ್ನಾದರೂ ಅವು ಹತ್ತಬಲ್ಲವು. ಬಳಸುದಾರಿಯನ್ನು ಹಿಡಿಯಬೇಕಾದ ಅಗತ್ಯವಾದರೂ ಏನು ? ನಿಮ್ಮ ಬಂಡಿಗಳನ್ನು ಬೇಕಾದರೆ ಹಾಗೆ ಒಯ್ಯಿರಿ. ನಾನಂತೂ ಇಲ್ಲಿಯೇ ಹತ್ತುವವನು" ಎಂದು ಹೇಳಿದನು.

ವರ್ತಕರಿಗೆ ಈ ಹಟ ಅರ್ಥವಾಗಲಿಲ್ಲ. ಗಾಡಿಯು ಹೋಗಬಹುದಾದ ದಾರಿಯೇ ಇಲ್ಲ ; ಅಷ್ಟು ಕಡಿದಾಗಿದೆ. ಅಲ್ಲಿಗೆ ಎತ್ತುಗಳನ್ನಾದರೂ ತೊಡಗಿಸುವುದಾಗದು. ಮನುಷ್ಯನಿಗೆ ಬುದ್ಧಿಯಿಲ್ಲವೆಂದರೆ ಎತ್ತುಗಳು ಅರಿಯವೆ ? ಎಷ್ಟು ಬಡಿದರೂ ಮೊಂಡು ಬೀಳುತ್ತವೆ. ಯಾವ ಭಂಡ ಧೈರ್ಯ ಈ ಋಷಿಯದು ? ವರ್ತಕರು "ಸ್ವಾಮಿ, ಸ್ವಲ್ಪ ಆಲೋಚನೆ ಮಾಡಿ. ಬಂಡಿಯಿರುವುದು ಸಮನಾದ ದಾರಿಯಲ್ಲಿ ಸಾಗಿಹೋಗಲು ; ಸ್ವಲ್ಪ ಏರುಪೇರಿದ್ದರೆ ತಡೆದೀತು ಎನ್ನಿ . ತೀರ ಕಡಿದಾದ ಬಂಡೆಯನ್ನೇರಿ ಮುಗಿಲಮಟ್ಟಕ್ಕೆ ಹೋಗುವ ಬಂಡಿ ಯಾವುದು ? ಎತ್ತುಗಳು ಬಲಿಷ್ಠವೇ ಇದ್ದಾವು. ಆದರೆ ಅವುಗಳ ಸಾಹಸಕ್ಕೂ ಮಿತಿಯಿಲ್ಲವೆ ? ಈ ಏರಿಯನ್ನು ಖಂಡಿತ ಅವು ಹತ್ತಲಾರವು. ಎತ್ತುಗಳೂ ಬಂಡಿಯೂ ಉಳಿಯಬೇಕೆಂಬ ಆಸೆಯಿದ್ದರೆ ಈ ದುಸ್ಸಾಹಸವನ್ನು ಕೈಬಿಡಿ !" ಎಂದು ತಿಳಿಯಹೇಳಿದರು.

ವಿಶ್ವಾಮಿತ್ರನಾದರೊ ತನ್ನ ಹಟವನ್ನು ಬಿಡಲಿಲ್ಲ. "ನನ್ನ ಬಂಡಿಯ ಯೋಗ್ಯತೆ ನನಗೆ ತಿಳಿಯದೆ ? ನನ್ನ ಎತ್ತುಗಳ ಸಾಮರ್ಥ್ಯ ನನಗೆ ಗೊತ್ತು. ಬಂಡಿಯ ಮೇಲೆ ಈಗಿರುವ ಹೊರೆಯಲ್ಲದೆ, ಇನ್ನಷ್ಟು ಚಪ್ಪಡಿಕಲ್ಲುಗಳನ್ನೇ ತುಂಬಿ. ಎತ್ತುಗಳು ಅವನ್ನೆಲ್ಲ ತಾಳಿಕೊಂಡು ಬಂಡಿಯನ್ನು ಈ ಏರಿಯ ಮೇಲೆ ಒಯ್ಯದಿದ್ದರೆ ನೋಡಿ !" ಎಂದು ಸವಾಲನ್ನೇ ಅವರ ಮುಖಕ್ಕೆ ಎಸೆದ. ವರ್ತಕರಿಗೂ ಇದು ಮೋಜೆನಿಸಿತು. ಇವನ ಜಂಬವನ್ನು ಕರಗಿಸಬೇಕೆಂಬ ಮನಸ್ಸೂ ಅವರಿಗಾಯಿತು. ಇವನ ತಿಳಿಗೇಡಿತನಕ್ಕೆ ತಕ್ಕ ಶಾಸ್ತಿ ಮಾಡದಿದ್ದರೆ ಹೇಗೆ ? ವರ್ತಕರೆಲ್ಲ ಕೂಡಿಕೊಂಡು "ಆಗಲಿ ಸ್ವಾಮಿ, ನಿಮ್ಮ ಬಂಡಿಯನ್ನು ಏರಿಯ ಮೇಲೆ ಓಡಿಸಿ, ಅದು ಓಡಿ ಏರಿಯನ್ನು ಹತ್ತಿದರೆ, ನಮ್ಮ ಸರಕನ್ನು ನಿಮಗೆ ಒಪ್ಪಿಸಿಬಿಡುತ್ತೇವೆ. ಹತ್ತಲಾರದೆ ಕೆಳಗೆ ಜಾರಿದರೆ, ನಿಮ್ಮ ಬಂಡಿಯ ಮೇಲಿರುವ ಸರಕನ್ನೆಲ್ಲ ನಮಗೆ ಕೊಟ್ಟು ಬಿಡಬೇಕು. ಆಯಿತೋ ?" ಎಂದು ಪಣವನ್ನು ಹೂಡಿದರು.

ಮೊದಲೇ ಹಟಗಾರನಾದ ಋಷಿಯ ಮನಸ್ಸು ಈಗ ಇನ್ನಷ್ಟು ಗಟ್ಟಿಯಾಯಿತು. 'ಒಪ್ಪಿದೆ' ಎಂದವನೆ, ಗಾಡಿಯನ್ನು ಹೂಡಿದ. ಗಾಡಿಯನ್ನು ನಡೆಸುವವನಿಗೆ ಅಪ್ಪಣೆ ಮಾಡಿದ ; ಎರಡೂ ಎತ್ತುಗಳ ಬೆನ್ನ ಮೇಲೆ ತನ್ನ ಕೈಗಳನ್ನು ತಟ್ಟಿ ಚಪ್ಪರಿಸಿದ. ಎತ್ತುಗಳು ಚುರುಕಾಗಿದ್ದುವು ತಾನೆ ? ಬಂಡಿಯನ್ನೆಳೆದುಕೊಂಡು ಹೊರಟೇಬಿಟ್ಟುವು. ಏರಿಯ ಬುಡಕ್ಕೂ ಬಂದವು. ಅಲ್ಲಿಂದ ಮುಂದೆ ದಾರಿ ಗೋಡೆಯನ್ನು ಹತ್ತಿದಂತೆಯೇ, ಎತ್ತುಗಳು ನಿಂತವು ; ಗಾಡಿಯನ್ನು ನಡೆಸುವವನೂ ಇನ್ನು ಮುಂದೆ ಹೇಗೆಂದು ಅವಾಕ್ಕಾದ. ವರ್ತಕರು ಕಿಲಕಿಲನೆ ನಗುತ್ತ ಚಪ್ಪಾಳೆ ತಟ್ಟಿ ''ಹೋ' ಎಂದರು. ಪಣವನ್ನು ಕಳೆದುಕೊಂಡು ಸೋತ, ಸಪ್ಪೆಮುಖದ ಋಷಿಯನ್ನು ಕಾಣುವೆವೆಂದು ಖಚಿತಗೊಂಡರು.

ವಿಶ್ವಾಮಿತ್ರನು ಮಾತ್ರ ಗಂಭೀರವಾದ ಮುಖಮುದ್ರೆಯಿಂದ ತನ್ನ ಎತ್ತುಗಳನ್ನೇ ಎವೆಯಿಕ್ಕದೆ ದಿಟ್ಟಿಸುತ್ತಿದ್ದ. ಅವನ ಒಡಲಲ್ಲಿ ಕಳವಳಕ್ಕಿಂತ ಹೆಚ್ಚಾಗಿ ನಿರ್ಧಾರ ಒಡಮೂಡಿ ಬಂದಿತು. ತನಗೆ ಅಸಾಧ್ಯವಾದುದು ಯಾವುದೂ ಇಲ್ಲವೆಂದೇ ನಂಬಿದ್ದವನು ಅವನು. ಋಷಿಯು ಏನೆಂದರೂ ಕ್ರಾಂತದರ್ಶಿಯಲ್ಲವೆ ? ತನ್ನಿಂದ ಇದು ಆದೀತೆಂದು ಕಂಡುಕೊಂಡಿದ್ದವನು ಅವನು. ಅವನ ಕಾಣ್ಕೆ ಹುಸಿಯಾಗುವುದು ಹೇಗೆ ? ತನ್ನ ಮಾತು ಸಟೆಯಾದೀತೆಂಬುದು ಅವನಿಗೆ ಒಂದಿಷ್ಟೂ ಎಣಿಕೆಯಿಲ್ಲ. ಅವನಲ್ಲಿ ಆತ್ಮವಿಶ್ವಾಸವಿದ್ದಷ್ಟೇ ಸತ್ಯಸಂಕಲ್ಪವೂ ಇದ್ದಿತು. ಆದರೆ ಪ್ರಕೃತಿಯ ನಿಯಮಗಳನ್ನು ಮೀರಿ ಬಂಡಿಯಂಥ ಅಚೇತನ ವಸ್ತುವಾಗಲಿ, ಎತ್ತುಗಳಂಥ ತಾಮಸಜೀವಿಗಳಾಗಲಿ ಮುನ್ನುಗ್ಗುವುದಾದೀತೆ ? ಅವು ತಂತಮ್ಮ ಯೋಗ್ಯತೆಯನ್ನು ದಾಟಿ ಏನನ್ನು ತಾನೆ ಮಾಡಬಲ್ಲವು ?

ಆಗ ಋಷಿಯ ಎದುರಿಗೆ ಎರಡು ಸಾಮಮಂತ್ರಗಳು ತೋರಿಕೊಂಡುವು. ಸಾಮಗಳ ಬಲ ಇಷ್ಟೆಂದು ಹೇಳಲಾಗದು. ಋಷಿಯ

ಅಂತಃಕರಣವೇ ಮೈದಳೆದು ನಿಂತಂತೆ ಆವೆರಡು ಸಾಮಗಳು ಋಷಿಯ ಸಾಮಾನ್ಯ ಚೇತನವನ್ನು ಮೆಟ್ಟಿನಿಂತವು. ಆ ಸಮಯದಲ್ಲಿ ಋಷಿ ಮನುಷ್ಯನೆಲೆಯಲ್ಲಿರಲಿಲ್ಲ; ಇಡೀ ವಿಶ್ವದೊಂದಿಗೆ ಬೆರೆತುಹೋದ ಚಿಚ್ಛಕ್ತಿ ಯಾಗಿಬಿಟ್ಟಿದ್ದ. ಆವೆರಡೂ ಸಾಮಗಳು ಸಸ್ವರವಾಗಿ ಅವನ ಬಾಯಿಂದ ತಾವೇ ತಾವಾಗಿ ಹೊರಟವು. ಸಾಮಗಾನದ ಕ್ರಮದಲ್ಲಿ ಇವೆರಡು ಮಂತ್ರ ಗಳು ಅವನಿಂದ ಹೊರಹೊಮ್ಮಿದೊಡನೆ ಎತ್ತುಗಳು ನಿಮಿರಿನಿಂತವು ; ಅವುಗಳ ಮೈಯಲ್ಲಿ ಏನೋ ಅದ್ಭುತವಾದ ಉತ್ಸಾಹ ಮೂಡಿಕೊಂಡಿತು. ದಡದಡನೆ ಏರಿಯನ್ನೇರಿ ಹೊರಟೇಬಿಟ್ಟವು. ಜೋಳ, ರಾಗಿ, ಅಕ್ಕಿ ಮೊದಲಾದವುಗಳಿಂದ ತುಂಬಿದ್ದ ಬಂಡಿಯೂ ಅವುಗಳ ಹಿಂದೆ ದೌಡಾಯಿಸಿತು. ಬಂಡಿ ಹೊಡೆಯುವವನು ಕಕ್ಕಾಬಿಕ್ಕಿಯಾಗಿ ಕೂತುಬಿಟ್ಟ.

ಋಷಿಯ ಬಾಯಿಂದ ಸಾಮಮಂತ್ರಗಳು ಹೊರಬರುತ್ತಿದ್ದಂತೆ, ಅಲೌಕಿಕವಾದ ವಾತಾವರಣವೊಂದು ಅಲ್ಲಿಸಿದ್ಧವಾಗಿಬಿಟ್ಟಿತು. ಗಿಡಮರ ಗಳೆಲ್ಲ ನೀರವವಾದುವು ; ತಿಳಿಗಾಳಿಯೂ ಬೀಸದೆ ತಣ್ಣಗಾಯಿತು. ಪರಿಸರ ವೆಲ್ಲ ಮಂತ್ರಮುಗ್ಧವಾಯಿತು.

ಎರಡನೆಯ ಮಂತ್ರವನ್ನು ಋಷಿ ಹಾಡಿ ಮುಗಿಸುವಷ್ಟರಲ್ಲಿ ಎತ್ತು ಗಳು ಬಂಡಿಯನ್ನೆಳೆದುಕೊಂಡು ಹೋಗಿ ಏರಿಯ ಮೇಲ್ತುದಿಯನ್ನು ಮುಟ್ಟಿದ್ದವು ! ವರ್ತಕರು ತಮ್ಮ ಕಣ್ಣುಗಳನ್ನೇ ತಾವು ನಂಬಲಾರದೇ ಹೋದರು ; ಹೀಗೂ ಉಂಟೆ ಎಂದು ನಿಬ್ಬೆರಗಾದರು. ಋಷಿಯ ಕಡೆ ತಮ್ಮ ದೃಷ್ಟಿಯನ್ನು ಹಾಯಿಸಿದಾಗ, ಕಲ್ಲುಗೊಂಬೆಯಂತೆ ಇಲ್ಲಿನ ಪರಿವೆಯೆ ಇಲ್ಲದೆ ಸೆಟೆದು ನಿಂತ ಋಷಿಯನ್ನು ಕಂಡರು. ಅವನ ಬಾಯಿಂದ ಹೊರಹಾಯುತ್ತಿದ್ದ ಮಂತ್ರಗಳು ಮುಗಿದಾಗ, ಋಷಿಯು ಮತ್ತೆ ಈ ಲೋಕಕ್ಕೆ ಸರಿಯುವುದಾಯಿತು.

ವರ್ತಕರೆಲ್ಲ ಸಂಭ್ರಮದಿಂದ ಬಂದು ಋಷಿಯ ಕಾಲಿಗೆರಗಿದರು. ತಾವು ಪಣವನ್ನು ಸೋತು ಉದ್ಧಾರವಾದೆವೆಂದು ಅರಿಕೆ ಮಾಡಿಕೊಂಡರು.

ಋಷಿಯ ಗರಿಮೆ, ಮಂತ್ರದ ಮಹಿಮೆ ತಮಗೀಗ ಸಂಪೂರ್ಣವಾಗಿ ಅರಿವಿಗೆ ಬಂದಿತೆಂದು ನಿವೇದಿಸಿಕೊಂಡರು. ಪಣವಿಟ್ಟುಕೊಂಡಂತೆ, ತಮ್ಮ ಸರಕನ್ನೆಲ್ಲ ಋಷಿಗೆ ಒಪ್ಪಿಸಲು ಸಿದ್ಧರಾದರು. ಆದರೆ ಋಷಿಯು "ನಿಮ್ಮ ಸರಕನ್ನು ಕಟ್ಟಿಕೊಂಡು ನಾನೇನು ಮಾಡಲಿ ? ಅದೆಲ್ಲ ನಿಮ್ಮದಾಗಿಯೆ ಇರಲಿ. ತಪಸ್ಸಿನ ಶಕ್ತಿಯೊಂದಿದೆಯೆಂದೂ ಅದರೊಂದಿಗೆ ಆಟವಾಡಬಾರದೆಂದೂ ಅದನ್ನು ಗೌರವದಿಂದ ಕಾಣಬೇಕೆಂದೂ ನೀವು ಮನವರಿಕೆ ಮಾಡಿಕೊಂಡರೆ ಸಾಕು." ಎಂದು ಹೇಲಿ ಅವರನ್ನು ಕಳುಹಿಸಿಕೊಟ್ಟು, ತಾನೂ ಏರಿಯನ್ನೇರಿ ತನ್ನ ಎತ್ತುಗಳನ್ನು ಕೂಡಿಕೊಂಡನು. ಮುಂದಿನ ಪ್ರಯಾಣ ಸಾಗಿತು.

ಈ ಲೋಕದ ನಿಯಮಗಳೇ ನಿಯಮಗಳು ; ಅವುಗಳಾಚೆ ಏನೂ ಇರದು ಎಂದು ಖಚಿತ ಮಾಡಿಕೊಂಡಿದ್ದವರು ವರ್ತಕರು. ಪ್ರಕೃತಿಯ ಕಟ್ಟುಪಾಡು ಅವರನ್ನೂ ಕಟ್ಟಿಹಾಕಿದ್ದಿತು. ಹೊರಗೆ ಕಾಣುವ, ಎಲ್ಲರಿಗೂ ಸಹಜವಾದ ಭೌತಿಕ ಶಕ್ತಿಯಿರುವುದಷ್ಟೆ ದಿಟವೆಂದುಕೊಂಡಿದ್ದವರು ಅವರು. ಋಷಿಯು ತನ್ನ ತಪಸ್ಸಿನಿಂದ ಪಡೆದುಕೊಳ್ಳಬಹುದಾದ ಶಕ್ತಿಯ ನೆಲೆಯನ್ನು ಅವರು ಅರಿತಿರಲಿಲ್ಲ. ಋಷಿಯ ಕಾಣ್ಕೆಯೆನ್ನಬಹುದಾದ ಮಂತ್ರದ ಪ್ರಭಾವ ಎಷ್ಟೆಂಬುದಾಗಲಿ ಅವರು ತಿಳಿದಿರಲಿಲ್ಲ. ಈ ಪ್ರಸಂಗದಿಂದ ಅವರ ಒಳಕಣ್ಣು ತೆರೆಯಿತು, ಅಧ್ಯಾತ್ಮದತ್ತ ಒಲವು ಮೂಡಿತು. ಋಷಿಯ ಹಟಮಾರಿತನವನ್ನು ತಾವು ತಮ್ಮ ಲೌಕಿಕ ಅಳತೆಗೋಲಿನಿಂದ ಅಳೆಯಬಾರದೆಂಬುದು ತಿಳಿಯಿತು.

ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ (ರಿ.)

ಸದಸ್ಯರು :

ಶ್ರೀಮತಿ ರಮಾ ರಾಮಚಂದ್ರ ರಾವ್

ಶ್ರೀಮತಿ (ಡಾ) ಉಮಾ ಅನಿಲ್ ಕುಮಾರ

ಡಾ॥ ಸಾ. ರಾ. ಸುದರ್ಶನ

ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳು :

1. ಶ್ರೀ ರಾಘವೇಂದ್ರ ಸ್ವಾಮಿಗಳು (Rs. 40)
2. The Three Acharyas: Sankara, Ramanuja, Madhva (Rs. 35)
3. ದಂಡಿಯ ಅವಂತಿ ಸುಂದರೀ (Rs. 70)
4. The Teachings of the Buddha (Rs. 85)
5. The Temple : its significance (Rs. 100)
6. ಬೋಧಿಯ ಬೆಳಕಿನಲ್ಲಿ (Rs. 100)
7. Jainism in South India. (Rs. 85)
8. ಪುರಂದರದಾಸರು (Rs. 70)

ಪ್ರಕಟವಾಗಲಿರುವ ಪುಸ್ತಕಗಳು :

1. ತಿರುಮಲ ತಿರುಪತಿ ದೇವರು
2. ಪೂರ್ಣಪ್ರಜ್ಞಪ್ರಶಸ್ತಿ
3. Vyasatattvajna's Manasa-dhyanapaddhati
7. The Hill Shrine of Tirumala

ಪ್ರೊ. ಸಾ. ಕೃ. ರಾಮಚಂದ್ರರಾವ್ ಸ್ಮಾರಕ ನಿಧಿ

ಪ್ರೊ. ಸಾ. ಕೃ. ರಾಮಚಂದ್ರರಾಯರು ಕಾಲವಾದ ಕೆಲವು ತಿಂಗಳನಂತರ ಅವರ ಕುಟುಂಬದವರು ಅವರ ಹೆಸರಿನಲ್ಲಿ ಒಂದು ಸ್ಮಾರಕ ನಿಧಿಯನ್ನು ಸ್ಥಾಪಿಸಿದರು.

ಈ ನಿಧಿಯ ಉದ್ದೇಶಗಳು ಹೀಗಿವೆ :

★ ಪ್ರೊ. ರಾಮಚಂದ್ರರಾಯರು ಕನ್ನಡ ಮತ್ತು ಅಂಗ್ಲ ಭಾಷೆಗಳಲ್ಲಿ ಬರೆದ ಹಲವಾರು ಪುಸ್ತಕಗಳನ್ನು ಹಾಗೂ ಲೇಖನಗಳನ್ನು ಸಂಗ್ರಹಿಸುವುದು.

★ ಇವುಗಳಲ್ಲಿ ಪ್ರಸ್ತುತ ದೊರೆಯದ ಪುಸ್ತಕಗಳನ್ನು ಪುನರ್ಮುದ್ರಣ ಮಾಡುವುದು.

★ ಅವರು ವಿವಿಧ ವಿಷಯಗಳ ಬಗ್ಗೆ ದಿನಪತ್ರಿಕೆಗಳಲ್ಲಿ ಹಾಗೂ ಮಾಸಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದಿದ್ದರು. ಇವುಗಳನ್ನು ಪುಸ್ತಕರೂಪದಲ್ಲಿ ತರುವುದು.

★ ಅವರು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಮಾಡಿದ ಉಪನ್ಯಾಸಗಳನ್ನು ಧ್ವನಿಸುರುಳಿ ರೂಪದಲ್ಲಿ ಹೊರತರುವುದು. ಈಗಾಗಲೇ 25ಕ್ಕಿಂತ ಹೆಚ್ಚು ಧ್ವನಿಸುರುಳಿಗಳನ್ನು ಹೊರತರಲಾಗಿದೆ.

★ ರಾಯರು ಅವರ ಮನೆಯಲ್ಲಿ 3-4 ದಶಕಗಳಿಂದ ಭಗವದ್ಗೀತೆ, ಬ್ರಹ್ಮಸೂತ್ರಗಳು, ಉಪನಿಷತ್ತುಗಳು, ತ್ರಿಪುರಾ ರಹಸ್ಯ, ಶಿಲ್ಪಶಾಸ್ತ್ರ ಮುಂತಾದ ವಿಷಯಗಳನ್ನು ಕುರಿತು ಪ್ರವಚನಗಳನ್ನು ಮಾಡುತ್ತಿದ್ದರು. ಇದರ ಧ್ವನಿಸುರುಳಿಗಳನ್ನು ತಯಾರಿಸುವುದು. ಈಗಾಗಲೇ ಬ್ರಹ್ಮಸೂತ್ರ, ಗೀತಾ ವಿವೃತ್ತಿ, ಶಿವಸೂತ್ರ ಹಾಗೂ ಮಾಂಡೂಕ್ಯೋಪನಿಷತ್‌ಗಳ ಧ್ವನಿಸುರುಳಿಗಳು ತಯಾರಾಗಿವೆ.

★ ಅವರು ರಚಿಸಿದ ಕಲಾಕೃತಿಗಳ, ರೇಖಾ ಮತ್ತು ವರ್ಣಚಿತ್ರಗಳ ಸಂರಕ್ಷಣೆ ಮತ್ತು ಪ್ರದರ್ಶನ ಮಾಡುವುದು. 2007ರಲ್ಲಿ ಅವರ ಕಲಾವೈಭವದ ಪ್ರದರ್ಶನ ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ಏರ್ಪಡಿಸಲಾಗಿತ್ತು.

ಪ್ರೊ. ರಾಮಚಂದ್ರರಾಯರ ಬರಹಗಳನ್ನು ಪ್ರಕಟಿಸುವ ಉದ್ದೇಶದಿಂದ ನಾವು 'ಸುರಮಾ ಪ್ರಕಾಶನ' ಎಂಬ ಹೆಸರಿನಲ್ಲಿ ಒಂದು ಪ್ರಕಟನಾ ವಿಭಾಗವನ್ನು ಸ್ಥಾಪಿಸಿ ರಾಯರ ಒಂಭತ್ತು ಪುಸ್ತಕಗಳನ್ನು ಹೊರತಂದಿದ್ದೇವೆ.

ISBN 81-906740-8-0

9788190674089

Price :
Rs. 60=00